# ಯುಗರಶ್ಮಿ

ಇಸ್ಲಾಮ್ ಹಾಗೂ ಜಿಹಾದ್

ದೈವಚಿಂತನೆ

ಭೂಕಂಪಗಳು — ಅದ್ಭುತ ದೃಷ್ಟಾಂತ

ಯೇಸು ಕ್ರಿಸ್ತರು ಮೃತರಾದುದು ಎಲ್ಲಿ?

ತ್ರೈಮಾಸಿಕ
ಏಪ್ರಿಲ್-ಜೂನ್ 1975
...ಾದತ್-ಇಹ್‌ಸಾನ್
1354
ಬೆಲೆ: ರೂ. ಒಂದು

## ಪವಿತ್ರ ಖುರ್ ಆನಿನಿಂದ

ಪರಮ ದಯಾಳುವೂ ಕೃಪಾನಿಧಿಯೂ ಆದ ಅಲ್ಲಾಹುವಿನ ನಾಮದೊ
ದಿಗೆ ಆರಂಭಿಸುತ್ತೇನೆ. ಸಕಲ ಸ್ತುತಿ ಸ್ತೋತ್ರಗಳು ಸರ್ವಲೋಕಗಳ ಪ
ಪಾಲಕನಾದ ಅಲ್ಲಾಹುವಿಗೆ ಸಲ್ಲುವುವು. ಅಪರಿಮಿತ ದಯಾಮಯ
ಕರುಣಾಮೂರ್ತಿ, ವಿಧಿ ದಿನದ ಅಧಿಪತಿ, ನಿನ್ನನ್ನು ಮಾತ್ರ ನಾವು ಆರಾ
ಸುತ್ತೇವೆ; ನಿನ್ನೊಡನೆ ಮಾತ್ರವೇ ನಾವು ಸಹಾಯವನ್ನು ಯಾಚಿಸುತ್ತೇ
ನೀನು ನಮ್ಮನ್ನು ಸನ್ಮಾರ್ಗದಲ್ಲಿ ನಡೆಸು; ನೀನು ಅನುಗ್ರಹಿಸಿದ
ಮಾರ್ಗದಲ್ಲಿ—ನಿನ್ನ ಕ್ರೋಧಕ್ಕೆ ಗುರಿಯಾಗದವರ ಮತ್ತು ಮಾರ್ಗಭ್ರ
ರಾಗದವರ ಮಾರ್ಗದಲ್ಲಿ.

(ಪ್ರಥಮ. ಅಧ್ಯಾ

# ಯುಗರಶ್ಮಿ

ತ್ರೈಮಾಸಿಕ

23/1008, ಅನ್ಸಾರಿ ರೋಡ್,

ಬಂದರ್, ಮಂಗಳೂರು—575001.

ಸಂಪುಟ: 1]    ಎಪ್ರಿಲ್—ಜೂನ್ 1975 / ಶಹಾದತ್—ಇಹ್‌ಸಾನ್ 1354    [ಸಂಚಿಕೆ: 1

ಸಂಪಾದಕ: **ಮುಹಮ್ಮದ್ ಯೂಸುಫ್**

ಬಿಡಿ ಪ್ರತಿ: **ಒಂದು ರೂಪಾಯಿ**    ವಾರ್ಷಿಕ ಚಂದಾ: **ನಾಲ್ಕು ರೂಪಾಯಿಗಳು**

## ವಿಷಯ ಸೂಚಿಕೆ:

ಸಂಪಾದಕೀಯ

ಪದ್ಯ

ಹಝ್ರತ್ ಅಹ್ಮದರ ಉಪದೇಶಗಳು

ಮುಹಮ್ಮದ್ ಪೈಗಂಬರರ ನುಡಿಗಳು

ಸಂದೇಶಗಳು

ಇಸ್ಲಾಮ್ ಹಾಗೂ ಜಿಹಾದ್

ಇಸ್ಲಾಂ ಸಮಾಧಾನದ ಮತ

ದೈವ ಚಿಂತನೆ

ಸರ್ವಮಾನವ ಕುಲಕ್ಕಾಗಿ ಇಸ್ಲಾಂ ಮತ

ಭೂಕಂಪ— ಅದ್ಭುತ ದೃಷ್ಟಾಂತ

ಪುಸ್ತಕ ವಿಭಾಗ—ಯೇಸು ಕ್ರಿಸ್ತರು ಮರಣವಾದುದು ಎಲ್ಲಿ ?

بسم الله الرحمن الرحيم

نحمده ونصلي على رسوله الكريم

# ಯುಗರಶ್ಮಿ

ಸಂಪುಟ: 1 | ಎಪ್ರಿಲ್ 1975 / ಶಹಾದತ್ 1354 | ಸಂಚಿಕೆ: 1

ಅಹ್ಮದಿಯಾ ಸಂದೇಶವನ್ನು ಕರ್ನಾಟಕದ ಜನತೆಗೆ ತಲಪಿಸುವ ಸದುದ್ದೇಶದಿಂದ ನಾವು ಕನ್ನಡದಲ್ಲಿ ಒಂದು ತ್ರೈಮಾಸಿಕವನ್ನು ಪ್ರಕಟಿಸುವ ಈ ಸಾಹಸಕ್ಕಿಳಿದಿದ್ದೇವೆ. ಹಲವು ವರ್ಷಗಳ ನಮ್ಮ ಕನಸು ನೆನಸಾದುದಕ್ಕೆ ಪ್ರಥಮವಾಗಿ ನಾವು ಪರಮಾತ್ಮನನ್ನು ವಂದಿಸುತ್ತೇವೆ.

ಇಸ್ಲಾಮಿನ ಕುರಿತು ಜನಸಾಮಾನ್ಯರಲ್ಲಿ ಬಹಳ ತಪ್ಪಾಭಿಪ್ರಾಯಗಳು ಪ್ರಚಾರದಲ್ಲಿವೆ. ಮುಸ್ಲಿಮರೆಂದು ಹೇಳಿಕೊಳ್ಳುವವರ ಸ್ವಾರ್ಥಪರವಾದ ಆಚಾರವಿಚಾರಗಳೂ ಮೂಢನಂಬಿಕೆಗಳೂ ಅದಕ್ಕೆ ಒಂದು ಕಾರಣವಾದರೆ ಇಸ್ಲಾಮಿನ ಶತ್ರುಗಳ ಕುಪ್ರಚಾರಗಳು ಮತ್ತೊಂದು ಕಾರಣ. ಯಥಾರ್ಥ ಇಸ್ಲಾಂ ಶಾಂತಿ ಮತ್ತು ಸಮಾಧಾನದ ಮತವಾಗಿದೆ. ಅದರ ತತ್ವಗಳು ವಿವೇಕಯುತವಾಗಿದ್ದು ಸೌಂದರ್ಯದಿಂದ ಕೂಡಿವೆ. ಅದು ಯಾರನ್ನೂ ಬಲಾತ್ಕರಿಸುವುದಿಲ್ಲ. ಸನ್ಯಾಸತ್ವ ಅಥವಾ ಬ್ರಹ್ಮಚರ್ಯದಿಂದ ಕೂಡದೆಯೇ ಓರ್ವನಿಗೆ ದೈವಸಾಮಿಪ್ಯವನ್ನು ಪಡೆಯಲು ಸಾಧ್ಯವೆಂದು ಇಸ್ಲಾಂ ಸಿದ್ಧಾಂತಿಸುತ್ತದೆ. ಅದು ವಿಶ್ವಸಹೋದರತೆಯನ್ನು ಕಲಿಸುತ್ತದೆ. ಮಾನವ ಕೋಟಿಯ ಕಲ್ಯಾಣವನ್ನು ಸಾಧಿಸಲು ದಾರಿಯನ್ನು ತೋರಿಸುತ್ತದೆ.

ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಝ್‌ರತ್ ಮಿರ್ಝಾ ಗುಲಾಮ್ ಅಹ್ಮದ್‌ರವರು, ಧರ್ಮವು ಕ್ಷಯಿಸಿ ಅಧರ್ಮವು ಲೋಕದಲ್ಲೆಲ್ಲಾ ವ್ಯಾಪಿಸುವಾಗ ಅವತರಿಸುವನೆಂದು ಎಲ್ಲಾ ಪೂರ್ವಿಕ ಮತಗ್ರಂಥಗಳಲ್ಲಿ ಭವಿಷ್ಯ ನುಡಿಯಲ್ಪಟ್ಟ ಆ ಮತಸುಧಾರಕ ತಾನೆಂದು ಆಧಾರಸಹಿತವಾಗಿ ವಾದಿಸಿದವರಾಗಿದ್ದಾರೆ. ಜಗತ್ತಿನಾದ್ಯಂತ ಅಧರ್ಮವೂ ಅಕ್ರಮವೂ ತಾಂಡವವಾಡಿಕೊಂಡಿರುವ, ಪ್ರಪಂಚಾದ್ಯಂತ ಜನರ ಹೃದಯಗಳನ್ನು ಆಧ್ಯಾತ್ಮಿಕ ರೋಗವು ಪೀಡಿಸಿರುವ ಈ ಕಾಲಘಟ್ಟದಲ್ಲಿ ಓರ್ವ ಆಧ್ಯಾತ್ಮಿಕ ಭಿಷಗ್ವರನೋಪಾದಿಯಲ್ಲಿ ಅವರು ಆಗಮಿಸಿದರು. ಆ ಮಹಾಪುರುಷರು ಕಾಲೋಚಿತವಾಗಿ ಆಗಮಿಸಿದರೆಂಬುದಕ್ಕೆ ಈ ಕಾಲವೇ ಸಾಕ್ಷ್ಯ ನುಡಿಯುತ್ತದೆ. ತಮ್ಮ ಜನ್ಮ ಸಾಫಲ್ಯ ಈ ಭೌತಿಕ ಲೋಕದಲ್ಲಿ ಮಾತ್ರವೇ ಸಿದ್ಧಿಸಬೇಕಾಗಿದೆಯೆಂಬಂತೆಯೂ ತಮಗೆ ಪರಮಾತ್ಮನಲ್ಲಾಗಲೀ ಪರಲೋಕ ಜೀವಿತದಲ್ಲಾಗಲೀ ವಿಶ್ವಾಸವಿಲ್ಲವೆಂಬಂತೆಯೂ ಜನರು ವರ್ತಿಸುತಿದ್ದಾರೆ. ಅವರ ಹೃದಯದಲ್ಲಿ ಈ ಲೋಕದ ಮೇಲಿನ ವ್ಯಾಮೋಹವು ತುಂಬಿಕೊಂಡಿದೆ. ಪರಮಾತ್ಮನ ಮೇಲಿನ ಪ್ರೀತಿಯು ಜನರ ಹೃದಯದಿಂದ ಮಾಸಿಹೋಗಿದೆ. ಅವರ ಹೃದ

ಯುಗಳಲ್ಲಿ ದೈವಪ್ರೀತಿಯುನ್ನೂ ದೈವಭಯುವನ್ನೂ ಪುನ: ಸ್ಥಾಪಿಸಲಿಕ್ಕಾಗಿ ಈ ವಾಗ್ದತ್ತ ಮತಸುಧಾರಕ ಆಗಮಿಸಿದರು. ಅವರ ಜೀವಿತ ಪರ್ಯಂತ ತನ್ನ ದಿವ್ಯದೌತ್ಯವನ್ನು ಅವರು ಪೂರ್ಣವಾಗಿ ನೆರವೇರಿಸಿದರು. ಅವರ ಜನನ ಭಾರತದ ಪಂಜಾಬ್ ರಾಜ್ಯದಲ್ಲಿರುವ ಖಾದಿಯಾನ್ ಎಂಬ ಗ್ರಾಮದಲ್ಲಿ 1835ನೇ ಇಸವಿಯಲ್ಲಾಯಿತು. 1908ನೇ ಇಸವಿಯಲ್ಲಿ ಅವರು ಸ್ವರ್ಗಸ್ಥರಾದರು. ಅವರ ಅನುಯಾಯಿಗಳು ಲೋಕದಲ್ಲೆಲ್ಲಾ ಅವರ ಸಂದೇಶವನ್ನು ಪ್ರಚಾರಗೊಳಿಸುವ ಕಾರ್ಯದಲ್ಲಿ ನಿರತರಾಗಿದ್ದಾರೆ.

ಈ ತ್ರೈಮಾಸಿಕದ ಮೂಲಕ ಮುಸ್ಲಿಮರಿಗೂ ಮುಸ್ಲಿಮೇತರರಿಗೂ ಒಂದೇ ರೀತಿಯಲ್ಲಿ ಮನವಟ್ಟಾಗುವಂತಹ ಲೇಖನಗಳನ್ನು ಸಾಧ್ಯವಾಗುವಷ್ಟರ ಮಟ್ಟಿಗೆ ಪ್ರಕಟಿಸಲಾಗುವುದು. ಅದಕ್ಕೆಲ್ಲಾ ಕನ್ನಡಿಗರ ಪೂರ್ಣ ಸಹಕಾರಗಳ ಅಗತ್ಯವಿದೆ. ನಮ್ಮ ಈ ಪ್ರಯತ್ನದಲ್ಲಿ ಪರಮಾತ್ಮನು ಸಕಲ ಸಹಾಯಗಳನ್ನಿತ್ತು ಆಶೀರ್ವದಿಸಲಿ ಎಂದು ಕೊನೆಯದಾಗಿ ಪ್ರಾರ್ಥಿಸುತ್ತೇವೆ.

—ಸಂಪಾದಕ.

ಯುಗದ ಹಿಂದೆಯು
ಗ ಬಂದು ದೂಡಿದಾಗ ಪ್ರತಿ
ಯೊಂದು ಯುಗ
ವೂ ಅಪ್ಯಾಯಮಾನ ಅತಿ
ಮಧುರವಾಗಲು ಯುಗದೊಂದಿಗೆ
''ಯುಗ ರಶ್ಮಿ''ಯೊಂದು ಉದಯವಾದಾಗಲೂ
ಕಂಡದ್ದು ಕಂಡಂತೆ ಕಂಡವರು
ಹೇಳಿದಾಗಲೂ ಕಾಣದವರೂ ಕಂಡಂತೆ
ಅಭಿನಯಿಸಿದರೂ
ಮೂರನೆಯುಪರಂತೂ ಮೂಗು ಮುರಿದುಕೊಂಡು
ಕಾಣಲೂ ಕಂಡಂತೆ ಅಭಿನಯಿಸಲೂ
ಪ್ರಯತ್ನಪಡಲಿಲ್ಲವೆಂಬುದೇ ಸತ್ಯ
ವಾಸ್ತವವೇನಂದರೆ ಯುಗದೊಂದಿಗೆ
ರಶ್ಮಿ ಬಂದೇ ಬರುತ್ತದೆಂದು
ಹೇಳುವಾಗಲೂ ನಂಬದಿರುವವರಲ್ಲಿ
ಏನೂ ಹೇಳಲೂ ಇಲ್ಲ
ಎಲ್ಲಾ ಯುಗದಂತೆ ಪ್ರಸ್ತುತ
ಕಲಿಯುಗಕ್ಕೂ ರಶ್ಮಿಯೊಂದು ಪ್ರಕಾಶಮಾನವಾಗಿ
ಬಂದಿತೆಂಬುದಂತೂ ಸತ್ಯ
ನಂಬಿದವರು ಕೆಟ್ಟವರೆಂದು
ನಂಬದವರ ಭಾವನೆ. ನಂಬದವರು
ಸಂಬಲಿಲ್ಲವೆಂಬುದು ನಂಬಿದವರ ಪಶ್ಚಾತ್ತಾಪ

ತಯ್ಯಿಬಹ್ಮದ್ರಶೀದ್.

# ಉಪದೇಶಗಳು

**ವಾಗ್ದತ್ತ ಮತಸುಧಾರಕ**

ಈ ಲೋಕದ ವೈಭವನ್ನೂ ಕೌತುಕವನ್ನೂ ಕಂಡು ನೀವು ಮಾರುಹೋಗದಿರಿ. ಈ ಮನೆಯ ಓಜಸ್ಸನ್ನೂ ತೇಜಸ್ಸನ್ನೂ ಕಂಡು ನೀವು ಗರ್ವಿತರಾಗದಿರಿ. ಏಕೆಂದರೆ ಅದು ಬರೇ ಒಂದು ಮರೀಚಿಕೆ ಮಾತ್ರವಾಗಿದೆ. ಅದರ ಪರ್ಯವಸಾನ ನಾಶವಾಗಿದೆ. ಅದರ ಸಿಹಿ ವಾಸ್ತವದಲ್ಲಿ ಕಹಿಯಾಗಿದೆ. ಅದರ ಲಾಭ ಯಥಾರ್ಥದಲ್ಲಿ ನಷ್ಟವಾಗಿದೆ. ಅದರ ಮಹತ್ವವನ್ನೂ ಪ್ರಭಾವವನ್ನೂ ಅರಸಿ ನಡೆಯುವವನು ಅಸ್ತ್ರಪ್ರಹಾರಕ್ಕೆ ಗುರಿಯಾದವನಂತಾಗುವನು. ಅದರ ಕೀರ್ತಿ ಪ್ರತಾಪವನ್ನು ಇಚ್ಛಿಸುವವನು ಮುಳ್ಳಿನಿಂದ ಚುಚ್ಚಲ್ಪಟ್ಟವನಂತಾಗುವನು ಅದರ ಸಾಮಾಗ್ರಿಗಳಲ್ಲಿ ಭ್ರಮಿಸುವವನು ಸತ್ಕರ್ಮಗಳಿಂದ ಅಗಲುವನು. ಲೌಕಿಕದಲ್ಲಿ ಔನ್ನತ್ಯವನ್ನು ಪಡೆಯುವವನು ಸನ್ಮಾರ್ಗದಿಂದ ವಿಮುಖನಾಗುತ್ತಾನೆ. ಖಂಡಿತವಾಗಿಯೂ ಅದರ ಪ್ರಕಾಶವೆಂಬುದು ಅಂಧಕಾರವಾಗಿದೆ. ನೀವು ಅದಕ್ಕೆ ಅಧೀನರಾಗದಿರಿ. ಏಕೆಂದರೆ ಅದು ಅದರ ಈಜುಗಾರನನ್ನು ಮುಳುಗಿಸಿ ಕೊಲ್ಲುವಂತಹದ್ದೂ ಜಲಪ್ರವಾಹಕ್ಕಿಂತ ಅಪಾರವಾದದ್ದೂ ಆಗಿದೆ. ಮತವಿಲ್ಲದವನ ಹಾಗೆ ನೀವು ಆವೇಶಭರಿತರಾಗಿ ಅದನ್ನು (ಲೋಕವನ್ನು) ನಿಮ್ಮ ಲಕ್ಷ್ಯವಾಗಿಟ್ಟುಕೊಂಡು ವರ್ತಿಸದಿರಿ. ಅದನ್ನು ಮತಕಾರ್ಯದಲ್ಲಿ ಒಬ್ಬ ಸೇವಕನಂತಲ್ಲದೆ ಮಿತ್ರನನ್ನಾಗಿ ಮಾಡದಿರಿ.



ಅಹ್ಮದಿಯಾ ಸಂಘಟನೆಯ ಸ್ಥಾಪಕ
**ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್**

ಸ್ವಾರ್ಥಪರವಾದ ವೈರನಿಮಿತ್ತ ಮೂಢರಂತೆ ನೀವು ಪರಸ್ಪರ ಶತ್ರುಗಳಾಗದಿರಿ. ಮತವನ್ನು ಲೌಕಿಕಕ್ಕಿಂತಲೂ ಮಿಗಿಲಾಗಿ ಭಾವಿಸಿರಿ. ಪರಮಾತ್ಮನಿಗಿಂತ ಮನುಷ್ಯರಿಗೆ ಹೆದರಿಕೊಂಡು, ಅವನ ಅಭೀಷ್ಟವನ್ನು ಮರೆತು ತಂತಮ್ಮ ಮನೋವಿಕಾರಗಳನ್ನು ಮಾತ್ರ ಅನುಸರಿಸಿ ನಡೆಯುವವರಂತೆ ನೀವು ಆಗದಿರಿ. ಅವರು ಲೌಕಿಕರ ದೃಷ್ಟಿಯಲ್ಲಿ ಬಹುಮಾನವನ್ನು ಗಳಿಸಲು ಪ್ರಯತ್ನಿಸುತ್ತಾರೆ. ಆದರೆ ಅದು ಬಹುಮಾನವಲ್ಲ, ಅಪಮಾನವಾಗಿದೆ.

# ಮುಹಮ್ಮದ್ ಪೈಗಂಬರರ ನುಡಿಗಳು

1. ನೀತಿಪೂರ್ವಕವಾದ ಮಾತು ಸುಶಕ್ತವಾದ ಹೆಜ್ಜೆಯಾಗಿದೆ.

2. ಮೇಲಿನ (ದಾನ ನೀಡುವವನ) ಕೈ ಕೆಳಗಿನ (ದಾನ ತೆಗೆದುಕೊಳ್ಳುವವನ) ಕೈಗಿಂತ ಉತ್ತಮವಾಗಿದೆ.

3. ವಿಧಿ ನಿರ್ಣಾಯಕ ದಿನದ ಪಶ್ಚಾತ್ತಾಪವು ಗುಣವನ್ನುಂಟುಮಾಡದು.

4. ಸುಳ್ಳನ್ನಾಡುವ ನಾಲಗೆ ಅತ್ಯಂತ ಪಾಪದಿಂದ ಕೂಡಿದೆ.

5. ಆಧ್ಯಾತ್ಮಿಕ ಧನವು ಉತ್ತಮ ಧನವಾಗಿದೆ.

6. ಅನಾಥರ ಸಂಪತ್ತನ್ನು ಅಪಹರಿಸಿ ಭಕ್ಷಿಸುವುದು ಬಹಳ ಕೆಟ್ಟದ್ದಾಗಿದೆ.

7. ಮೋಸಗಾರನಾದ ಸ್ನೇಹಿತನನ್ನು ತ್ಯಜಿಸಿರಿ. ಇಲ್ಲವಾದರೆ ಜನರು ನಿಮ್ಮನ್ನು ಗುರುತಿಸಲು ಅವನನ್ನು ನೋಡುವರು.

8. ಸಂಕಷ್ಟದಲ್ಲೂ ಸಂತೃಪ್ತಿಯಲ್ಲೂ ಪರಮಾತ್ಮನಿಗೆ ಹೆದರಿರಿ.

9. ನೀವು ಪ್ರತಿಯೊಬ್ಬರೂ ಇತರರಿಗಾಗಿ ಪ್ರಾರ್ಥಿಸಿರಿ. ಅದು ಇತರರ ಕುರಿತು ನಿಮಗುಂಟಾಗುವ ದುರ್ವಿಚಾರಗಳನ್ನು ನಿವಾರಿಸುವುದು.

10. ನಿಮಗೆ ಉನ್ನತಸ್ಥಾನ ಲಭಿಸುವಾಗ ಒಳಿತನ್ನು ಮಾಡಿರಿ. ಅಧಿಕಾರ ಲಭಿಸಿದಾಗ ಅಪರಾಧ ಮಾಡಿದವರಿಗೆ ಕ್ಷಮೆ ನೀಡಿರಿ.

11. ನಿಮ್ಮ ನಾಲಗೆಯನ್ನು ಯಾವಾಗಲೂ ಸ್ಥಿಮಿತದಲ್ಲಿಡಿರಿ.

12. ನೀವು ಪರಸ್ಪರ ಸೌಹಾರ್ದ ಪುರಸ್ಸರವಾಗಿ ಕೈಹಿಡಿದು ಕುಲುಕಿರಿ. ಅದು ನಿಮ್ಮ ಹೃದಯದಿಂದ ದ್ವೇಷಭಾವವನ್ನು ಸ್ವಚ್ಛಗೊಳಿಸುವುದು.

13. ಸದಖ (ದಾನಧರ್ಮ) ಮಾಡಿರಿ. ಅದು ನಿಮ್ಮನ್ನು ನರಕಾಗ್ನಿಯಿಂದ ರಕ್ಷಿಸುವುದು.

14. ಅಭಿವೃದ್ಧಿಯ ಕಾಲದಲ್ಲಿ ಪರಮಾತ್ಮನನ್ನು ಸ್ಮರಿಸಿರಿ. ಹಾಗಿದ್ದರೆ ನಿಮ್ಮ ವಿಷಮ ಕಾಲದಲ್ಲಿ ಪರಮಾತ್ಮನು ನಿಮ್ಮನ್ನು ಸ್ಮರಿಸುವನು.

15. ನೀವು ಪರಸ್ಪರ ಉಡುಗೊರೆಗಳನ್ನು ಬದಲಾಯಿಸಿರಿ. ಉಡುಗೊರೆ ದಾನವು ಸ್ನೇಹಬಂಧಗಳನ್ನು ವರ್ಧಿಸುತ್ತದೆ; ಹೃದಯದ ಮಾಲಿನ್ಯಗಳನ್ನು ಸ್ವಚ್ಛಗೊಳಿಸುತ್ತದೆ.

16. ಓರ್ವನ ಸೌಮ್ಯ ಸಂಭಾಷಣೆಯು ಆತನ ಸೌಂದರ್ಯವಾಗಿದೆ.

17. ನೆರೆಕರೆಯವರೊಡನೆ ಬಹುಮಾನಾದರವನ್ನು ತೋರಿಸುವುದು ಅಭಿವೃದ್ಧಿಯನ್ನೂ ಜೀವಿತಕಾಲವನ್ನೂ ವರ್ಧಿಸುತ್ತದೆ.

18. ಸ್ವರ್ಗಕ್ಕಿರುವ ದಾರಿ ವಿಷಮತೆಗಳಿಂದ ಕೂಡಿದೆ. ನರಕ್ಕಿರುವ ದಾರಿ ಕಾಮಕ್ರೋಧಾದಿಗಳಿಂದಲೂ ಕೂಡಿದೆ.

ಹಝ್ರತ್ ಖಲೀಫತುಲ್ ಮಸೀಹ್ III—

## ಅಹ್ಮದಿಯಾ ಸಂಘಟನೆಯ ಲೋಕೈಕ ನಾಯಕರ



# ಸಂದೇಶ

ಮಂಗಳೂರಿನಿಂದ ಕನ್ನಡ ಭಾಷೆಯಲ್ಲಿ ಇಸ್ಲಾಂ ಮತ್ತು ಅಹ್ಮದಿಯತ್ತಿನ ಪ್ರಚಾರಕ್ಕಾಗಿ ಒಂದು ತ್ರೈಮಾಸಿಕ ಪತ್ರಿಕೆ ಹೊರಡಿಸುವ ಏರ್ಪಾಡು ಮಾಡಲಾಗಿದೆಯೆಂದು ತಿಳಿದು ಸಂತೋಷವಾಯಿತು. ದೇವರು ಈ ಪತ್ರಿಕೆಯಿಂದ ಇಸ್ಲಾಮ್ ಮತ್ತು ಅಹ್ಮದಿಯತ್ತಿನ ಪ್ರಚಾರ ಹಾಗೂ ಜನ ಸ್ವೀಕಾರದ ಉದ್ದೇಶವನ್ನು ಪೂರ್ತಿಗೊಳಿಸುವಂತೆ ಮಾಡಲಿ. ಈ ಪತ್ರಿಕೆಗಾಗಿ ಕೆಲಸ ಮಾಡುವವರಿಗೆ ಕಾರ್ಯತತ್ಪರತೆ ಮತ್ತು ಧೈರ್ಯದಿಂದ ಕೆಲಸ ಮಾಡುವ ಸೌಭಾಗ್ಯ ಲಭಿಸಲಿ—ಆಮೀನ್.

ಈ ಕಾಲದಲ್ಲಿ ದೇವರು ಮಹ್‌ದೀ* ಅಲೈಹಿಸ್ಸಲಾಮರನ್ನು ನಿಯೋಗಿಸಿರುವ ಮಹತ್ತಾದ ಉದ್ದೇಶವು ಮುಹಮ್ಮದ್‌ಪೈಗಂಬರ (ಸಲ್ಲಲ್ಲಾಹು ಅಲೈಹಿವ ಸಲ್ಲಮ್)ರ ಧರ್ಮವನ್ನು ಪುನಃ ಸ್ಥಾಪಿಸಲಿಕ್ಕಾಗಿದೆ ಹಾಗೂ ಆದಿಕಾಲದಲ್ಲಿ ಪೈಗಂಬರರ ಮತ್ತು ಧರ್ಮತತ್ಪರರ ಜೀವನದಲ್ಲಿ ಯಥಾರ್ಥವಾದ ಯಾವ ವಿಶ್ವಾಸಗಳು ಪ್ರತ್ಯಕ್ಷವಾಗಿದ್ದುವೋ ಆ ಮಧುರ ಫಲವನ್ನುಂಟುಮಾಡುವ ವಿಶ್ವಾಸಾದರ್ಶಗಳನ್ನು ಪುನಃ ಜನರ ಹೃದಯ ಮತ್ತು ಮನಸ್ಸಿನಲ್ಲಿ ತುಂಬಲಿಕ್ಕಾಗಿದೆ. ಈಗಿನ ಲೋಕವು ಈ ವಿಶ್ವಾಸಗಳನ್ನು ಕಡೆಗಣಿಸಿದೆ. ಕೆಲವು ಸ್ಥಳಗಳಲ್ಲಿ ಗೋರಿಪೂಜೆ, ಕೆಲವು ಕಡೆ ಬರೇ ಊಹೆಯನ್ನು ಆಧರಿಸಿ ಬೇರೆ ಯಾವುದರದೋ ಪೂಜೆ ನಡೆಯುತ್ತಿದೆ. ಜನರು ತಿರುಳನ್ನು ಬಿಟ್ಟು ಸಿಪ್ಪೆಯ ಹಿಂದೆ ಬಿದ್ದಿರುವರು. ಇಸ್ಲಾಮ್ ಕೆಲವು ಆಚಾರಗಳು ಮತ್ತು ಸಂಪ್ರದಾಯಗಳ ಹೆಸರಾಗಿ ಉಳಿದಿದೆ. ಯಾವ ಆಡಂಬರದಿಂದ ಹಬ್ಬಗಳನ್ನು ಆಚರಿಸುತ್ತಾರೋ ಅಷ್ಟು ಮಹತ್ತಾಗಿಯೂ ಉತ್ಸಾಹದಿಂದಲೂ ಪ್ರಾರ್ಥನೆ ಮತ್ತು ಉಪವಾಸದ ಏರ್ಪಾಡು ಮಾಡುವುದಿಲ್ಲ. ಯಥಾರ್ಥವಾಗಿ ಮುಖ್ಯವಾದುದು ಹೃದಯದ ಪಾವಿತ್ರ್ಯತೆ ಮತ್ತು ಭಕ್ತಿಯಾಗಿದೆ. ಹಝ್ರತ್ ಮಸೀಹ್‌ಮೌಊದ್* ಅಲೈಹಿಸ್ಸಲಾಮ್ ಹೇಳಿರುವರು:

ಪ್ರತಿಯೊಂದು ಒಳ್ಳೆಯದರ ಬೇರು ಭಕ್ತಿಯಾಗಿದೆ.
ಈ ಒಂದು ಬೇರು ಇದ್ದರೆ ಎಲ್ಲವೂ ಇರುವುದು.

ಆದುದರಿಂದ ಭಕ್ತಿ ಮತ್ತು ದೇವರ ಭಯವನ್ನು ನಮ್ಮ ನಡೆವಳಿಕೆಯ ಅಡಿಪಾಯವನ್ನಾಗಿ ಮಾಡಿ "ಧರ್ಮವನ್ನು ಪುನರುಜ್ಜೀವನ ಗೊಳಿಸುವ, ಧರ್ಮಶಾಸ್ತ್ರವನ್ನು ನೆಲೆನಿಲ್ಲಿಸುವ" ಯಥಾರ್ಥ ಉದ್ದೇಶವನ್ನು ಸುಸ್ಥಾಪಿಸಬೇಕು. ಇದೇ ಅಹ್ಮದಿಯತ್ತಿನ ಸ್ಥಾಪನೆಯ ಉದ್ದೇಶವಾಗಿದೆ. ಮಕ್ಕಳಲ್ಲೂ ದೊಡ್ಡವರಲ್ಲೂ ಸರಿಯಾದ ವಿಶ್ವಾಸಗಳನ್ನು ನೆಲೆನಿಲ್ಲಿಸಬೇಕು. ಇಸ್ಲಾಮಿನ ಪ್ರೇಮವು ಉತ್ಪನ್ನವಾಗುವಂತೆ ಮಾಡಿರಿ. ದೇವರ ತೃಪ್ತಿಗೆ ಪ್ರಪಂಚದ ಎಲ್ಲಾ

* ವಾಗ್ದತ್ತ ಮತ ಸುಧಾರಕ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ —ಸಂಪಾದಕ

ವಸ್ತುಗಳಿಗಿಂತ ಪ್ರಾಧಾನ್ಯತೆ ಕಲ್ಪಿಸಿರಿ. ನಿಮ್ಮ ನಡೆವಳಿಕೆಯಿಂದ, ಇಸ್ಲಾಮಿನ ಪ್ರಕಾಶವು ಜೀವದಾಯಕವೆಂದೂ ನಮ್ಮ ದೇವರು ಒಬ್ಬ ಜೀವಂತ ದೇವರಾಗಿದ್ದಾನೆಂದೂ ಆತನು ಎಲ್ಲಾ ಕಾಲಗಳಲ್ಲೂ ಹೊಸ ಹೊಸ ಮಹತ್ವಗಳೊಂದಿಗೆ ಪ್ರತ್ಯಕ್ಷನಾಗುತ್ತಾನೆಂದೂ ಅವನ ಜೊತೆ ಸಂಬಂಧ ಸ್ಥಾಪಿಸುವವರು ಒಂದು ಹೊಸ ಜೀವನವನ್ನು ಪಡೆಯುತ್ತಾರೆಂದೂ ಸ್ಪಷ್ಟಗೊಳಿಸಿರಿ.

ಪವಿತ್ರ ಖುರ್‌ಆನ್, ಅದರ ವ್ಯಾಖ್ಯಾನ ಮತ್ತು ಹಝ್ರತ್ ಮಸೀಹ್ ಮೌಊದರ ಗ್ರಂಥಗಳ ಆಧಾರದಿಂದ ಯಥಾರ್ಥ ಅಹ್ಮದಿಯಾ ವಿಶ್ವಾಸಗಳನ್ನು ಪ್ರಕಟಗೊಳಿಸಿ ಜನರ ಹೃದಯದಲ್ಲಿ ಬಲವಾಗಿ ಬೇರೂರುವಂತೆ ಮಾಡುವ ಕಾರ್ಯವನ್ನು ಈ ಪತ್ರಿಕೆ ಮುಂದುವರಿಸುವುದೆಂದು ನಾನು ಆಕಾಂಕ್ಷಿಸುತ್ತೇನೆ. ದೇವರು ಇದನ್ನು ಅನುಗ್ರಹಿಸಲಿ.

—ಹಝ್ರತ್ ಮಿರ್ಝಾ ನಾಸಿರ್ ಅಹ್ಮದ್.

---

## ದಿ ಹೇಗ್‌ನಲ್ಲಿರುವ ಅಂತಾರಾಷ್ಟ್ರೀಯ ನ್ಯಾಯಾಲಯದ ಮಾಜಿ ಅಧ್ಯಕ್ಷರ

# ಸಂದೇಶ



''ಯುಗರಶ್ಮಿ'' ಎಂಬ ಒಂದು ಅಹ್ಮದಿಯಾ ತ್ರೈಮಾಸಿಕ ಪತ್ರಿಕೆಯು ಮಂಗಳೂರಿನಿಂದ ಪ್ರಕಟವಾಗಲಿರುವುದೆಂದು ತಿಳಿದು ನನಗೆ ತುಂಬಾ ಸಂತೋಷವಾಯಿತು. ಅದರ ಹೆಸರು ಯಥೋಚಿತವಾಗಿದೆ. ಪ್ರಪಂಚವು ಎಲ್ಲಾ ಭಾಗಗಳಿಂದಲೂ ಅಂಧಕಾರದಿಂದ ಆವರಿಸಲ್ಪಟ್ಟಿದೆ. ಮಾನವ ಕುಲವು ತನ್ನ ಬದುಕಿಗೂ ಅಭಿವೃದ್ಧಿಗೂ ದೈವಿಕ ಮಾರ್ಗದರ್ಶನದ ಅತ್ಯಂತ ಆವಶ್ಯವಿರುವ ಘಟ್ಟದಲ್ಲಿದೆ. ಮನುಷ್ಯ ಸಮುದಾಯವು ತನ್ನ ಸೃಷ್ಟಿಕರ್ತನ ಕಡೆಗೆ ಬೆನ್ನನ್ನು ತಿರುಗಿಸಿದೆ. ಇದಕ್ಕೆಲ್ಲಾ ಪರಿಹಾರವೇನೆಂದರೆ ಅದು ಪರಮಾತ್ಮನ ಅಸ್ತಿತ್ವವನ್ನೂ ಅವನ ಏಕತ್ವವನ್ನೂ ಮಾನ್ಯ ಮಾಡಿಕೊಂಡು ವಿನಯದಿಂದಲೂ ಆತ್ಮಾರ್ಥತೆಯಿಂದಲೂ ಪ್ರಾರ್ಥಿಸಿಕೊಂಡು ಎಲ್ಲಾ ಕಾರ್ಯಗಳಲ್ಲೂ—ಅವು ಕಿರಿದಾಗಿರಲಿ ಯಾ ಹಿರಿದಾಗಿರಲಿ – ಅವನ ಅಭಿಮತವನ್ನೂ ಮೆಚ್ಚುಗೆಯನ್ನೂ ಅನುಸರಿಸಿ ನಡೆಯಲು ದೃಢ ನಿಶ್ಚಯ ಮಾಡಿಕೊಂಡು ಅವನೊಡನೆ ಸಂಪರ್ಕವನ್ನು ಸ್ಥಾಪಿಸಲು ಹವಣಿಸಬೇಕಾಗಿದೆ.

ಈ ಸತ್ಯದ ಯಥಾರ್ಥತೆಯನ್ನು ತನ್ನ ವಾಚಕರ ಮನಸ್ಸಿನಲ್ಲಿ ಸೃಷ್ಟಿಸಲು ''ಯುಗರಶ್ಮಿ'ಯು ಸರ್ವ ಪ್ರಯತ್ನಗಳನ್ನು ಮಾಡುವುದೆಂಬುದರಲ್ಲಿ ನನಗೆ ಸಂಶಯವಿಲ್ಲ. ಈ ಅನುಗ್ರಹೀತ ಕಾರ್ಯದಲ್ಲಿ ಸಂಬಂಧಪಟ್ಟ ಎಲ್ಲರನ್ನೂ ಪರಮಾತ್ಮನು ಅನುಗ್ರಹಿಸಲೆಂದೂ ತನ್ನ ಕೃಪೆಯನ್ನೂ ಕರುಣೆಯನ್ನೂ ಬೀರಿ ಈ ಪ್ರಯತ್ನದಲ್ಲಿ ಅವರನ್ನು ಜಯಶೀಲರನ್ನಾಗಿ ಮಾಡಲೆಂದೂ ಯುಗರಶ್ಮಿಯು ಅದರ ವಾಚಕರೆಡೆಯಲ್ಲಿ ಜನಪ್ರಿಯವಾಗಿ ಅದರ ಮುಖಾಂತರ ಅವರು ಆ ಪ್ರಕಾಶವನ್ನು ಅರಿತು ಅದಕ್ಕನುಸಾರವಾಗಿ ತಮ್ಮ ಜೀವಿತವನ್ನು ನಡೆಸಲು ಪ್ರಾರಂಭಿಸಲೆಂದೂ ನಾನು ಪರಮಾತ್ಮನೊಡನೆ ಪ್ರಾರ್ಥಿಸುತ್ತೇನೆ.

—(ಸರ್), ಮುಹಮ್ಮದ್ ಝಫ್ರುಲ್ಲಾ ಖಾನ್.

# ★ ಇಸ್ಲಾಮ್ ಹಾಗೂ ಜಿಹಾದ್ ★

— ಲೇಖಕ: ಮುಹಮ್ಮದ್ ಯೂಸುಫ್ —

ಇಸ್ಲಾಂ ಖಡ್ಗದ ಬಲದಿಂದ ಪ್ರಚಾರಗೊಂಡ ಮತವೆಂದೂ ಅದು ಮತೀಯ ಯುದ್ಧಕ್ಕೆ ಅದರ ಅನುಯಾಯಿಗಳನ್ನು ಪ್ರೇರೇಪಿಸುತ್ತದೆಂದೂ ಜನರನ್ನು ಬಲಾತ್ಕರಿಸಿ ಇಸ್ಲಾಂ ಮತವನ್ನು ಸ್ವೀಕರಿಸುವಂತೆ ಮಾಡುವುದು ಅದರ ಧರ್ಮವೆಂದೂ ಇರುವ ಒಂದು ತಪ್ಪಾಭಿಪ್ರಾಯ ಜನರೆಡೆಯಲ್ಲಿ ಕಾಣಬಹುದಾಗಿದೆ. ಇಸ್ಲಾಮಿನ ಸುಂದರ ಮುಖಕ್ಕೆ ಮಸಿಬಳಿದು ಜನರನ್ನು ವಂಚಿಸುವ ಕುಪ್ರಸಿದ್ಧರಲ್ಲಿ ಅಗ್ರಗಣ್ಯರು ಪಾಶ್ಚಾತ್ಯರಾಗಿದ್ದಾರೆ. ದುರದೃಷ್ಟವಶಾತ್ ಮುಸ್ಲಿಮರೆಂದು ಹೇಳಿಕೊಳ್ಳುವ ಒಂದು ವಿಭಾಗದ ಅವಿವೇಕಯುತವಾದ ಆಚರಣೆಗಳಿಂದಲೂ ಈ ತಪ್ಪಾಭಿಪ್ರಾಯವು ಬಲಗೊಂಡಿತು.

ಆದರೆ ನಿಷ್ಪಕ್ಷಪಾತಿಯಾದ ಓರ್ವನು ಇಸ್ಲಾಮಿನ ಅಧ್ಯಾಪನೆಗಳ ಕುರಿತು ಮನನಮಾಡುವನಾದರೆ ಅದರ ನಿಜರೂಪವನ್ನು ಕಾಣಬಹುದಾಗಿದೆ.

ಇಸ್ಲಾಂ ಶಾಂತಿ ಹಾಗೂ ಸಮಾಧಾನದ ಮತವಾಗಿದೆ. ಇಸ್ಲಾಂ ಎಂಬ ಶಬ್ದದ ಅರ್ಥ ಶಾಂತಿ, ಸಮಾಧಾನ ಎಂದು. ಮತಕಾರ್ಯದಲ್ಲಿ ಯಾವುದೇ ರೀತಿಯ ಬಲಾತ್ಕಾರವನ್ನೂ ಇಸ್ಲಾಂ ಸಮ್ಮತಿಸುವುದಿಲ್ಲ. ದೃಷ್ಟಾಂತಗಳ ಆಧಾರದಿಂದ ಧರ್ಮಗಳ ಕುರಿತು ಚರ್ಚಿಸಬೇಕೆಂದು ಅದು ಕಲಿಸುತ್ತದೆ.

ಬಲಪ್ರಯೋಗಿಸಿ ಒಬ್ಬನ ಧರ್ಮವನ್ನು ಬಿಡುವಂತೆ ಪ್ರಯತ್ನಿಸುವುದು ಇಸ್ಲಾಮಿನ ದೃಷ್ಟಿಯಲ್ಲಿ ನ್ಯಾಯೀಕರಿಸಲ್ಪಡದು. ಇಸ್ಲಾಮಿನ ಆವಿರ್ಭಾವದ ಕಾಲದಲ್ಲಿ ಆ ಧರ್ಮವನ್ನು ಸ್ವೀಕರಿಸಿದ ಬಲಹೀನರಾದ ಮುಸ್ಲಿಮರನ್ನು ಅವರ ವಿಶ್ವಾಸವನ್ನು ತ್ಯಜಿಸುವಂತೆ ಮಕ್ಕಾ ನಿವಾಸಿಗಳು ಪ್ರಯತ್ನಿಸಿದಾಗ ಅಲ್ಲಾಹು ಮುಹಮ್ಮದ್ ಪೈಗಂಬರರಿಗೆ ಅವರೊಡನೆ ಹೇಳಲು ಆಜ್ಞಾಪಿಸಿದುದರ ಸಾರಾಂಶ ಇದಾಗಿತ್ತು: ಎಲೈ ಅವಿಶ್ವಾಸಿಗಳೇ, ನಾನು ನನ್ನ ರೀತಿಯಲ್ಲಿ ಆರಾಧಿಸುತ್ತೇನೆ; ನೀವು ನಿಮ್ಮ ರೀತಿಯಲ್ಲಿ ಆರಾಧಿಸುತ್ತೀರಿ. (ಈ ಬಗ್ಗೆ ನಮ್ಮೆಡೆಯಲ್ಲಿ ಭಿನ್ನತೆ ಇದೆಯೆಂಬುದು ಸ್ಪಷ್ಟ. ಆದರೆ ನಾವು ಪರಸ್ಪರ ಬಲಪ್ರಯೋಗಿಸುವ ಅಗತ್ಯವಿಲ್ಲ). ನಿಮಗೆ ನಿಮ್ಮ ಧರ್ಮ; ನನಗೆ ನನ್ನ ಧರ್ಮ. (ಪವಿತ್ರ ಖುರ್‌ಆನ್ ಅಧ್ಯಾಯ 109)

ಸತ್ಯವೆಂದು ಬೋಧ್ಯವಾಗುವ ಒಂದು ಮತವನ್ನು ಸ್ವೀಕರಿಸಲೂ ಅದನ್ನನುಸರಿಸಿ ನಡೆಯಲೂ, ಅದನ್ನು ಇತರರೆಡೆಯಲ್ಲಿ ಪ್ರಚಾರ ಮಾಡಲೂ ಪ್ರತಿಯೋರ್ವನಿಗೆ ಸ್ವಾತಂತ್ರ್ಯವಿರಬೇಕಾಗಿದೆ. ಇದು ಮನುಷ್ಯನ ಮೂಲಭೂತ ಅವಕಾಶವಾಗಿದೆ. ಈ ಹಕ್ಕನ್ನು ಇಸ್ಲಾಂ ಪೂರ್ಣವಾಗಿ ಮನ್ನಿಸುತ್ತದೆ. ಮತಪ್ರಚಾರ ಬಲಪ್ರಯೋಗದಿಂದಲ್ಲ, ಸಮಾಧಾನದಿಂದಲೂ ಸಾಕ್ಷ್ಯಗಳ ಆಧಾರದಿಂದಲೂ ಮಾಡಬೇಕೆಂದು ಅದು ಸಾರುತ್ತದೆ. ಪವಿತ್ರ ಖುರ್‌ಆನ್ ಹೇಳುವುದನ್ನು ನೋಡಿರಿ. "ನಿಮ್ಮ ವಾದದಲ್ಲಿ ನೀವು ಸತ್ಯವಂತರೆಂದಾದರೆ ಸಾಕ್ಷ್ಯಗಳನ್ನು ಕೊಡಿರಿ.'' (27:64)

ದೃಷ್ಟಾಂತಗಳ ಆಧಾರದಿಂದ ಮನಸ್ಸಾಕ್ಷಿಯನ್ನನ್ನುಸರಿಸಿ ಯಾವುದೇ ಮತವನ್ನು ಸ್ವೀಕರಿಸುವರೆ ಅಥವಾ ನಿರಾಕರಿಸುವರೆ ಪ್ರತಿಯೋರ್ವನಿಗೆ ಸ್ವಾತಂತ್ರ್ಯವಿರಬೇಕು. ಆ ಹಕ್ಕನ್ನು ಮನ್ನಿಸುತ್ತಾ ಪವಿತ್ರ ಖುರ್‌ಆನ್ ಹೀಗೆನ್ನುತ್ತದೆ: ''ಇದು (ಇಸ್ಲಾಂ) ನಿಮ್ಮ ಪ್ರಭುವಿನ ಕಡೆಯಿಂದಿರುವ ಸತ್ಯವಾಗಿದೆ. ಇಷ್ಟವಿದ್ದವರು ನಂಬಲಿ, ಇಷ್ಟವಿಲ್ಲದವರು ನಿರಾಕರಿಸಲಿ.'' (18:29) ಸತ್ಯವನ್ನು ಸ್ವೀಕರಿಸುವುದರ ಫಲ ಅದನ್ನು ಸ್ವೀಕರಿಸುವವನಿಗೆಯೇ ಲಭಿಸುತ್ತದೆ; ಅದನ್ನು ನಿರಾಕರಿಸುವುದರ ದುಷ್ಫಲ ಅದನ್ನು ನಿರಾಕರಿಸುವವನೇ ಅನುಭವಿಸಬೇಕಾಗಿದೆ. ಆದುದರಿಂದ ಮತಕಾರ್ಯದಲ್ಲಿ ಬಲತ್ಕಾರ ಅಥವಾ ಆಕ್ರಮದ ಅಗತ್ಯ ಬರುವುದಿಲ್ಲ. ಒಬ್ಬನ ಮನಸ್ಸಾಕ್ಷಿಯನ್ನಾಗಲೀ ವಿಶ್ವಾಸವನ್ನಾಗಲೀ ಯಾರಿಗೂ ಬಲಪ್ರಯೋಗಿಸಿ ಬದಲಾಯಿಸಲು ಸಾಧ್ಯವಿಲ್ಲ. ಮತವಿಶ್ವಾಸ ಹೃದಯಕ್ಕೆ ಸಂಬಂಧಿಸಿದುದಾಗಿದೆ. ಬಾಹ್ಯಶಕ್ತಿಯಿಂದ ಅದನ್ನು ಬದಲಾಯಿಸಲು ಪ್ರಯತ್ನಿಸುವುದು ಅವಿವೇಕವಾಗಿದೆ. ಆದ್ದರಿಂದಲೇ ಪವಿತ್ರ ಖುರ್‌ಆನ್ ಹೀಗೆ

ಆಜ್ಞಾಪಿಸಿದೆ. ''ಮತಕಾರ್ಯಗಳಲ್ಲಿ ಬಲಾತ್ಕಾರ ಕೂಡದು. ಸತ್ಯವು ಅಸತ್ಯದಿಂದ ಭಿನ್ನವಾದುದಾಗಿದೆ.'' (2:256)

ಸಂಕ್ಷಿಪ್ತವಾಗಿ, ಇಸ್ಲಾಂ' ಧರ್ಮಕಾರ್ಯಗಳಲ್ಲಿ ಬಲಾತ್ಕಾರವನ್ನೋ ಅಕ್ರಮವನ್ನೊ ಸಮ್ಮತಿಸುವುದಿಲ್ಲ; ಮಾತ್ರವಲ್ಲ ಶಕ್ತಿಯುತವಾಗಿ ವಿರೋಧಿಸುತ್ತದೆ. ಬಲಾತ್ಕಾರದಿಂದ ಕಪಟ ವಿಶ್ವಾಸಿಗಳನ್ನಲ್ಲದೆ ಸತ್ಯ ವಿಶ್ವಾಸಿಗಳನ್ನುಂಟು ಮಾಡಲು ಸಾಧ್ಯವಿಲ್ಲ. ಅಂತಹ ಕಪಟ ವಿಶ್ವಾಸಿಗಳಿಂದ ಇಸ್ಲಾಮಿಗೆ ಕುಂದುಂಟಾಗುವುದಲ್ಲದೆ ಪ್ರಯೋಜನವೇನೂ ಲಭಿಸಲಾರದು. ಕಪಟ ವಿಶ್ವಾಸಿಗಳನ್ನು ಇಸ್ಲಾಂ ಬಹಳ ನಿಕೃಷ್ಟರನ್ನಾಗಿ ಗಣಿಸುತ್ತದೆ.

ಇಸ್ಲಾಂ ಏಕದೈವ ವಿಶ್ವಾಸವನ್ನು ಶಕ್ತಿಯುತವಾಗಿ ಪ್ರಬೋಧಿಸುವ ಧರ್ಮವಾಗಿದೆ. ಮೂರ್ತಿ ಪೂಜೆಯನ್ನು ಬಹುದೈವಾರಾಧನೆಯನ್ನೂ ಅದು ವಿರೋಧಿಸುತ್ತದೆ. ಆದರೂ ''ಇತರರು ಪೂಜಿಸುವ ಆರಾಧ್ಯ ವಸ್ತುಗಳನ್ನು ನೀವು ನಿಂದಿಸಬಾರದು'' (ಪವಿತ್ರ ಖು. 6:108) ಎಂದು ಮುಸ್ಲಿಮರನ್ನು ಎಚ್ಚರಿಸುತ್ತದೆ.

ಹೀಗೆ ಇಸ್ಲಾಂ ಒಂದು ಕಡೆಯಲ್ಲಿ ಮತಕಾರ್ಯಗಳಲ್ಲಿ ಬಲಾತ್ಕಾರ ಕೂಡದೆಂದೂ ಇತರರನ್ನು ನೋಯಿಸಬಾರದೆಂದೂ ಮತ್ತೊಂದು ಕಡೆಯಲ್ಲಿ ಇತರರೊಡನೆ ಸೌಹಾರ್ದತೆಯಿಂದ ವರ್ತಿಸಬೇಕೆಂದೂ ಕಲಿಸುತ್ತದೆ. ಇತರ ಸಮುದಾಯದ ಧುರೀಣರು ನಿಮ್ಮೆಡೆಗೆ ಬರುವರಾದರೆ ಅವರನ್ನು ಮರ್ಯಾದೆಯಿಂದ ಸ್ವಾಗತಿಸಿ ಗೌರವಿಸಬೇಕೆಂದು ಇಸ್ಲಾಂ ಮತ ಸ್ಥಾಪಕರು ಆಜ್ಞಾಪಿಸಿದ್ದಾರೆ. ಆ ಮಹಾತ್ಮ ಅದನ್ನು ಮಾತಿನಲ್ಲಿ ಮಾತ್ರವಲ್ಲ ಕೃತಿಯಲ್ಲೂ ತೋರಿಸಿಕೊಟ್ಟಿದ್ದಾರೆ. ಒಂದು ಸಂದರ್ಭದಲ್ಲಿ ಪೈಗಂಬರರ ಭೇಟಿಗೋಸ್ಕರ ನಜರಾನಾದಿಂದ ಒಂದು ಕ್ರೈಸ್ತ ಸಂಘವು ಮದೀನಾಕ್ಕೆ ಬಂದಿತ್ತು. ಪೈಗಂಬರರು ಅವರನ್ನು ಮದೀನಾದ ಮಸೀದಿಯಲ್ಲಿ ಬರಮಾಡಿಕೊಂಡು ಅಲ್ಲಿಯೇ ಸಂಭಾಷಣೆಯನ್ನು ನಡೆಸಿದರು. ಸಂಭಾಷಣೆಯ ಮಧ್ಯೆ ಅವರು ತಮಗೆ ಪ್ರಾರ್ಥನೆಗೆ ಸಮಯವಾಯಿತೆಂದೂ ಹೋಗಲು ಅನುಮತಿಯನ್ನೀಯಬೇಕೆಂದೂ ಕೇಳಿಕೊಂಡರು. ಆದರೆ ಆ ವಿಶಾಲ ಹೃದಯಿಯಾದ ಪೈಗಂಬರ್ ಅವರಿಗೆ ನೀಡಿದ ಉತ್ತರ ''ಪ್ರಾರ್ಥನೆಗಾಗಿ ನಿಮಗೆ ಬೇರೆಡೆಗೆ ಹೋಗುವ ಅಗತ್ಯವಿಲ್ಲ; ಮಸೀದಿ ದೈವಾರಾಧನೆಗಾಗಿ ನಿರ್ಮಿಸಲ್ಪಟ್ಟಿದೆ; ಇಲ್ಲಿಯೇ ನೀವು ಪ್ರಾರ್ಥನೆಯನ್ನು ನಿರ್ವಹಿಸಬಹುದು'' ಎಂದಾಗಿತ್ತು. ಹಾಗೆ ಆ ಸಂಘವು ಮದೀನಾದಲ್ಲಿ ಪೈಗಂಬರರೇ ನಿರ್ಮಿಸಿದ ಆ ಮಸೀದಿಯಲ್ಲೇ ತಮ್ಮ ಪ್ರಾರ್ಥನೆಯನ್ನು ಸಲ್ಲಿಸಿದರು. ಚರಿತ್ರೆಯಲ್ಲಿ ಇಂತಹ ಮತ್ತೊಂದು ಉದಾಹರಣೆಯನ್ನು ಕಾಣಲು ಸಾಧ್ಯವಿಲ್ಲ.

ಇಂತಹ ವಿಶಾಲ ಮನೋಭಾವನೆ ಹಾಗೂ ಪರಮತ ಸಹಿಷ್ಣುತೆಯನ್ನು ಪ್ರಬೋಧಿಸುವ ಒಂದು ಧರ್ಮವನ್ನು ಲೋಕವಿಂದು ತಪ್ಪಾಗಿ ತಿಳಿದುಕೊಂಡಿದೆ. ಅದು ಬಲಾತ್ಕಾರದ ಮತವೆಂದೂ ಖಡ್ಗದ ಬಲದಿಂದಾಗಿ ಪ್ರಚರಿಸಲ್ಪಟ್ಟಿದ್ದೆಂದೂ ಚಿತ್ರೀಕರಿಸಲ್ಪಡುತ್ತದೆ. ಇವೆಲ್ಲಾ ಇಸ್ಲಾಮನ್ನು ಅವಮಾನಿಸಲೂ ಅದರ ಮಹತ್ವಕ್ಕೆ ಕಳಂಕವನ್ನುಂಟುಮಾಡಲೂ ಅದರ ವಿರೋಧಿಗಳಾದ ಪಾಶ್ಚಾತ್ಯ ಇತಿಹಾಸಕಾರರು ನಿರ್ಮಿಸಿದ ಕಟ್ಟುಕತೆಗಳಾಗಿವೆ. ಅವರ ದುಷ್ಟವರ್ತನೆಗಳ ಫಲವಾಗಿ ಲೋಕವಿಂದು ಇಸ್ಲಾಮಿನ ಕುರಿತು ಮಹಾ ತಪ್ಪಾಭಿಪ್ರಾಯಗಳನ್ನು ಕೈಗೊಂಡಿದೆ. ಆದರೆ ಅವರು ವಿರಚಿಸಿದ ಕಟ್ಟುಕತೆಗಳನ್ನು ಕಣ್ಣುಮುಚ್ಚಿ ನಂಬುವುದರ ಬದಲು ಇಸ್ಲಾಮನ್ನು ಅದರ ಅಧ್ಯಾಪನೆಗಳ ಮೂಲಕ ನಿಷ್ಪಕ್ಷಪಾತಿಗಳಾದ ಚರಿತ್ರಕಾರರ ಸಾಕ್ಷಗಳ ಆಧಾರದಿಂದ ಕಲಿಯಲು ಪ್ರಯತ್ನಿಸುವವರಿಗೆ ಸತ್ಯವನ್ನು ಗ್ರಹಿಸಲು ಕಷ್ಟವಾಗಲಾರದು. ಗಾಂಧೀಜಿ ಹೇಳುವುದನ್ನು ನೋಡಿರಿ: "ಈ ಮಹತ್ತಾದ ಮತದ ಕುರಿತು ಪಾರಾಯಣ ಮಾಡುತ್ತಿದ್ದಂತೆಯೇ ಯಥಾರ್ಥತೆಯು ನನಗೆ ಸ್ಪಷ್ಟವಾಗಿ ಕಂಡು ಬರುತ್ತಿದೆ. ಇಸ್ಲಾಮಿನ ಮಹತ್ವ ಖಂಡಿತವಾಗಿಯೂ ಖಡ್ಗದ ಮೊನೆಯಿಂದ ಅಧಿಷ್ಠಾನಗೊಂಡದ್ದಲ್ಲ." (Young India)

ಇನ್ನು ಜಿಹಾದ್ ಎಂದರೇನೆಂದೂ ಇಸ್ಲಾಮ್ ಮತ್ತು ಜಿಹಾದ್ ಇವೆರಡರ ಸಂಬಂಧವೇನೆಂದೂ ಪರಿಶೀಲಿಸೋಣ. ಅರಬಿ ಭಾಷೆಯಲ್ಲಿ ''ಜಿಹಾದ್'' ಎಂಬ ಶಬ್ದದ ಅರ್ಥ ಅತಿಯಾಗಿ ಪರಿಶ್ರಮಿಸು ಎಂದಾಗಿದೆ. ಸದುದ್ದೇಶವನ್ನು ಸಾಧಿಸಲಿಕ್ಕೋಸ್ಕರ ಎಲ್ಲಾ ಸನ್ಮಾರ್ಗಗಳನ್ನು ಸ್ವೀಕರಿಸುತ್ತಾ ಬಹುರೀತಿಯಲ್ಲಿ ಪ್ರಯತ್ನಿಸುವುದನ್ನು ಜಿಹಾದ್ ಎಂದು ಹೇಳುತ್ತಾರೆ. ಪರಮಾತ್ಮನ ಪ್ರೀತಿಯನ್ನು ಸಂಪಾದಿಸುವರೆ ಹಾಗೂ ಅವನ ಇಷ್ಟವನ್ನನುಸರಿಸಿ ಜೀವನವನ್ನು ಕ್ರಮೀಕರಿಸುವುದರಲ್ಲಿ ಬಹುತರವಾಗಿ ಪರಿಶ್ರಮಿಸುವುದನ್ನು ಸಹ ಇಸ್ಲಾಮಿನಲ್ಲಿ ಜಿಹಾದ್ ಎಂದು ಹೇಳಲಾಗುತ್ತದೆ. ಪವಿತ್ರ ಖುರ್ಆನಿನಲ್ಲಿ ಅಲ್ಲಾಹು ಹೇಳುವುದನ್ನು ನೋಡಿರಿ: "ಯಾರು ನನ್ನನ್ನು ಪಡೆಯಲಿಕ್ಕೋಸ್ಕರ ಜಿಹಾದ್ ಮಾಡುತ್ತಾರೋ

(ತ್ಯಾಗದಿಂದ ಕೂಡಿದ ಭಾರೀ ಪರಿಶ್ರಮಪಡುವರೋ) ಅವರಿಗೆ ನಮ್ಮ ಮಾರ್ಗವನ್ನು ತೋರಿಸಿ ಕೊಡುವೆವು.'' (29:69) ಇಲ್ಲಿ ದೈವಪ್ರಾಪ್ತಿಗಾಗಿ ಮಾಡುವ ಪರಿಶ್ರಮಕ್ಕೆ ಜಿಹಾದ್ ಎಂಬ ಶಬ್ದವು ಪ್ರಯೋಗಿಸಲ್ಪಟ್ಟಿದೆ. ದ್ರೋಹಿಯಾದ ಭರಣಾಧಿಕಾರಿಯ ಮುಂದೆ ಸತ್ಯವನ್ನು ಮರೆಮಾಚದೆ ಹೇಳುವುದು, ನೀತಿಪೂರ್ಣವಾಗಿಮಾತನಾಡುವುದು ಜಿಹಾದ್ ಮಾತ್ರವಲ್ಲ, ಅದು ಜಿಹಾದ್‌ಗಳಲ್ಲಿ ಶ್ರೇಷ್ಠವಾದುದೆಂದು ಪೈಗಂಬರರು ಹೇಳಿರುವರು. ಹಾಗೆಯೇ ತನ್ನ ಹೃದಯವನ್ನು ಎಲ್ಲಾ ವಿಧದ ಮಾಲಿನ್ಯಗಳಿಂದ ಪರಿಶುದ್ಧವಾಗಿಡಲು ಪ್ರಯತ್ನಿಸುವುದನ್ನು ಸಹ ಜಿಹಾದ್ ಎಂದು ಹೇಳುತ್ತಾರೆ. ಒಂದು ಸಂದರ್ಭದಲ್ಲಿ ಯುದ್ಧದಿಂದ ಮರಳುತ್ತಿರುವಾಗ ಪೈಗಂಬರರು, ''ನಾವೀಗ ಸಣ್ಣ ಜಿಹಾದಿನಿಂದ ದೊಡ್ಡ ಜಿಹಾದಿಗೆ ಮರುಳುತ್ತಿದ್ದೇವೆ'' ಎಂದು ಹೇಳಿದ್ದರು. ದೊಡ್ಡ ಜಿಹಾದ್ ಏನೆಂದು ಕೇಳಿದಾಗ, "ತನ್ನ ಮನೋವಿಕಾರಗಳೊಡನೆ ನಡೆಸುವ ಹೋರಾಟ ದೊಡ್ಡ ಜಿಹಾದ್'' ಎಂದು ಹೇಳಿದರು. ವಿವಿಧಾರ್ಥಗಳಲ್ಲಿ ಪ್ರಯೋಗಿಸಲ್ಪಡುವ ಜಿಹಾದ್ ಎಂಬ ಶಬ್ದದ ಇನ್ನೊಂದು ಅರ್ಥ ತಮ್ಮ ವಿಶ್ವಾಸವನ್ನು ಸಂರಕ್ಷಿಸಲು ಪ್ರತಿರೋಧಕವಾಗಿ ಹೋರಾಡುವ ಮತಯುದ್ಧವಾಗಿದೆ. ಆದರೆ ಅದು ಸಣ್ಣ ಜಿಹಾದ್ ಆಗಿದೆ.

ಹೀಗಿರುವ ಜಿಹಾದ್ ಎಲ್ಲಾ ಮುಸ್ಲಿಮರಿಗೆಂದು ಮಾತ್ರವಲ್ಲ ಎಲ್ಲಾ ಮತವಿಶ್ವಾಸಿಗಳಿಗೂ ಆವಶ್ಯಕವಾಗಿದೆ.

ಪೈಗಂಬರರಿಗೂ ಅನುಚರರಿಗೂ ಯುದ್ಧಮಾಡುವ ಸಂದರ್ಭ ಒದಗಿತ್ತೆಂಬುದು ವಾಸ್ತವ. ಆದರೆ ಆ ಯುದ್ಧಗಳೊಂದೂ ಸಹ ಇಸ್ಲಾಂ ಮತ ಪ್ರಚಾರಕ್ಕೋಸ್ಕರ ಮಾಡಿದುದಲ್ಲ. ಓರ್ವ ಪಾಶ್ಚಾತ್ಯ ಪಂಡಿತನಾದ Mr. Cranston ತನ್ನ World Faith ಎಂಬ ಪುಸ್ತಕದಲ್ಲಿ ಬರೆದುದನ್ನು ನೋಡಿ: ''ಮುಹಮ್ಮದ್ ಒಮ್ಮೆಯೂ ಸ್ವಂತ ನೆಲೆಯಲ್ಲಿ ಯುದ್ಧಮಾಡಿಲ್ಲ. ಅವರು ಮಾಡಿದ ಎಲ್ಲಾ ಯುದ್ಧಗಳು ಆತ್ಮರಕ್ಷಣಾರ್ಥ ಹಾಗೂ ಸ್ವಯಂ ಜೀವಿಸಲಿಕ್ಕೆ ಆಗಿತ್ತು.'' ಬಲಹೀನರೂ ಅಲ್ಪ ಸಂಖ್ಯಾತರೂ ಆಗಿದ್ದ ಮುಸ್ಲಿಮರನ್ನು, ಅವರ ವಿಶ್ವಾಸವನ್ನು ತ್ಯಜಿಸುವಂತೆ ಶತ್ರುಗಳು ಬಲಪ್ರಯೋಗಿಸಿದಾಗ, ದೈವೇಚ್ಛೆಯನ್ನನುಸರಿಸಿ ತಮ್ಮ ವಿಶ್ವಾಸವನ್ನು ಸಂರಕ್ಷಿಸಲಿಕ್ಕಾಗಿ ಪ್ರತಿರೋಧಕವೆಂಬಂತೆ ಮಾಡಿದ ಹೋರಾಟಗಳಾಗಿದ್ದವು ಅವೆಲ್ಲಾ. ಇಂತಹ ಯುದ್ಧ ಮುಹಮ್ಮದ್ ಪೈಗಂಬರ್ ಮಾತ್ರವಲ್ಲ ಹಿಂದಿನ ಹಲವಾರು ಪ್ರವಾದಿಗಳೂ ಸಹ ಮಾಡಿದ್ದರು. "ಒಂದು ಕೆನ್ನೆಗೆ ಹೊಡೆದರೆ ಇನ್ನೊಂದು ಕೆನ್ನೆಯನ್ನು ತೋರಿಸಿ ಕೊಡಬೇಕೆಂದು ಉಪದೇಶಿಸಿದ ಯೇಸುಕ್ರಿಸ್ತರು ಕೂಡ ಒಂದು ಸಂದರ್ಭದಲ್ಲಿ ''ಮೇಲಂಗಿಯನ್ನು ಮಾರಿಯಾದರೂ ಖಡ್ಗವನ್ನು ಕೊಂಡುಕೊಳ್ಳಲಿ'' (ಲೂಕ 22:36) ಎಂದು ಆಜ್ಞಾಪಿಸಿದರು.

ಶ್ರೀ ರಾಮಚಂದ್ರರ ಚರಿತ್ರೆಯನ್ನು ನೋಡಿರಿ. ಆ ಮಹಾಮಹಿಮನಿಗೆ 14 ವರ್ಷ ವನವಾಸ ಮಾಡಬೇಕಾಗಿ ಬಂದರೂ ಆ ಪುಣ್ಯಪುರುಷ ಯಾರಿಗೂ ದ್ರೋಹವನ್ನು ಬಗೆಯಲಿಲ್ಲ. ಆದರೆ ವನವಾಸ ಜೀವನವನ್ನು ನಡೆಸುತ್ತಿದ್ದ ಆ ಮಹಾಪುರುಷನನ್ನು ಅಲ್ಲಿಯೂ ಶಾಂತಿಯಿಂದ ಕಳೆಯಲು ವೈರಿಗಳು ಬಿಡಲಿಲ್ಲ. ಕಟ್ಟಕಡೆಗೆ ಆತನಿಗೂ ಯುದ್ಧ ಮಾಡಬೇಕಾಗಿ ಬಂತು. ಇನ್ನು ಶ್ರೀ ಕೃಷ್ಣರ ಚರಿತ್ರೆಯೆಡೆಗೆ ಕಣ್ಣು ಹಾಯಿಸುವ. ಮಾಧುರ್ಯದಿಂದ ತುಂಬಿದ ಆತನ ಗೀತೋಪದೇಶಗಳನ್ನು ಕೇಳಲು ಸೌಮ್ಯಶೀಲರಾದ ಜನರು ಬಂದು ನೆರೆದರು. ಆದರೆ ದುಷ್ಟರು ಆ ಮಹಾಪುರುಷನ ಶಬ್ದಕ್ಕೆ ಕಿವಿಗೊಡಲಿಲ್ಲ. ಹಾಗೆ ಅತ್ಯಾಚಾರವು ಬಹಳ ವಿಪರೀತವಾಗಿ ಪರಿಣಮಿಸಿದಾಗ ಅದನ್ನು ತಡೆಯುವ ಸಲುವಾಗಿ ಆತನಿಗೆ ಹಲವಾರು ಯುದ್ಧಮಾಡಬೇಕಾಗಿ ಬಂತು. ಕಡೆಗೆ ಕೌರವರ ಎದುರಾಗಿ ಪಾಂಡವರ ಸಹಾಯಕನಾಗಿ ಅರ್ಜುನನ ರಥದ ಸಾರಥ್ಯವನ್ನು ವಹಿಸಿಕೊಂಡು ರಣರಂಗಕ್ಕಿಳಿಯಬೇಕಾಯಿತು. ನಿಷ್ಕರುಣೆಯಿಂದ ಬಾಣಗಳ ಸುರಿಮಳೆಯನ್ನು ಸುರಿಸಲು ಆತನು ಅರ್ಜುನನಿಗೆ ಆಜ್ಞಾಪಿಸಿದನು. ಭಗವದ್ಗೀತೆಯು ಶ್ರೀ ಕೃಷ್ಣರು ಅದೇ ಸಂದರ್ಭದಲ್ಲಿ ಅರ್ಜುನನಿಗೆ ನೀಡಿದ ಉಪದೇಶಗಳಾಗಿವೆಯೆಂದು ಹೇಳಲ್ಪಡುತ್ತದೆ. ಇನ್ನು ಝುರತುಷ್ಟ್ರರ ಚರಿತ್ರೆಯನ್ನು ಅವಲೋಕಿಸುವುದಾದರೆ, ಗುಸ್ತಾಸ್ಪ ರಾಜನ ಅತೀವ ಪ್ರಿಯವಾದ ಕುದುರೆಯ ವ್ಯಾಧಿಗ್ರಸ್ತ ಕಾಲುಗಳನ್ನು ಸರಿಪಡಿಸಲೋಸುಗ ಝುರತುಷ್ಟ್ರ ಮಾಡಿಕೊಂಡ ಕರಾರುಗಳ ಪೈಕಿ ಒಂದು, ರಾಜನ ಶೂರ ಪುತ್ರನಾದ ಇಸ್ಫೆಂದಿಯರನು ಆ ಧರ್ಮ ರಕ್ಷಣಾರ್ಥವಾಗಿ ಖಡ್ಗಧಾರಿಯಾಗಬೇಕೆಂದಾಗಿತ್ತು. ಮುಂದೆ ತನ್ನ ಅನುಯಾಯಿಯಾಗಿ ಮಾರ್ಪಟ್ಟ ಗುಸ್ತಾಸ್ಪರಾಜನಿಗೂ ಝುರತುಷ್ಟ್ರ ಧರ್ಮದ ವಿರೋಧಿಯಾಗಿದ್ದ ಆರಜಸ್ಪ ರಾಜ

ನಿಗೂ ಯುದ್ಧವುಂಟಾದಾಗ ಮಹಾಭಯಂಕರನಾಗಿ ಕಾದಿದವನು ಇಸ್ಪೆಂದರನೇ ಆಗಿದ್ದನು.

ಇನ್ನು ಮುಹಮ್ಮದ್ ಪೈಗಂಬರರ ಚರಿತ್ರೆಯನ್ನು ಪರಿಶೀಲಿಸೋಣ. ಅವರನ್ನೂ ಅವರ ಅನುಯಾಯಿಗಳನ್ನೂ ಶತ್ರುಗಳು ಹಲವಿಧ ಮರ್ದನಗಳಿಗೆ ಗುರಿಪಡಿಸಿದರು. ಕೆಲವರ ಕಾಲಿಗೆ ಹಗ್ಗವನ್ನು ಕಟ್ಟಿ ಎಳೆದುಕೊಂಡು ಹೋದರು. ಕೆಲವರನ್ನು ಉರಿಬಿಸಿಲಿನಲ್ಲಿ ಮರಳಿನ ಮೇಲೆ ಮಲಗಿಸಿ ಎದೆಯ ಮೇಲೆ ಭಾರವಾದ ಕಲ್ಲುಗಳನ್ನಿಟ್ಟು ಅವರು ಅನುಭವಿಸುವ ಬಾಧೆಯನ್ನು ಕಂಡು ಹರ್ಷಗೊಂಡರು. ಕೆಲವರನ್ನು ಹೊಗೆಹಾಕಿ ಉಸಿರು ಕಟ್ಟುವಂತೆ ಮಾಡಿದರು. ಮುಸ್ಲಿಮರಿಗೆದುರಾಗಿ ಅವರು ನಡೆಸಿದ ದುಷ್ಕೃತ್ಯಗಳು ಎಲ್ಲಾ ಸೀಮೆಗಳನ್ನೂ ಮೀರಿದ್ದವು. ಅದರ ಘೋರತೆಯನ್ನು ನೆನಸುವಾಗಲೇ ಮೈ ನವಿರೇಳುತ್ತದೆ. ಅವರು ಬಡ ಸ್ತ್ರೀಯರನ್ನೂ ಮಕ್ಕಳನ್ನೂ ನಿಷ್ಕರುಣೆಯಿಂದ ವಧಿಸಲು ತೊಡಗಿದರು. ಕೆಲ ಸ್ತ್ರೀಯರ ಗುಹ್ಯಾಂಗದೊಳಗೆ ಈಟಿಯಿಂದ ತಿವಿದು ಕೊಂದರು. ಕೆಲ ಸ್ತ್ರೀಯರ ಕಾಲುಗಳನ್ನು ಎರಡು ಒಂಟೆಗಳಿಗೆ ಬಿಗಿಯಾಗಿ ಕಟ್ಟಿ ಅವುಗಳನ್ನು ಎದಿರು ಬದಿರು ದಿಕ್ಕುಗಳಿಗೆ ಓಡಿಸಿ ಅವರನ್ನು ಎರಡು ಸೀಳಾಗಿ ಮಾಡಿದರು. ಮೂರು ವರ್ಷಗಳ ಕಾಲ ಅವರು ಪೈಗಂಬರರನ್ನೂ ಅನುಯಾಯಿಗಳನ್ನೂ ಬಹಿಷ್ಕರಿಸಿದರು. ಆ ಬಹಿಷ್ಕಾರದ ಕಾರಣದಿಂದ ಪೈಗಂಬರರ ಚಿಕ್ಕಪ್ಪ ಅಬೂ ತಾಲಿಬ್ ಮತ್ತು ಪ್ರಿಯಪತ್ನಿ ಖದೀಜ ಮೃತರಾದರು. ಕೆಲವರಿಗೆ ತಮ್ಮ ವಿಶ್ವಾಸವನ್ನು ಸಂರಕ್ಷಿಸಲು ಊರು ಬಿಡಬೇಕಾಯಿತು. ಹೀಗೆ ಹದಿಮೂರು ವರ್ಷಗಳ ಕಾಲ ಪೈಗಂಬರರಿಗೂ ಅನುಚರರಿಗೂ ಹಲವಿಧ ಕಷ್ಟಾನುಭವಗಳನ್ನು ಸಹಿಸಬೇಕಾಯಿತು. ವೈರಿಗಳು ಕೊನೆಗೆ ಪೈಗಂಬರರನ್ನು ವಧಿಸಲು ತೀರ್ಮಾನಿಸಿದರು. ಆ ಘಟ್ಟದಲ್ಲಿ ಅವರಿಗೆ ತನ್ನ ಜನ್ಮಭೂಮಿಯಾದ ಮಕ್ಕಾವನ್ನು ಬಿಟ್ಟು ಪಲಾಯನ ಮಾಡಬೇಕಾಯಿತು. ಹಾಗೆ ಅವರು ಮದೀನಾದಲ್ಲಿ ಅಭಯವನ್ನು ಪಡೆದರು. ಅವರಲ್ಲಿ ವಿಶ್ವಾಸವನ್ನಿಟ್ಟಿದ್ದ ಬಡವರಾದ ಅನುಯಾಯಿಗಳು ಸಹ ಅವರನ್ನು ಅನುಕರಿಸಿ ಮದೀನಾವನ್ನು ತಲಪಿದರು. ಅಲ್ಲಿಯೂ ಸಮಾಧಾನದಿಂದ ಉಸಿರೆಳೆಯಲು ಶತ್ರುಗಳು ಅವರನ್ನು ಬಿಡಲಿಲ್ಲ. ಅವರು ದೊಡ್ಡ ಸೈನ್ಯದಿಂದೊಡಗೂಡಿ ಮದೀನಾವನ್ನು ಆಕ್ರಮಿಸಿ ಮುಸ್ಲಿಮರನ್ನು ಕೊಂದು ನಾಶ ಮಾಡಲು ಉದ್ಯುಕ್ತರಾದರು. ಆ ಸಂದರ್ಭದಲ್ಲಿ ಪರಮಾತ್ಮನಿಂದ ಹೀಗೆ ಆಜ್ಞೆಯುಂಟಾಯಿತು. "ಇನ್ನು ಈ ಹಿಂಸೆಗೊಳಗಾದ ಮುಸ್ಲಿಮರಿಗೆ ತಮ್ಮೊಡನೆ ಯುದ್ಧ ಮಾಡುವವರೊಡನೆ ಯುದ್ಧ ಮಾಡಲು ಅನುಮತಿಯನ್ನೀಯಲಾಗಿದೆ; ನಿಶ್ಚಯವಾಗಿಯೂ ಅಲ್ಲಾಹು ಅವರಿಗೆ ಸಹಾಯವನ್ನೀಯಲು ಶಕ್ತನು." (22.39) ಯಾವ ಸಂದರ್ಭದಲ್ಲಿ ಮುಸ್ಲಿಮರಿಗೆ ಖಡ್ಗವನ್ನೆತ್ತುವುದು ಅನಿವಾರ್ಯವಾಯಿತೆಂಬುದು ಪ್ರಸ್ತುತ ಖುರ್‌ಆನ್ ವಚನ ನಮಗೆ ವ್ಯಕ್ತವಾಗಿ ತಿಳಿಸುತ್ತದೆ. ಆದರೆ ಯುದ್ಧದ ಸಮಯದಲ್ಲಿ ಕೂಡ ಅಕ್ರಮ ಮತ್ತು ಅನ್ಯಾಯ ಮಾಡಬಾರದೆಂದು ಇಸ್ಲಾಂ ಎಚ್ಚರಿಸುತ್ತದೆ. ಪವಿತ್ರ ಖುರ್‌ಆನ್ ಹೇಳುವುದನ್ನು ನೋಡಿರಿ. "ದೈವಮಾರ್ಗದಲ್ಲಿ ನಿಮ್ಮೊಡನೆ ಯುದ್ಧ ಮಾಡುವವರೊಡನೆ ಮಾತ್ರ ಯುದ್ಧ ಮಾಡಿರಿ. ಆದರೆ ಅತಿಕ್ರಮಣ ಮಾಡಬಾರದು. ಖಂಡಿತವಾಗಿ ಅಲ್ಲಾಹು ನ್ಯಾಯವನ್ನು ಮೀರುವವರನ್ನು ಪ್ರೀತಿಸುವುದಿಲ್ಲ.'' (2.190) ಯುದ್ಧ ಮಾಡುತ್ತಿರುವಾಗಲೇ ಶತ್ರುಗಳು ಸಂಧಿಗೆ ಬರುವರಾದರೆ ನೀವು ಸಹ ಅದನ್ನು ಒಪ್ಪಬೇಕೆಂದು ಖುರ್‌ಆನ್ ಕಲಿಸುತ್ತದೆ. ಅದು ಹೀಗೆನ್ನುತ್ತದೆ. "ಅವರು (ಶತ್ರುಗಳು) ಸಂಧಾನಕ್ಕೆ ಒಪ್ಪುವರಾದರೆ ನೀನು ಸಹ ಅದಕ್ಕೆ ಸನ್ನದ್ಧನಾಗು; ಮತ್ತು ಅಲ್ಲಾಹುವಿನಲ್ಲಿ ಭರವಸೆಯನ್ನಿಡು." (8.61) ಯುದ್ಧದ ಸಂದರ್ಭದಲ್ಲಿ ಸ್ತ್ರೀಯರನ್ನೂ ಮಕ್ಕಳನ್ನೂ ಕೊಲ್ಲಬಾರದೆಂದೂ ದೈವಾಲಯಗಳನ್ನು ಹಾಳುಗೆಡಹಬಾರದೆಂದೂ ಕೃಷಿಯನ್ನು ನಾಶಪಡಿಸಬಾರದೆಂದೂ ಮುಸ್ಲಿಮರಿಗೆ ಇಸ್ಲಾಂ ಉಪದೇಶಿಸುತ್ತದೆ. ಇಸ್ಲಾಮಿನ ಈ ಉಪದೇಶಗಳು ಸುವರ್ಣಾಕ್ಷರಗಳಲ್ಲಿ ಬರೆಯಲರ್ಹವಾಗಿವೆ. ಯುದ್ಧ ಮಾಡುವ ಸಂದರ್ಭ ಬಂದರೂ ಸಹ ಮರ್ಯಾದೆ ಮತ್ತು ಮನುಷ್ಯತ್ವದ ಸೀಮೆಯನ್ನು ಉಲ್ಲಂಘಿಸಕೂಡದೆಂಬ ಉಪದೇಶವನ್ನೀಯುವ ಮತವನ್ನು ಖಡ್ಗದ ಬಲದಿಂದ ಪ್ರಚಾರಗೊಂಡ ಮತವೆಂದು ಶತ್ರುಗಳು ಚಿತ್ರೀಕರಿಸುತ್ತಾರೆ. ಮತಪ್ರಚಾರಕ್ಕೋಸ್ಕರ ಮುಸ್ಲಿಮರು ಬಲಪ್ರಯೋಗಿಸಿದರೆಂದು ಅವರು ಹೇಳುತ್ತಾರೆ. ಆದರೆ ಸತ್ಯವು ತೀರಾ ವಿರುದ್ಧವಾಗಿದೆ. ಮತಪ್ರಚಾರಕ್ಕಲ್ಲ; ಮತ ಸ್ವಾತಂತ್ರ್ಯಕ್ಕಾಗಿತ್ತು ಯುದ್ಧ ಮಾಡಲು ಇಸ್ಲಾಂ ಮುಸ್ಲಿಮರಿಗೆ ಆಜ್ಞಾಪಿಸಿದ್ದು. ಪವಿತ್ರ ಖುರ್‌ಆನ್ ಹೇಳುತ್ತದೆ: "ಯುದ್ಧ ಮಾಡುವ, ಸಂದರ್ಭ ಬಂದರೆ ಯುದ್ಧಕಾರಕವಾದ ಒಳಸಂಚುಗಳು ನಿಶ್ಶೇಷವಾಗಿ, ಮತವು ದೈವಕಾರ್ಯಕ್ಕಾಗಿ ಮಾರ್ಪಡು

ವಂತೆ ಬದಲಾವಣೆ ಉಂಟಾಗುವ ವರೆಗೆ ಹೋರಾಡಿರಿ.'' (2:193) ಇದರಿಂದ ತಿಳಿದು ಬರುವುದೇನೆಂದರೆ ಮತ ಕಾರ್ಯವು ದೈವಕ್ಕೆ ಸಂಬಂಧಿಸಿದ್ದು ಎಂದು. ಅದರಲ್ಲಿ ಇತರರು ಕೈ ಹಾಕುವ ಅಗತ್ಯವಿಲ್ಲ. ಹಾಗೆ ಮಾಡುವುದು ಬಲಾತ್ಕಾರವಾಗಿದೆ. ಹಾಗಿರುವ ಮತಸ್ವಾತಂತ್ರ್ಯವನ್ನು ವಿರೋಧಿಸುವ ಬಲಾತ್ಕಾರವನ್ನು ಇಸ್ಲಾಂ ವಿರೋಧಿಸುತ್ತದೆ.

ಮುಸ್ಲಿಮರಿಗೆ ಮತಸ್ವಾತಂತ್ರ್ಯಕ್ಕಾಗಿ ಯುದ್ಧ ಮಾಡುವ ಸಂದರ್ಭ ಬಂದರೆ ಅವರ ಮತದ ಸ್ವಾತಂತ್ರ್ಯವನ್ನು ಸಂರಕ್ಷಿಸಿದರೆ ಸಾಲದೆಂದೂ ಇತರ ಮತಾನುಯಾಯಿಗಳಿಗೂ ಅವರವರ ಮತಾನುಷ್ಠಾನಗಳನ್ನು ನಿರ್ವಹಿಸುವ ಮತ್ತು ಅವರ ದೇವಾಲಯಗಳಲ್ಲಿ ಆರಾಧಿಸುವ ಸ್ವಾತಂತ್ರ್ಯವನ್ನು ಉಂಟು ಮಾಡಿ ಕೊಡುವುದು ಸಹ ಯುದ್ಧದ ಉದ್ದೇಶವಾಗಿರಬೇಕೆಂದೂ ಪವಿತ್ರ ಖುರ್ ಆನ್ ಕಲಿಸುತ್ತದೆ. ಅದು ಹೇಳುವುದನ್ನು ನೋಡಿರಿ. "ಅಲ್ಲಾಹು ನಮ್ಮ ಪ್ರಭುವೆಂದು ಹೇಳಿದ ಕಾರಣದಿಂದ ಮಾತ್ರ ಅನ್ಯಾಯವಾದ ರೀತಿಯಲ್ಲಿ ಅವರು ಆಕ್ರಮಿಸಲ್ಪಟ್ಟರು. ಆಕ್ರಮಶೀಲರನ್ನು ಇತರರ ಮುಖಾಂತರ ಪ್ರತಿಭಟಿಸದೆ ಇರುತಿದ್ದರೆ ಮಠಗಳೂ, ಕ್ರೈಸ್ತ ದೇವಾಲಯಗಳೂ, ಯಹೂದ್ಯರ ಉಪಾಸನ ಮಂದಿರಗಳೂ, ಮುಸ್ಲಿಮರ ಮಸೀದಿಗಳೂ ದಿಟವಾಗಿಯೂ ನಾಶಗೊಳಿಸಲ್ಪಡುತ್ತಿದ್ದವು. ಆ ಸ್ಥಳಗಳು ದೈವ ಸ್ಮರಣೆಗಾಗಿ ಉಪಯೋಗಿಸಲ್ಪಡುವ ಸ್ಥಳಗಳಾಗಿವೆ.'' (22:40)

ಇಂತಹ ಮಹತ್ವಪೂರ್ಣವಾದ ಉಪದೇಶಗಳನ್ನು ಇಸ್ಲಾಂ ನೀಡಿರುವಾಗ, ಯುದ್ಧ ಮಾಡಿ ಇತರರನ್ನು ಮುಸ್ಲಿಮರನ್ನಾಗಿ ಪರಿವರ್ತಿಸಬೇಕೆಂಬುದು ಇಸ್ಲಾಮಿನ ಉಪದೇಶವೆಂದು ಆರೋಪಿಸುವುದು ಕಠೋರ ಅನೀತಿಯಾಗಿದೆ.

ಇನ್ನು ಕೊನೆಯದಾಗಿ, ಯುದ್ಧ ಮಾಡಿದ ನಂತರ ಸೋತವರೊಡನೆ ಹೇಗೆ ವರ್ತಿಸಬೇಕೆಂಬುದರ ಉತ್ತಮ ಮಾರ್ಗದರ್ಶನವನ್ನು ಇಸ್ಲಾಂ ಮತ ಸ್ಥಾಪಕರಾದ ಮುಹಮ್ಮದ್ ಪೈಗಂಬರರ ಜೀವನ ಚರಿತ್ರೆಯಿಂದ ಉದ್ಧರಿಸಬಹುದಾಗಿದೆ. ಆ ಚಾರಿತ್ರಿಕ ಸಂಭವವನ್ನು ಒಬ್ಬ ಪಾಶ್ಚಾತ್ಯ ಚರಿತ್ರೆಕಾರನಾದ ಮಿಸ್ಟರ್ ಸ್ಟೇನ್‌ಲೀ ಲೇನ್‌ಪೂಲ್ ಹೀಗೆ ಬರೆದಿದ್ದಾರೆ: "ಅದು ಮುಹಮ್ಮದ್ (ಪೈಗಂಬರ್)ರವರು ಶತ್ರುಗಳಿಗೆ ಪ್ರತೀಕಾರವನ್ನುಂಟು ಮಾಡುವ ಸಂದರ್ಭವಾಗಿತ್ತು. ಅವರ ಹಳೆಯ ವೈರಿಗಳು ಮುಹಮ್ಮದರ ಪಾದದಡಿಯಲ್ಲಿ ಬಂದು ಬಿದ್ದಿದ್ದಾರೆ. ಏನು! ಅವರು ನಿಷ್ಕರುಣೆಯಿಂದ ಶತ್ರುಗಳನ್ನು ನಾಶ ಮಾಡುವರೋ ? ಭಯಂಕರವಾದ ಶಿಕ್ಷೆಗೆ ಅವರನ್ನು ಗುರಿಪಡಿಸುವರೋ ?

"ಅದು ಒಬ್ಬನ ಯಥಾರ್ಥ ಸ್ವರೂಪವು ಪ್ರಕಟವಾಗುವ ಸಂದರ್ಭವಾಗಿತ್ತು. ಆ ಸಮಯದಲ್ಲಿ ವಿಧಿಸಬಹುದಾದ ಶಿಕ್ಷೆಯ ಕುರಿತು ಊಹಿಸುವಾಗಲೇ ರೋಮಾಂಚನವುಂಟಾಗುತ್ತದೆ. ಅದರ ಭೀಕರತೆಯನ್ನು ಭಾವಿಸುವಾಗಲೇ ಅಸಹ್ಯವಾಗುತ್ತದೆ. ಆದರೆ ಸಂಭವಿಸಿದ್ದು ಏನು? ರಕ್ತದ ಕಾಲುವೆ ಎಲ್ಲಿ ? ಸಾವಿರಗಟ್ಟಲೆ ಕೊಲ್ಲಲ್ಪಟ್ಟವರ ಶವವೆಲ್ಲಿ ? ಸಂಭವಿಸಿದ್ದೆಲ್ಲಾ ತದ್ವಿರುದ್ಧವಾಗಿತ್ತು. ಯಾವ ದಿನದಂದು ಪೈಗಂಬರರು ತನ್ನ ಶತ್ರುಗಳನ್ನು ಜಯಿಸಿದ್ದರೋ ಅದೇ ದಿನ ತನ್ನ ಮನೋವಿಕಾರಗಳನ್ನು ಸಹ ಜಯಿಸಿದ್ದರು. ಶತ್ರುಗಳು ವರ್ಷಗಟ್ಟಲೆ ಕಾಲ ಅವರನ್ನು ಏನೆಲ್ಲಾ ರೀತಿಯಲ್ಲಿ ಪೀಡಿಸುತ್ತಾ ಇದ್ದುದ್ದನ್ನೂ ನಿಷ್ಕಾರುಣ್ಯವಾಗಿ ಅವರನ್ನು ನಿಂದಿಸಲಿಕ್ಕೂ ಅಪಮಾನಿಸಲಿಕ್ಕೂ ಟೊಂಕಕಟ್ಟಿ ಹೊರಟಿದ್ದನ್ನೂ ವಿಶಾಲ ಹೃದಯಿಯಾದ ಪೈಗಂಬರರು ಮರೆತು ಮಕ್ಕಾ ನಿವಾಸಿಗಳೆಲ್ಲರಿಗೂ ಕ್ಷಮೆ ನೀಡಿದರು."

ಈ ಚಾರಿತ್ರಿಕ ಸಂಭವದಿಂದ, ಜಯಿಸಲ್ಪಟ್ಟ ಜನರನ್ನಾಗಲೀ ಬಲ ಪ್ರಯೋಗಿಸಿ ಇಸ್ಲಾಂ ಮತವನ್ನು ಸ್ವೀಕರಿಸುವಂತೆ ಪೈಗಂಬರರೂ ಅನುಚರರೂ ತಯಾರಿರಲಿಲ್ಲವೆಂದು ವ್ಯಕ್ತವಾಗುತ್ತದೆ.

ಸಂಕ್ಷಿಪ್ತವಾಗಿ, ಧಾರ್ಮಿಕ ವಿಶ್ವಾಸದ ಸಂರಕ್ಷಣೆಗೋಸ್ಕರ ಯುದ್ಧ ಮಾಡುವುದನ್ನು ಇಸ್ಲಾಂ ಸಮ್ಮತಿಸುವುದಾದರೂ ಇಸ್ಲಾಮಿಕ ದೃಷ್ಟಿಯಲ್ಲಿ ಅಂತಹ ಜಿಹಾದ್ ಸಣ್ಣ ಜಿಹಾದ್ ಆಗಿದೆ. ತನ್ನ ಮನೋವಿಕಾರಗಳನ್ನು ಸನ್ಮಾರ್ಗದೆಡೆಗೆ ಕೊಂಡೊಯ್ಯಲಿಕ್ಕಾಗಿರುವ ಹೋರಾಟ ದೊಡ್ಡ ಜಿಹಾದ್ ಹಾಗೂ ಶ್ರೇಷ್ಠವಾದದ್ದು.

# ಇಸ್ಲಾಂ-ಸಮಾಧಾನದ ಮತ*

ಹಝ್ರತ್ ಮಿರ್ಝಾ ನಾಸಿರ್ ಅಹ್ಮದ್, ಖಲೀಫತುಲ್ ಮಸೀಹ್ III

ಮನುಷ್ಯರೊಡನೆ ಮನುಷ್ಯರಿಗಿರುವ ಹಕ್ಕು ಬಾಧ್ಯತೆಗಳಲ್ಲಿ ಅತಿಮಹತ್ವದ್ದು ಸಮಾಧಾನದಿಂದ ಜೀವಿಸುವ ಹಕ್ಕಷ್ಟೆ. ಇಸ್ಲಾಂ ಶಾಂತಿಯ ಮತ್ತು ಸಮಾಧಾನದ ಮತವಾಗಿದೆ. ಇದಕ್ಕೆಸಂಬಂಧಪಟ್ಟನೂರಾರು ಖುರಾನ್ ವಾಕ್ಯಗಳನ್ನೂ ಪೈಗಂಬರರ ವಚನಗಳನ್ನೂ ಉದಾಹರಿಸಬಹುದಾದರೂ, ಅವುಗಳಲ್ಲಿ ಪ್ರಧಾನವಾದ ಎಂಟು ಕಾರ್ಯಗಳನ್ನು ಮಾತ್ರವೇ ನಾನಿಲ್ಲಿ ಹೇಳಲಿಚ್ಛಿಸುವೆನು.

ಒಂದನೆಯದಾಗಿ, ಮತಗಳು ತಮ್ಮೊಳಗೆ ಅತ್ಯುತ್ತಮವಾದ ಒಂದು ಬಾಂಧವ್ಯವನ್ನು ಸ್ಥಾಪಿಸಿಕೊಳ್ಳುವುದು ಅತಿ ಪ್ರಧಾನವಾದ ಒಂದು ಪ್ರಶ್ನೆಯಾಗಿ ಇಸ್ಲಾಂ ಪರಿಗಣಿಸುತ್ತದೆ. "ವ ಇನ್‌ಮಿನ್ ಉಮ್ಮತಿನ್ ಇಲ್ಲಾ ಖಲಾ ಫೀಹಾನದೀರ್''– ಒಬ್ಬ ಪ್ರವಾದಿಯು ನಿಯೋಗಿಸಲ್ಪಡದ ಸಮುದಾಯವೇ ಇಲ್ಲ ಎಂದು ಖುರಾನ್ ಹೇಳುತ್ತದೆ. ಈ ತತ್ವವನ್ನನುಸರಿಸಿ ಎಲ್ಲಾ ಮತಸ್ಥಾಪಕರನ್ನೂ ಮತಾಚಾರ್ಯರನ್ನೂ ಬಹುಮಾನಾದರಗಳಿಂದ ಕಾಣಲು ಒಬ್ಬ ಮುಸ್ಲಿಮನು ಬಾಧ್ಯಸ್ಥನಾಗುತ್ತಾನೆ; ಆದರಿಸುತ್ತಲೂ ಇರುವನು. ಈ ರೀತಿಯಲ್ಲಿ ಶಾಂತಿ ಮತ್ತು ಸೌಹಾರ್ದಮಯವಾದ ಒಂದು ವಾತಾವರಣವನ್ನು ಇಸ್ಲಾಂ ನಿರ್ಮಿಸುತ್ತದೆ.

ಎರಡನೆಯದಾಗಿ ಇತರ ಮತಸ್ಥರ ಆರಾಧಕವಸ್ತುಗಳನ್ನೂ ಮಾರ್ಗದರ್ಶಕಗಳನ್ನೂ ಅವಹೇಳನೆಮಾಡುವುದನ್ನು ಮತ್ತು ನಿಂದಿಸುವುದನ್ನು ಇಸ್ಲಾಂ ವಿರೋಧಿಸುತ್ತದೆ. ವಿಗ್ರಹಗಳನ್ನು ಕೂಡಾ ಅವಹೇಳನೆಮಾಡಬಾರದೆಂದು ಇಸ್ಲಾಂ ಬಲವಾಗಿ ನಿಷ್ಕರ್ಷಿಸುತ್ತದೆ.

ಮೂರನೆಯದಾಗಿ ಮತಸ್ವಾತಂತ್ರ್ಯವನ್ನು (Religious freedom) ಇಸ್ಲಾಂ ಸಮ್ಮತಿಸುತ್ತದೆ. "ಲಾ ಇಕ್‌ರಾಹ ಫಿದ್ದೀನ್"—ಮತಕಾರ್ಯಗಳಲ್ಲಿ ಕಡ್ಡಾಯವಿಲ್ಲ; ಬಲತ್ಕಾರವಿಲ್ಲ—ಎಂದು ಖುರಾನ್ ಘೋಷಿಸಿರುತ್ತದೆ. ಧರ್ಮವು ಹೃದಯ ಸಂಬಂಧಿತವಾಗಿದೆ. ಮಾನಸಿಕವಾದ ಅಭಿಪ್ರಾಯಗಳನ್ನು ಮಾರ್ಪಡಿಸಲು ಆಟಂ ಬಾಂಬುಗಳಿಂದಲೂ ಸಾಧ್ಯವಿಲ್ಲವೆಂಬುದು ಪರಮಾರ್ಥ.

ನಾಲ್ಕನೆಯದಾಗಿ ನಿಯಮಾಡಳಿತ (Rule of Law) ವನ್ನು ಇಸ್ಲಾಂ ಸಮ್ಮತಿಸುತ್ತದೆ.

ಐದನೆಯದಾಗಿ, ರಾಷ್ಟ್ರಾಂತರ ಬಾಂಧವ್ಯವು ಧಾರ್ಮಿಕ ತತ್ವಗಳ ಮೇಲೆ ಆಧರಿತವಾಗಿರಬೇಕೆಂದು ಇಸ್ಲಾಂ ನಿಷ್ಕರ್ಷಿಸುತ್ತದೆ. ಆದ್ದರಿಂದ ಎಷ್ಟು ದೊಡ್ಡ ರಾಷ್ಟ್ರಕ್ಕಾದರೂ ಅದು ರಷ್ಯಕ್ಕೋ ಅಮೇರಿಕಕ್ಕೋ ಆದರೂ ಕೂಡಾ "ವೀಟೋ'' ಎಂಬ ತಡೆಯುವ ಅಧಿಕಾರವು ಇರಕೂಡದು. ಸಾರ್ವದೇಶೀಯ ಬಾಂಧವ್ಯವು ಧಾರ್ಮಿಕ ಬೋಧನೆಗಳನ್ನು ಅನುಸರಿಸಿ ಇರಬೇಕಾಗಿದೆ. ಒಂದು ರಾಷ್ಟ್ರಕ್ಕೆ ಹೆಚ್ಚು ಶಕ್ತಿಯಿರುವುದೆಂಬ ಕಾರಣದಿಂದ ಮಾತ್ರ ಅದಕ್ಕೆ ಹೆಚ್ಚಿನ ಹಕ್ಕು ಸಮ್ಮತಿಸಿ ಕೊಡಬಾರದು.

ಆರನೆಯದಾಗಿ, ಮನುಷ್ಯರು ದೇಶ, ರಾಜ್ಯ, ವರ್ಣ ಇತ್ಯಾದಿಗಳಲ್ಲಿ ವ್ಯತ್ಯಾಸ ಉಳ್ಳವರಾದರೂ ಇಸ್ಲಾಮಿನ ದೃಷ್ಟಿಯಿಂದ ಸಮಾನರಾಗಿದ್ದಾರೆಂದು ಅದು ಘೋಷಿಸುತ್ತದೆ. ಖುರಾನಿನ ವೀಕ್ಷಣ ಪ್ರಕಾರ ದೈವ ಸನ್ನಿಧಿಯಲ್ಲಿ ಸರ್ವರೂ ಸಮಾನರಾಗಿರುವರು.

ಏಳನೆಯದಾಗಿ, ಇಸ್ಲಾಂ ನೀತಿ ಪಾಲನೆಯನ್ನು ಆಜ್ಞಾಪಿಸುತ್ತದೆ. "ಲಾಯಜ್‌ರಿ ಮನ್ನವ್ ಶನಆನು ಖೌಮಿನ್ ಅಲಾ ಅಲ್ಲಾ ತಅ್‌ದಿಲೂ ಇಯ್‌ದಿಲೂ ಹೂವ ಅಖ್‌ರಬು ಅತ್ತಕ್ವಾ''–ಒಂದು ಸಮುದಾಯದೊಡನೆ ನಿಮಗಿರುವ ವಿರೋಧವು ನಿಮ್ಮನ್ನು ಅವರೊಡನೆ ಅನೀತಿಯಿಂದ ವರ್ತಿಸುವಂತೆ ಮಾಡದಿರಲಿ. ನೀವು ನೀತಿಯಿಂದ ವರ್ತಿಸಿರಿ. ಅದು ಭಕ್ತಿ ಮಾರ್ಗವಾಗಿದೆ. ಎಂದು ಖುರಾನ್ ಪ್ರಖ್ಯಾಪಿಸಿರುವುದು.

ಎಂಟನೆಯದಾಗಿ, ಪರಸ್ಪರ ಕರಾರು ಅಥವಾ ಒಪ್ಪಂದವನ್ನುಂಟುಮಾಡಿದ ಮೇಲೆ ಅದನ್ನು ಸಂಪೂರ್ಣವಾಗಿ ಪಾಲಿಸಬೇಕೆಂದು ಇಸ್ಲಾಂ ಒತ್ತಾಯಿಸುತ್ತದೆ.

---

* ಸ್ವಿಡರ್‌ಲೇಂಡಿನ ಜೂರಿಕ್ ಪಟ್ಟಣದಲ್ಲಿ ಒಂದು ಸತ್ಕಾರ ಕೂಟದಲ್ಲಿ ಮಾಡಿದ ಭಾಷಣದ ಒಂದು ಭಾಗ.

# ದೈವ ಚಿಂತನೆ

— ಲೇಖಕ: ಮೌಲಾನಾ ಅಬ್ದುಲ್ಲಾ ಸಾಹೆಬ್ H. A. —

ದೈವಾಸ್ತಿಕ್ಯದ ಕುರಿತಿರುವ ಪ್ರಶ್ನೆಯು ಆಸ್ತಿಕ–ನಾಸ್ತಿಕರೆಡೆಯಲ್ಲಿರುವ ಒಂದು ವಿವಾದ ವಿಷಯವಾಗಿದೆ. ಅವರೆಡೆಯಲ್ಲಿ ಇದಕ್ಕಿಂತಲೂ ಮಿಗಿಲಾದ ಪ್ರಶ್ನೆ ಇಲ್ಲವೆಂದೇ ಹೇಳಬಹುದು. ಲೋಕದ ಎಲ್ಲಾ ಮತಗಳೂ ದೈವಾಸ್ತಿಕ್ಯದ ಕುರಿತು ಪ್ರತಿಪಾದಿಸುತ್ತವೆ. ಆದರೆ ಹೈತುಕವಾದಿಗಳೆಂದು ಸ್ವಯಂ ಅಭಿಮಾನಿಸುವ ಕೆಲವರು ತಮಗೆ ಕಣ್ಣಿನಿಂದ ಕಾಣಲಿಕ್ಕೋ ಇತರ ಬಾಹ್ಯೇಂದ್ರಿಯಗಳಿಂದ ತಿಳಿಯಲಿಕ್ಕೋ ಸಾಧ್ಯವಿಲ್ಲದ ಒಬ್ಬ ದೇವನಲ್ಲಿ ವಿಶ್ವಾಸವಿಡುವುದನ್ನೂ ಹಾಗೆ ಓರ್ವನಿರುವನೆಂದು ಹೇಳುವುದನ್ನೂ ಅಸಂಬದ್ಧವೆಂದು ಘೋಷಿಸುತ್ತಾರೆ. ಮತದ ಸರ್ವಪ್ರಧಾನವಾದ ಈ ವಿಷಯಕ್ಕೆ ಸಂಬಂಧಿಸಿದ ವಿವಾದವನ್ನು ಚರ್ಚಾ ವಿಷಯವನ್ನಾಗಿ ಮಾಡುವ ಅಗತ್ಯವಿದೆಯೋ ಎಂಬ ಪ್ರಶ್ನೆ ಯಾವನೇ ನಿಷ್ಪಕ್ಷವಾಗಿ ಚಿಂತಿಸುವವನಿಗೆ ಸ್ವಾಭಾವಿಕವಾಗಿ ಉಂಟಾಗುತ್ತದೆ. ಮುಖ್ಯವಾಗಿ ನಿರೀಶ್ವರವಾದಿಗಳ ದೃಷ್ಟಿಯಲ್ಲಿ ಈ ಪ್ರಶ್ನೆಯು ಇನ್ನೂ ಹೆಚ್ಚು ವಿಚಾರಕ್ಕೆ ಗುರಿಯಾಗಬೇಕಾದ ಪ್ರಸಂಗವಾಗಿದೆ. ಇದರ ನಿಜಸ್ಥಿತಿಯನ್ನು ತಿಳಿಯುವುದು ಗುಣಕಾರಿಯೂ ತಿಳಿಯದಿರುವುದು ನಾಶಕಾರಿಯೂ ಆಗುವುದೆಂದು ರುಜುವಾಗುವುದಾದರೆ, ಅದರ ಕುರಿತು ಚಿಂತಿಸಬೇಕಾದದ್ದು ಅತ್ಯಂತಾಪೇಕ್ಷಿತವೆಂದು ಯಾವನೇ ವಿವೇಕಿ ಸಮ್ಮತಿಸುವನು. ಒಂದು ಸಂಗತಿಯನ್ನು ನಾವು ಚರ್ಚಾ ವಿಷಯವನ್ನಾಗಿ ಮಾಡುವುದು ಅದರ ಗುಣ ದೋಷಗಳನ್ನು ಹೊಂದಿಕೊಂಡಾಗಿರಬಹುದು. ಹಾಗೆ ಒಂದರ ಕುರಿತು ಚಿಂತಿಸಿ ಅದರ ನಿಜಸ್ಥಿತಿಯನ್ನು ತಿಳಿಯುವುದು ಗುಣಕಾರಿಯೂ ಚಿಂತಿಸದೆ ಅದನ್ನು ಅಗಣ್ಯ ಮಾಡುವುದು ದೋಷಕಾರಿಯೂ ಆಗುವುದೆಂದಾದರೆ, ಖಂಡಿತವಾಗಿಯೂ ಅದರ ಕುರಿತು ಚಿಂತಿಸಿ ಅದರ ವಸ್ತುಸ್ಥಿತಿಯನ್ನು ತಿಳಿಯಬೇಕಾದುದು ಅತ್ಯಾವಶ್ಯಕವಾಗಿದೆ. ದೇವನೊಬ್ಬನಿದ್ದರೆ ಅವನಲ್ಲಿ ವಿಶ್ವಾಸವನ್ನಿಡಬೇಕಾದುದು ಶ್ರೇಯಸ್ಕರವೂ ಅವನನ್ನು ನಿರಾಕರಿಸುವುದು ನಾಶಹೇತುಕವೂ ಆಗಿದೆಯೆಂದು ಸಮ್ಮತಿಸದೆ ನಿರ್ವಾಹವಿಲ್ಲ. ದೈವಕ್ಕೆ ಸಂಬಂಧಿಸಿದ ವಿಶ್ವಾಸ ಬರೇ ಸೈದ್ಧಾಂತಿಕವಲ್ಲ. ಅದು ಒಂದು ವೈಜ್ಞಾನಿಕ ತತ್ವದ ರೀತಿಯಲ್ಲಿ ಕೇವಲ ಸೈದ್ಧಾಂತಿಕವಾಗಿದ್ದರೆ ಅದರ ಕುರಿತು ಚಿಂತಿಸಿ ತಿಳಿಯುವುದರಿಂದ ಅಂತಹ ದೊಡ್ಡ ಪ್ರಯೋಜನವಾಗಲೀ ಚಿಂತಿಸದೆ ಇರುವುದರಿಂದ ದೊಡ್ಡ ನಷ್ಟವಾಗಲೀ ಉಂಟಾಗಲಾರದೆಂದು ಭಾವಿಸಬಹುದಿತ್ತು. ಆದರೆ ದೇವನಿರುವನೆಂದಾಗುವಾಗ ಅವನೊಡನಿರುವ ನಂಬಿಕೆ ಶಾರೀರಿಕ, ಆತ್ಮಿಕ, ಭೌತಿಕ, ಪಾರತ್ರಿಕ ಎಂಬ ನಮ್ಮ ಜೀವಿತದ ನಾನಾ ಭಾಗಗಳನ್ನೆಲ್ಲಾ ಸ್ಪರ್ಶಿಸುವುದು, ಹಾಗೂ ಅವನೊಡನಿರುವ ನಿಷ್ಠೆ ನಮ್ಮ ಎಲ್ಲಾ ಉತ್ಕರ್ಷಕ್ಕೂ ಕಾರಣವಾಗುವುದು; ಹಾಗೆಯೇ ಅವನ ಕುರಿತು ಚಿಂತಿಸದೆ ಇರುವುದು ಭಯಂಕರ ನಾಶಕ್ಕೆ ಹೇತುವಾಗುವುದು. ಆದುದರಿಂದ ಖಂಡಿತವಾಗಿಯೂ ದೈವಾಸ್ತಿಕ್ಯದ ಕುರಿತು ಆತ್ಮಾರ್ಥವಾಗಿ ಚಿಂತಿಸಬೇಕಾದುದು ಆವಶ್ಯಕವಾಗಿದೆ. ಅಷ್ಟು ಮಾತ್ರವಲ್ಲ, ದೇವರ ಕುರಿತು ಚಿಂತಿಸಲು ಮನಸ್ಸಾಕ್ಷಿಯೂ ವಿಚಾರಬುದ್ಧಿಯೂ ನಮ್ಮನ್ನು ಎಚ್ಚರಿಸುತ್ತಲೂ ಇದೆ.

---

[ 10ನೇ ಪುಟದಿಂದ ]

ಕರಾರಿನ ಉಲ್ಲಂಘನೆಯು ಕಲಹಕ್ಕೂ ಅಶಾಂತಿಗೂ ಕಾರಣವಾಗುವುದು. ಶಾಂತಿಯುತ ವಾತಾವರಣವನ್ನು ಸೃಷ್ಟಿಸಲು ಅದೊಂದು ಅಡ್ಡಿಯೂ ಆಗಿರುವುದು.

ನಾನು ನಿಮ್ಮ ಮುಂದೆ ವಿವರಿಸಲಿಚ್ಛಿಸುವುದು ಈ ಎಂಟು ಕಾರ್ಯಗಳನ್ನಾಗಿವೆ. ಇದರಲ್ಲಿ ಪ್ರತಿಯೊಂದು ವಿಷಯದ ಕುರಿತೂ ಗಂಟೆಗಟ್ಟಲೆ ವಿವರಿಸಿ ಹೇಳಬಹುದು. ನಿಮ್ಮ ಹೃದಯಗಳಲ್ಲಿ ಒಂದು ನವೋತ್ಸಾಹವನ್ನು ಉಂಟುಮಾಡಲಿಕ್ಕಾಗಿ ಮಾತ್ರವೇ ನಾನಿಷ್ಟು ಹೇಳಿರುವುದು. ಇಸ್ಲಾಮಿನಂತಹ ಒಂದು ಮತವನ್ನು ಹಾಗೆಯೇ ಅವಗಣಿಸಿ ಬಿಡಲಾಗದು. ಆದುದರಿಂದ ನೀವೆಲ್ಲರೂ ಅದರ ಕುರಿತು ಕಲಿಯಲೂ ಆಲೋಚಿಸಲೂ ಮುಂದಾಗಬೇಕು. ನಿಮಗೆಲ್ಲರಿಗೂ ಕೃತಜ್ಞತೆಗಳು. ಸರ್ವಶಕ್ತನಾದ ದೇವರು ನಮಗೆಲ್ಲರಿಗೂ ಜೀವಿತೋದ್ದೇಶಗಳನ್ನು ಪಡೆಯಲು ಸಹಾಯ ಮಾಡುವಂತಾಗಲಿ.

ಸಂಗ್ರಹ: **ಎಂ. ಪಿ. ಇಬ್ರಾಹಿಂ.**

ಈ ಪ್ರಪಂಚದ ಸೃಷ್ಟಿಕರ್ತನೂ ನಿಯಂತ್ರಕನೂ ಆದ ಒಬ್ಬ ದೇವನಿರಬೇಕಾಗಿದೆಯೆಂದು ಪ್ರತಿಯೊರ್ವ ಮನುಷ್ಯನ ಮನಸ್ಸಾಕ್ಷಿ, ಅದು ಕೆಟ್ಟ ಶಿಕ್ಷಣಕ್ಕೂ ದುಃಸ್ಸಂಗಕ್ಕೂ ಗುರಿಯಾಗಿ ನಿರ್ಜೀವವಾಗಿಲ್ಲವಾದರೆ, ಅವನನ್ನು ಪದೇ ಪದೇ ಎಚ್ಚರಿಸುತ್ತದೆ. ನಮ್ಮ ಸೃಷ್ಟಿಕರ್ತನು ಒಬ್ಬನಿರುವನಾದರೆ ಅವನು ನಮ್ಮನ್ನು ಸೃಷ್ಟಿಸಲು ಏನೋ ಒಂದು ಉದ್ದೇಶವಿರಬೇಕೆಂದೂ ನಮ್ಮ ಜೀವಿತ ಆ ಉದ್ದೇಶವನ್ನು ಸಾಧಿಸುವುದಕ್ಕಲ್ಲದೆ ಕೇವಲ ಮೃಗಗಳಂತೆ ಶಾರೀರಿಕೇಚ್ಛೆಗಳನ್ನು ಮಾತ್ರ ನಿರ್ವಹಿಸುವುದಕ್ಕಾಗಿರಲಿಕ್ಕಿಲ್ಲವೆಂಬ ಪ್ರಜ್ಞೆ ನಮ್ಮ ಅಂತಃಕರಣದಲ್ಲಿ ಉಂಟಾಗುತ್ತದೆ. ಆದರೆ ಈ ಪ್ರಶ್ನೆಗೆ ಮನಸ್ಸಾಕ್ಷಿ ನೀಡುವ ಸಮಾಧಾನವೇನೆಂಬುದರ ಕುರಿತು ನಾನಿಲ್ಲಿ ಪ್ರತಿಪಾದಿಸಲು ಬಯಸುವುದಿಲ್ಲ. ನಮ್ಮ ಅಂತಃಕರಣದಲ್ಲಿ ದೈವಕ್ಕೆ ಸಂಬಂಧಿಸಿ ಉಂಟಾಗುತ್ತಿರುವ ಪ್ರಚೋದನೆಯು, ನಮಗೆ ಅದನ್ನು ಅವಗಣಿಸಲು ಸಾಧ್ಯವಾಗದ ರೀತಿಯಲ್ಲಿ ಆಗಿಂದಾಗ್ಗೆ ಉಂಟಾಗುತ್ತದೆ. ಹೀಗೆ, ಒಂದನೆಯದಾಗಿ, ನಮ್ಮ ಮನಸ್ಸಾಕ್ಷಿ ಈ ಪ್ರಶ್ನೆಯನ್ನು ನಮ್ಮ ಮುಂದೆ ತರುವುದರಿಂದ ನಾವು ಅದರ ಕುರಿತು ಚಿಂತಿಸಬೇಕಾದುದು ಅತ್ಯಾವಶ್ಯಕವೆಂದೂ ಅದನ್ನು ಅಗಣ್ಯ ಮಾಡುವುದು ಮನಸಾಕ್ಷಿಯನ್ನು ನಿಗ್ರಹಿಸುವುದಕ್ಕೆ ತುಲ್ಯವೆಂದೂ ತಿಳಿದುಬರುತ್ತದೆ. ಹಾಗೆಯೇ ನಮ್ಮ ವಿಚಾರಬುದ್ಧಿಯೂ ಈ ಪ್ರಶ್ನೆಯನ್ನು ನಮ್ಮ ಮುಂದೆ ತರುತ್ತದೆ. ಮನಸ್ಸಾಕ್ಷಿಗಿಂತಲೂ ಹೆಚ್ಚು ವ್ಯಕ್ತವಾಗಿ ಈ ಪ್ರಶ್ನೆಯನ್ನು ನಮ್ಮ ಮುಂದೆ ತರುವುದು ವಿಚಾರಬುದ್ಧಿಯಾಗಿದೆ. ನಮ್ಮನ್ನು ಒಂದು ಪ್ರತ್ಯೇಕ ಉದ್ದೇಶಕ್ಕಾಗಿ ಈ ಲೋಕದಲ್ಲಿ ಸೃಷ್ಟಿಸಿದ ಒಬ್ಬ ದೇವನಿರುವನಾದರೆ, ಆ ದೇವನ ಕುರಿತೂ ಅವನು ನಮ್ಮನ್ನು ಸೃಷ್ಟಿಸಿದ ಉದ್ದೇಶದ ಕುರಿತೂ ವಿಚಾರಮಾಡದೆ ನಾವು ಮೃತಪಡುವುದಾದರೆ ಅದು ನಮ್ಮ ಬಹುದೊಡ್ಡ ನಾಶಕ್ಕೆ ಕಾರಣವಾಗುವುದೆಂದೂ, ಆದುದರಿಂದ ದೇವನಿರುವನೋ ಎಂದು ನಾವು ತಿಳಿಯಲೇ ಬೇಕೆಂದೂ ನಮ್ಮ ವಿಚಾರಬುದ್ಧಿ ಪದೇ ಪದೇ ನಮ್ಮನ್ನು ತಿಳಿಸುತ್ತದೆ. ನಾವು ಈ ಲೋಕದಲ್ಲಿ ಸ್ವೇಚ್ಛೆಯಿಂದ ಬಂದವರೋ? ನಾವು ಕ್ಷಣಭಂಗುರವಾದ ಲೌಕಿಕ ಸುಖವನ್ನನುಭವಿಸಲು ಮಾತ್ರ ಉಂಟಾದವರೋ? ನಮ್ಮ ಸೃಷ್ಟಿಯಲ್ಲಿ ಕಾಣುವ ಅದ್ಭುತಕರವಾದ ಈ ಘಟನಾ ವೈಚಿತ್ರ್ಯಗಳು ನಮ್ಮ ಸ್ವಂತ ಕೃತಿಯೇ? ಇಷ್ಟು ಬುದ್ಧಿಪೂರ್ವಕವಾದ ನಿಯಮಗಳಿಗೆ ಅಧೀನವಾಗಿ ಪ್ರವರ್ತಿಸುತ್ತಿರುವ ಈ ಪ್ರಪಂಚ ಯಾದೃಚ್ಛಿಕವಾಗಿ ಉಂಟಾದದ್ದೋ? ಹೀಗಿರುವ ಪ್ರಶ್ನೆಗಳು ನಮ್ಮ ವಿಚಾರಬುದ್ಧಿಯ ಉತ್ತರವನ್ನು ಬಯಸಿ ಆವಿರ್ಭವಿಸುತ್ತಿರುತ್ತವೆ. ಈ ಪ್ರಶ್ನೆಗಳಿಗೆ ಸರಿಯಾದ ಸಮಾಧಾನ ಕಾಣಲಿಕ್ಕಾಗಿ ನಾವು ಖಂಡಿತವಾಗಿಯೂ ದೇವರನ್ನು ಕುರಿತು ಚಿಂತಿಸಬೇಕಾಗಿದೆ. ಈ ಪ್ರಶ್ನೆಗೆ ಮನಸ್ಸಾಕ್ಷಿಯೋ ವಿಚಾರಬುದ್ಧಿಯೋ ನೀಡುವ ಸಮಾಧಾನವೇನೆಂಬುದರ ಕುರಿತಲ್ಲ ನಾನಿಲ್ಲಿ ಪ್ರತಿಪಾದಿಸುವುದು; ಮನಸ್ಸಾಕ್ಷಿಯೂ ವಿಚಾರಬುದ್ಧಿಯೂ ಈ ಪ್ರಶ್ನೆಯನ್ನು ಘನತೆಯಿಂದ ನಮ್ಮ ಮುಂದೆ ತರುವುದರಿಂದ ನಾವು ಈ ವಿಷಯದ ಕುರಿತು ಚಿಂತಿಸಬೇಕಾದುದು ಬಹು ಅತ್ಯಾವಶ್ಯಕವಾಗಿದೆಂದು ಮಾತ್ರವಾಗಿದೆ. ಸೃಷ್ಟಿಕರ್ತನೊಬ್ಬನಿರುವನೇ? ಇರುವನಾದರೆ ಅವನು ಹೇಗಿರುವನು? ಅವನ ವಿಶೇಷಣಗಳೂ ಗುಣಗಳೂ ಯಾವುವು? ನಮ್ಮನ್ನು ಅವನು ಸೃಷ್ಟಿಸಿದ್ದರೆ ಅದರ ಉದ್ದೇಶವೇನಾದರೂ ಇದೆಯೇ? ಇದ್ದರೆ ಅದನ್ನು ನಿರ್ವಹಿಸುವು ಹೇಗೆ? ಎಂಬ ಪ್ರಶ್ನೆಗಳ ಕುರಿತು ಚಿಂತಿಸಿ ಅರಿಯುವುದು ಗುಣಪ್ರದವಲ್ಲವೆಂದು ಬುದ್ಧಿಯುಳ್ಳವರ್ಯಾರೂ ಹೇಳಲಾರರು. ಈ ಸ್ಥಿತಿಯಲ್ಲಿ ದೇವರ ಕುರಿತು ತಿಳಿಯುವ ಅಗತ್ಯವಿಲ್ಲವೆಂದು ಯಾರಾದರೂ ಹೇಳುವರಾದರೆ ಅದು ಒಮ್ಮೆಯೂ ವಿವೇಕಯುತವಾಗಿರಲಿಕ್ಕಿಲ್ಲ.

ಈ ದೈವ ಪ್ರಶ್ನೆಯ ಕುರಿತು ನಾವು ಚಿಂತಿಸಬೇಕೆಂದೇ ಮತಗಳೂ ಕಲಿಸುತ್ತವೆ. ಸಕಲ ಮತಗಳೂ ಶಕ್ತಿಯುಕ್ತವಾಗಿ ಈ ಪ್ರಶ್ನೆಯನ್ನು ನಮ್ಮ ವಿಚಾರಕ್ಕೆ ಗುರಿಪಡಿಸುತ್ತವೆ. ಮಾತ್ರವಲ್ಲ ಮತಗಳ ಮೂಲ ತತ್ವವೇ ದೈವಾಸ್ತಿಕ್ಯಪರವಾದ ಸಿದ್ಧಾಂತವಾಗಿದೆ. ಕೋಟಿಗಟ್ಟಲೆ ಮನುಷ್ಯರ ಸ್ವೀಕಾರಕ್ಕೆ ಪಾತ್ರವಾಗಿರುವ ಎಲ್ಲಾ ಮತಗಳ ಉದ್ಭವವು ಹಲವು ಕಾಲಘಟ್ಟಗಳಲ್ಲಿ ಪ್ರಕಟವಾಗಿಕೊಂಡಿದ್ದ ದಿವ್ಯ ಪ್ರಕಟನೆಗಳಿಂದಲೇ ಆಗಿದೆ. ಆದ್ದರಿಂದ, ಅನಂತರ ಕಾಲಗಳಲ್ಲಿ ಮನುಷ್ಯರ ಕರಪ್ರಯೋಗದಿಂದ ಆ ಮತಗಳ ಉಪದೇಶಗಳಿಗೆ ಎಷ್ಟೋ ವಿರೂಪಗಳು ಸಂಭವಿಸಿದ್ದರೂ ಪ್ರಸ್ತುತ ಪ್ರಶ್ನೆಗೆ ಅವುಗಳೆಲ್ಲಾ ಹೇಳುವ ಸಮಾಧಾನ ಒಂದೇ ಆಗಿದೆ. ಮಾತ್ರವಲ್ಲ, ದೇವನೆಂಬ ಒಬ್ಬನಿದ್ದಾನೆಯೇ ಎಂಬ ಪ್ರಶ್ನೆಗೆ ಮನಸ್ಸಾಕ್ಷಿಯೂ ವಿಚಾರಬುದ್ಧಿಯೂ ನೀಡುವ ಸಮಾಧಾನವನ್ನು ಮತಗಳು ನಮಗೆ ವ್ಯಕ್ತಮಾಡಿಕೊಡುತ್ತವೆ. ಹೇಗೆಂದರೆ, ಪ್ರಪಂಚದ ಒಡೆಯನೂ ನಮ್ಮ ಸೃಷ್ಟಿ

ಕರ್ತನೂ ಆದ ಒಬ್ಬನಿರಬೇಕಾಗಿದೆಯೆಂದು ಪ್ರಕೃತಿಯಿಂದಲೂ ಅಂತಃಕರಣದಿಂದಲೂ ಲಭಿಸುವ ಸಮಾಧಾನವನ್ನು ದೃಢಪಡಿಸಿ ಸೃಷ್ಟಿಕರ್ತನೂ ರಕ್ಷಕನೂ ಆದ ಒಬ್ಬ ದೇವನಿದ್ದಾನೆಂದು ಮತಗಳು ನಮಗೆ ಸ್ಪಷ್ಟವಾಗಿ ಕಲಿಸುತ್ತವೆ. ವಿವಿಧ ಮತಗಳ ಉಪದೇಶಗಳು ಪರಸ್ಪರ ಎಷ್ಟೋ ವ್ಯತ್ಯಾಸಗಳಿದ್ದರೂ ಈ ಪ್ರಪಂಚಕ್ಕೆ ಓರ್ವ ಕರ್ತನಿದ್ದಾನೆಂದೂ ನಾವು ಅವನ ಅಧಿಕಾರಕ್ಕೆ ಒಳಗೊಂಡವರೆಂದೂ ಅವನು ನಮ್ಮ ಜೀವಿತಕ್ಕೆ ಒಂದು ಪ್ರತ್ಯೇಕ ಉದ್ದೇಶ ಕಲ್ಪಿಸಿ, ಅದರ ಪ್ರಾಪ್ತಿಗಾಗಿ ಅವನೇ ಮಾರ್ಗ ನಿರ್ದೇಶನಗಳನ್ನು ನೀಡಿರುವನೆಂದೂ ಮರಣಾನಂತರ ಪರಲೋಕದಲ್ಲಿ ಒಂದು ಜೀವಿತವಿದೆಯೆಂದೂ ಕರ್ಮಸ್ಥಿತಿಯನ್ನನುಸರಿಸಿ ನಮಗೆ ಪ್ರತಿಫಲ ಲಭಿಸುವುದೆಂದೂ ಇತ್ಯಾದಿಯಾಗಿ ಎಲ್ಲಾ ಮತಗಳೂ ಕಲಿಸುತ್ತವೆ. ಎಲ್ಲಾ ಮತಗಳ ಏಕಕಂಠವಾದ ಈ ಉಪದೇಶಗಳು ಸಹ ದೇವರಿಗೆ ಸಂಬಂಧಿಸಿದ ಪ್ರಶ್ನೆಯನ್ನು ನಿಷ್ಕರ್ಷವಾಗಿ ನಮ್ಮ ಮುಂದೆ ತಂದು ಅದರ ಕುರಿತು ಬೇಕಾದಷ್ಟು ಚಿಂತಿಸಿ ಯಥಾರ್ಥವನ್ನು ಗ್ರಹಿಸಬೇಕಾಗಿದೆಯೆಂದು ನಮ್ಮನ್ನು ಒತ್ತಾಯಿಸುತ್ತವೆ. ದೇವರ ಕುರಿತು ಮತಗಳು ನೀಡುವ ಪಾಠಗಳು ಸರಿಯೆಂದಾದರೆ ಅವನ ಸತ್ತೆಯ ಕುರಿತು ಚಿಂತಿಸದಿರುವುದೂ ಅವನೊಡನಿರುವ ವಿಶ್ವಾಸವನ್ನು ಅವಗಣಿಸುವುದೂ ಲೋಕದಲ್ಲಿ ನಮಗುಂಟಾಗುವ ನಷ್ಟಗಳಲ್ಲಿ ಬಹಳ ದೊಡ್ಡದು ಅದಾಗುವುದು; ಅವನ ಕುರಿತು ತಿಳಿಯುವುದೂ ಅವನೊಡನೆ ದೃಢವಾದ ಒಂದು ಸಂಬಂಧವನ್ನು ಉಂಟುಮಾಡುವುದೆಂಬುದು ಲೋಕದಲ್ಲಿ ನಮಗೆ ಸಿದ್ಧಿಸುವಂತಹದ್ದರಲ್ಲಿ ಬಹುದೊಡ್ಡ ಲಾಭವು ಅದಾಗಿರುವುದು. ಸಂಕ್ಷಿಪ್ತವಾಗಿ, ದೇವರಿಗೆ ಸಂಬಂಧಿಸಿದ ಪ್ರಶ್ನೆ ಘನವಾದದ್ದೂ ಚಿಂತಕರು ಒಮ್ಮೆಯೂ ಅಗಣ್ಯ ಮಾಡುವಂತಹದ್ದೂ ಆಗಿದೆ.

ಇನ್ನು ದೇವರ ಕುರಿತು ಚಿಂತಿಸಬೇಕಾದದ್ದು ಯಾವ ರೀತಿಯಲ್ಲಾಗಿರಬೇಕೆಂದೂ ಎರಡು ಮಾತು ಹೇಳಿಕೊಳ್ಳುವೆನು. ಒಂದು ವಿಷಯದ ಕುರಿತು ಅರಿಯಲು ಸರಿಯಾದ ಮಾರ್ಗ ಯಾವುದೆಂದು ತಿಳಿಯದೆ ಯಾವುದಾದರೊಂದು ಮಾರ್ಗದಲ್ಲಿ ಅದಕ್ಕಾಗಿ ಪ್ರಯತ್ನಪಡುವುದಾದರೆ ಆ ಪರಿಶ್ರಮವು ವಿಫಲವಾಗುವುದು. ವಿದ್ಯಾಭ್ಯಾಸವನ್ನು ಪಡೆಯಲು ಉದ್ದೇಶಿಸುವವನು ಒಂದು ವಿದ್ಯಾಲಯವನ್ನು ಸೇರಿ ಅದರ ಪಾಠ ಪದ್ಧತಿಯನ್ನನುಸರಿಸಿ ಅಧ್ಯಯನ ಮಾಡುವ ಬದಲು ಒಂದು ಗುದ್ದಲಿಯನ್ನೆತ್ತಿ ಯಾವುದಾದರೂ ಗದ್ದೆಯನ್ನು ಅಗೆಯಲು ಹೋದರೆ ಅವನ ಲಕ್ಷ್ಯವು ಸಫಲವಾಗಲಿಕ್ಕಿಲ್ಲವೆಂಬುದು ಸ್ಪಷ್ಟವಲ್ಲವೇ? ಇದೇ ಪ್ರಕಾರ ಪ್ರತಿಯೊಂದು ಕಾರ್ಯಸಿದ್ಧಿಗೆ ಅದಕ್ಕುಚಿತವಾದ ದಾರಿಯಲ್ಲಿ ಪ್ರಯತ್ನಿಸದಿರುವ ತನಕ ಆ ಕಾರ್ಯವು ಸಫಲವಾಗಲಾರದು. ಇದು ಲೋಕದ ಯಾವುದೇ ವಿಷಯದಲ್ಲಿ ಕಾಣಬಹುದಾದ ಒಂದು ನಿಯಮವಾಗಿದೆ. ಆಧ್ಯಾತ್ಮಿಕ ಕಾರ್ಯ, ದೈವಚಿಂತನೆ ಮೊದಲಾದುವುಗಳಲ್ಲೆಲ್ಲಾ ಅದರ ಯಥೋಚಿತ ಮಾರ್ಗದಲ್ಲಿ ಪ್ರವರ್ತಿಸಬೇಕಾದದ್ದು ಅತ್ಯಾವಶ್ಯವಾಗಿದೆ.

ನಮ್ಮ ಉದ್ದೇಶಪ್ರಾಪ್ತಿಗೆ ನಮ್ಮ ಮನೋ ನಿಶ್ಚಯದೊಂದಿಗೆ ನಿಕಟ ಸಂಬಂಧವಿದೆಯೆಂಬುದು ಅನಿಷೇಧ್ಯವಾಗಿದೆ. ಓರ್ವನು ಒಂದು ಕೆಲಸವನ್ನು ಯಾವ ಉದ್ದೇಶದಿಂದ ಆರಂಭಿಸುವನೋ ಆ ಕಾರ್ಯದ ಫಲ ಅವನ ಉದ್ದೇಶನೆಲೆಯನ್ನು ಅನುಸರಿಸಿಯಾಗುವುದು. ಉದಾಹರಣೆಗಾಗಿ, ಒಬ್ಬನು ಒಂದು ಪುಸ್ತಕವನ್ನು ಅದರ ತತ್ವಸಾರವನ್ನು ಗ್ರಹಿಸುವ ವಿಚಾರದಿಂದಲೂ ಇನ್ನೋರ್ವನು ಅದರ ನ್ಯೂನತೆಗಳನ್ನು ಕಂಡುಹಿಡಿಯಬೇಕೆಂಬ ವಿಚಾರದಿಂದಲೂ ಓದುವುದಾದರೆ, ಅವರಿಬ್ಬರೂ ಓದುವುದು ಒಂದೇ ಪುಸ್ತಕವಾದರೂ ಅವರೀರ್ವರಿಗೆ ಅನುಭವವಾಗುವ ಫಲ ವ್ಯತ್ಯಸ್ತವಾಗುವುದು. ಇದೇ ಪ್ರಕಾರವೇ ದೈವ ಚಿಂತನೆಯ ಫಲವೂ ಆ ಚಿಂತಿಸುವವರ ಉದ್ದೇಶವನ್ನೂ ವಿಚಾರವನ್ನೂ ಅನುಸರಿಸಿ ವ್ಯತ್ಯಸ್ತವಾಗಿರುವುದು. ಒಬ್ಬ ತತ್ವಜ್ಞಾನಿಯೂ ಒಬ್ಬ ಮುಮುಕ್ಷುವೂ ದೈವಾನ್ವೇಷಣೆಯಲ್ಲಿ ತೊಡಗುವಾಗ ಇಬ್ಬರ ಶ್ರಮವೂ ದೇವರ ಕುರಿತು ಅರಿಯಬೇಕೆಂದಿರುವುದು. ಆದರೂ ಇಬ್ಬರ ವಿಚಾರದಲ್ಲೂ ಉದ್ದೇಶದಲ್ಲೂ ವ್ಯತ್ಯಾಸವಿರುವುದರಿಂದ ಅವರ ಅನುಭವಗಳು ಭಿನ್ನವಾಗಿರುತ್ತವೆ. ತತ್ವಜ್ಞಾನಿ ತನ್ನ ಬುದ್ಧಿಶಕ್ತಿಗಳ ಸಹಾಯದಿಂದ ಪ್ರಪಂಚದ ಉದ್ಭವದ ಕುರಿತು ಚಿಂತಿಸಿ ಈ ವಿಶ್ವಕ್ಕೆ ಒಬ್ಬ ನಿರ್ಮಾಪಕನಿದ್ದಾನೆಯೇ ಎಂದು ಯೋಚಿಸುತ್ತಾ ತನಗೆ ತಿಳಿಯುವ ಸಂಗತಿಗಳನ್ನು ತನ್ನ ವಿಜ್ಞಾನ ಭಂಡಾರದಲ್ಲಿ ಕೇವಲ ನಿಕ್ಷೇಪಿಸುತ್ತಾನೆ. ಅವನ ಉದ್ದೇಶ ತತ್ವಪರವಾದ ಒಂದು ಸಂಶೋಧನೆ ನಡೆಸಿ ಅದ್ಭುತಕರವಾದ ರೀತಿಯಲ್ಲಿ ಪ್ರವರ್ತಿಸುತ್ತಿರುವ ಈ ಪ್ರಪಂಚಕ್ಕೆ ಒಬ್ಬ ಕರ್ತನಿದ್ದಾನೆಯೇ ಎಂದು ತಿಳಿಯಬೇಕೆಂದಲ್ಲದೆ, ದೇವನೊಬ್ಬನಿದ್ದರೆ ಅವನು ಹೇಗಿದ್ದಾನೆಂದೂ, ಅವ

# ಸರ್ವ ಮಾನವ ಕುಲಕ್ಕಾಗಿ ಇಸ್ಲಾಂ ಮತ

**— ಲೇಖಕ: ಮುಬಾರಕ್ ಅಹ್ಮದ್, ಕರುನಾಗಪಳ್ಳಿ —**

ಇಸ್ಲಾಂ ಮತವು ಅರೇಬ್ಯರಿಗೆ ಅಥವಾ ಮುಸಲ್ಮಾನರಿಗೆ ಮಾತ್ರವಿರುವ ಮತವಾಗಿರುವುದೆಂದು ಇತರ ಮತಸ್ತರೆಡೆಯಲ್ಲಿ ಒಂದು ಭಾವನೆಯಿದೆ. ಆದರೆ ಸತ್ಯವು ಅದಲ್ಲ. ಇಸ್ಲಾಂ ಎಂಬುದು ಸರ್ವ ಮಾನವನ ಕುಲಕ್ಕಾಗಿ ಇರುವ ಒಂದು ಮತವಾಗಿದೆ.

ಇಸ್ಲಾಂ ಮತದ ಆವಿರ್ಭಾವಕ್ಕೆ ಮೊದಲು ಲೋಕವು ಇಂದಿನಂತೆ ಏಕೀಕರಿಸಲ್ಪಟ್ಟಿರಲಿಲ್ಲ. ಸಮುದಾಯಗಳು ತಮ್ಮೊಳಗೆ ತಿಳಿಯದೆಯೂ ದೇಶಗಳು ತಮ್ಮೊಳಗೆ ಸಂಪರ್ಕವಿಲ್ಲದೆಯೂ ಕಳೆದ ಪುರಾತನ ಯುಗಗಳಲ್ಲಿ ಪ್ರತಿಯೊಂದು ಸಮುದಾಯಕ್ಕೂ ಪ್ರತಿಯೊಂದು ದೇಶಕ್ಕೂ ಪರಮಾತ್ಮನು ಪ್ರತ್ಯೇಕ ಪ್ರತ್ಯೇಕ ಪ್ರವಾದಿಗಳನ್ನು ಕಳುಹಿಸಿದ್ದನು. ಆದರೆ ಕಾಲವು ಪುರೋಗತಿ ಹೊಂದುತ್ತಲೇ ಆ ಎಲ್ಲಾ ಪ್ರವಾದಿಗಳ ಎಲ್ಲಾ ದೌತ್ಯವನ್ನು ಏಕೀಕರಿಸಿ ಮಾನವ ರಾಶಿಗೆ ಒಟ್ಟಾಗಿ ಒಂದೇ ಪ್ರವಾದಿಯನ್ನು ಆ ಪರಮಾತ್ಮನು ನಿಯೋಗಿಸಿ ಕಳುಹಿಸಿದನು. ಆ ಮಹಾ ಪ್ರವಾದಿಯು ಹಝ್‌ರತ್ ಮುಹಮ್ಮದ್ ಪೈಗಂಬರ್ ಆಗಿರುವರು. ಈ ರೀತಿಯ ಒಬ್ಬ ಮಹಾ ಪ್ರವಾದಿಯ ಜನನವು ಉಂಟಾಗಲಿರುವುದೆಂದು ಭವಿಷ್ಯತ್ ಪುರಾಣದಲ್ಲೂ ಬೈಬಲ್‌ನ ಧರ್ಮೋಪದೇಶ ಕಾಂಡದ 18ನೇ ಭಾಗ 18ನೇ ವಚನದಲ್ಲೂ ಯೇಸುಕ್ರಿಸ್ತರ ಸುವಾರ್ತೆಗಳಲ್ಲೂ ಅನೇಕ ಲಕ್ಷಣಗಳೊಂದಿಗೆ ವಿವರಿಸಲ್ಪಟ್ಟಿದೆ. ಕಳೆದ ಎಲ್ಲಾ ಪ್ರವಾದಿಗಳೂ ಭವಿಷ್ಯ ನುಡಿದ ಸರ್ವ ಗುಣ ಲಕ್ಷಣಗಳೂ ಸತ್ಯ ಸಾಕ್ಷ್ಯಗಳೂ ಮುಹಮ್ಮದ್ ಪೈಗಂಬರ್‌ರಲ್ಲಿ ಪೂರ್ತಿಯಾಗಿರುವುದೆಂದು ನಮಗೆ ಕಾಣಬಹುದು. ಧರ್ಮಗಳನ್ನು ಏಕೀಕರಿಸಿ "ಒಂದೇ ಜಾತಿ, ಒಂದೇ ಮತ, ಒಂದೇ ದೇವರು ಮನುಷ್ಯನಿಗೆ" ಎಂಬ ಮಹತ್ತಾದ ಸಂದೇಶವನ್ನು ಲೋಕಕ್ಕೆ ಕಲಿಸಿಕೊಟ್ಟ ಆ ಮಹಾ

---

[ 13ನೇ ಪುಟದಿಂದ ]

ನಿಗೂ ಮನುಷ್ಯರಿಗೂ ಪರಸ್ಪರ ಬಂಧವು ಹೇಗಿರಬೇಕೆಂದೂ, ಆ ಬಂಧವು ಸಿದ್ಧಿಸಬೇಕಾದರೆ ಮಾರ್ಗವೇನೆಂದೂ ತಿಳಿಯುವುದಲ್ಲ. ಆದರೆ ಆ ಮುಮುಕ್ಷು ದೇವರನ್ನು ತಿಳಿಯಬೇಕೆಂದೂ ಅವನನ್ನು ಪಡೆಯಬೇಕೆಂದೂ ತೃಷ್ಣೆಯಿಂದ ಅಲೆಯುತ್ತಾನೆ ಅವನು ದೇವರೊಡನೆ ದೃಢವಾದ ಸಂಬಂಧವನ್ನುಂಟುಮಾಡಬೇಕೆಂಬ, ಅವನ ಪ್ರೀತಿಯನ್ನೂ ಸಾಮಿಪ್ಯವನ್ನೂ ಸಂಪಾದಿಸಬೇಕೆಂಬ, ಅವನ ಅಭೀಷ್ಟವನ್ನರಿತು ಅದರ ಪ್ರಕಾರ ಜೀವಿಸಬೇಕೆಂಬ ವಾಂಛೆಯಿಂದ ತನ್ನನ್ನೇ ಮರೆತು, ತನ್ನ ಸುಖವನ್ನು ತ್ಯಜಿಸಿ ಪ್ರವರ್ತಿಸುತ್ತಾನೆ. ಇವರಿಬ್ಬರ ಅನ್ವೇಷಣೆ ದೇವರನ್ನು ಲಕ್ಷ್ಯವಾಗಿಟ್ಟುಕೊಂಡಿದ್ದರೂ ಇಬ್ಬರ ಉದ್ದೇಶ ಎರಡು ರೀತಿಯವುಗಳಾದುದರಿಂದ ಅವರ ಅನುಭವ ಒಂದೇ ರೀತಿ ಆಗಿರಲಾರದು. ಒಟ್ಟಾರೆ, ದೇವರ ಕುರಿತು ಚಿಂತಿಸಬೇಕಾದದ್ದು ಅತ್ಯಾವಶ್ಯಕವಾದ ಹಾಗೆಯೇ ಈ ವಿಷಯದಲ್ಲಿ ನಮ್ಮ ವಿಚಾರವೂ ಮನೋಭಾವವೂ ಕೇವಲ ತತ್ವಜ್ಞಾನಿಯ ಹಾಗೆ ಆಗಿರದೆ ಆ ಮುಮುಕ್ಷುವಿನ ಹಾಗೆ ಆಗಬೇಕಾಗಿದೆ. ಹಾಗಿದ್ದರೆ ಮಾತ್ರ ನಮಗೆ ದೇವರ ಕುರಿತು ಒಂದು ಸರಿಯಾದ ಜ್ಞಾನವನ್ನು ಗಳಿಸಲಿಕ್ಕೂ ಅವನನ್ನು ಪಡೆಯಲು ಸರಿಯಾದ ಮಾರ್ಗದಲ್ಲಿ ಚಲಿಸಲಿಕ್ಕೂ ಸಾಧ್ಯವಾಗಬಹುದು. ನಮ್ಮ ಹೃದಯದಲ್ಲಿ ದೇವರನ್ನು ಕುರಿತು ಅರಿಯಲು ತೃಷ್ಣೆಯೂ ಸರ್ವೋಪರಿ ಸತ್ಯವಾಗಿರುವ ಅವನ ಸಾಮಿಪ್ಯವನ್ನು ಪಡೆಯಲು ವಾಂಛೆಯೂ ಇಲ್ಲದೆ ನಾವು ಈ ವಿಷಯದಲ್ಲಿ ಒಂದು ವಿಚಾರವನ್ನು ಮಾತ್ರ ಮಾಡಿ ಅದರಿಂದ ಸಿಗುವ ಅರಿವನ್ನು ನಮ್ಮ ಜ್ಞಾನ ಭಂಡಾರದಲ್ಲಿ ತತ್ವಪರವಾದ ಒಂದು ಸಂಶೋಧನೆಯೆಂದು ನಿಕ್ಷೇಪಿಸುವುದಾದರೆ ಅದರಿಂದ ನಮಗೆ, ದೇವರಿಗೆ ಸಂಬಂಧಿಸಿದ ಪರಮಾರ್ಥ ಜ್ಞಾನವೂ ನಮ್ಮ ಜನ್ಮ ಸಾಫಲ್ಯವೂ ಲಭಿಸಲಾರದು. ಅಷ್ಟು ಮಾತ್ರವಲ್ಲ, ದೇವನಿದ್ದಾನೆಯೆಂದು ತಿಳಿದೂ ಅವನನ್ನು ಗಳಿಸಲು ಸಕಲ ವಿಧದಿಂದ ಪ್ರಯತ್ನಿಸದಿರುವುದು ಭಯಂಕರ ನಾಶಕ್ಕೆ ಕಾರಣವಾಗುವುದು.

ಅನುವಾದಕ: **Y. ರಶೀದ್.**

ಪ್ರವಾದಿ ಮುಹ್ಮದ್ ಪೈಗಂಬರ್‌ರ ಸತ್ಯತೆಯನ್ನು ಕಂಡುಕೊಂಡು ಅವರಲ್ಲಿ ವಿಶ್ವಾಸವನ್ನರ್ಪಿಸಬೇಕಾದುದು ಸರ್ವ ಮಾನವರ ಧಾರ್ಮಿಕ ಕರ್ತವ್ಯವಾಗಿದೆ.

ಪ್ರಾಕೃತಿಕ ಮತವಾದ ಇಸ್ಲಾಮಿನ ಅಧಿಕೃತವಾದ ವೇದ ಪ್ರಮಾಣವು ಪವಿತ್ರಕುರ್-ಆನ್ ಆಗಿದೆ. ಹಝ್ರತ್ ಮುಹ್ಮದ್ ಪೈಗಂಬರರಿಗೆ ದೇವರಿಂದ ಲಭಿಸಿದ ಈ ದಿವ್ಯ ಸಂದೇಶವು ಮಾನವ ಜೀವನದ ಸಂವಿಧಾನ ವಾಗಿದೆ. ಅದು ಮನುಷ್ಯರನ್ನು ಉಪದೇಶಿಸುವಲ್ಲೆಲ್ಲಾ "ಎಲೈ ಮನುಷ್ಯ ವರ್ಗವೇ'' ಎಂದು ಸರ್ವಮಾನವ ಕುಲವನ್ನು ಒಟ್ಟಾಗಿ ಸಂಭೋಧಿಸಿರುತ್ತದೆ. ರಾಷ್ಟ್ರೀಯ, ಸಾಮೂಹಿಕ, ಸಾಂಪತ್ತಿಕ, ಸಾಂಸ್ಕೃತಿಕ, ಎಂಬಿತ್ಯಾದಿ ಮನುಷ್ಯ ಜೀವನದ ಎಲ್ಲಾ ಪಾರ್ಶ್ವಗಳಲ್ಲೂ ಅವನು ಯಾವ ರೀತಿಯಿಂದ ಒಂದು ಉತ್ತಮವಾದ ಜೀವನ ಕ್ರಮವನ್ನು ನಡೆಸಬೇಕೆಂದು ಅದು ಕಲಿಸಿಕೊಡುತ್ತದೆ. ಶಾರೀರಿಕ ದುರಾಗ್ರಹಗಳಿಂದ ವಿಮೋಚನೆ ಹೊಂದಿ, ಧಾರ್ಮಿಕಾವಸ್ಥೆಯನ್ನು ಪ್ರವೇಶಿಸಿ ಆತ್ಮಿಕವಾದ ಒಂದು ಉನ್ನತ ಸ್ಥಾನವನ್ನೇರಿ ಪರಮಾತ್ಮನೊಂದಿಗೆ ಅತಿ ನಿಕಟ ಸಂಪರ್ಕವನ್ನು ಬೆಳೆಸಲಿಕ್ಕೂ ದೈವ ಪ್ರೇಮವನ್ನು ಕರಗತ ಮಾಡಿಕೊಳ್ಳಲಿಕ್ಕೂ ಸಹಾಯಕವಾಗುವ ಅತ್ಯುತ್ತಮ ವಾದೊಂದು ಜೀವಿತ ಕ್ರಮವನ್ನು ಪವಿತ್ರ ಖುರಾನ್ ಮನುಷ್ಯ ಸಮುದಾಯಕ್ಕೆ ತೋರಿಸಿಕೊಡುತ್ತದೆ.

ಆದರೆ, ಸುಂದರವಾದ ಒಂದು ಜೀವನ ಪದ್ಧತಿ ಯನ್ನು ಮನುಷ್ಯ ರಾಶಿಗೆ ಕೊಡುಗೆಯಿತ್ತ ಇಸ್ಲಾಂ ಮತದ ಔನ್ನತ್ಯವನ್ನು ಇಂದಿನ ಮುಸ್ಲಿಂ ಲೋಕದ ನಡ ವಳಿಕೆಯಿಂದ ಬೆಲೆಯಿರಿಸಿದಲ್ಲಿ ಅನೇಕ ವಿರೋಧಾಭಾಸ ಗಳನ್ನು ಕಾಣಬಹುದು: ಈ ರೀತಿ ಇಸ್ಲಾಮಿನ ನಾಮವೂ ಖುರಾನಿನ ಲಿಪಿಗಳೂ ಮಾತ್ರ ಬಾಕಿ ಉಳಿಯುವ ತರದಲ್ಲಿ ಇಸ್ಲಾಂ ಮತಕ್ಕೆ ಬರತಕ್ಕ ದುರವಸ್ಥೆಯನ್ನೂ ಅದಕ್ಕಿರುವ ಪರಿಹಾರ ಮಾರ್ಗವನ್ನೂ ಅದರ ಸ್ಥಾಪ ಕರೇ ದೀರ್ಘ ದರ್ಶನ ಗೈದಿರುವರು.

"ಅಂದಿನ ಮುಸ್ಲಿಮರ ಮಸೀದಿಗಳು ಜನನಿಬಿಡ ವಾಗಿರುವುದಾದರೂ ಭಕ್ತಿ ಶೂನ್ಯವಾಗುವುದು. ಅವರ ಉಲೆಮಾ (ಮತ ಪಂಡಿತರು)ಗಳು ಆಕಾಶದಡಿಯಲ್ಲಿ ಅತ್ಯಂತ ನಿಕೃಷ್ಟರಾಗುವರು.'' (ನಬಿವಚನ). "ಕಾಲ ಕ್ರಮದಲ್ಲಿ ಮುಸ್ಲಿಮರು 73 ವಿಭಾಗಗಳಾಗಿ ವಿಂಗಡಿಸ ಲ್ಪಡುವರು. ಅವರಲ್ಲಿ ನಾನು ಮತ್ತು ನನ್ನ ಅನುಚರ ರಂತೆ ಇರುವವರು ಮೋಕ್ಷಾರ್ಹರು.'' (ನಬಿವಚನ).

ಅಂತೆಯೇ ಈ ಅಧಃಪತನದಿಂದ ಮುಸ್ಲಿಂ ಲೋಕವನ್ನು ಸಂರಕ್ಷಿಸಲಿಕ್ಕೂ ಇಸ್ಲಾಮಿಗೆ ನಷ್ಟವಾಗಿ ಹೋದ ಅವರ ಕೀರ್ತಿಯನ್ನು ಪುನಃ ಸ್ಥಾಪಿಸಿ ಅವರ ಸೌಮ್ಯ ಸುಂದರ ವಾದ ಮುಖವನ್ನು ಲೋಕಕ್ಕೆ ತೋರಿಸಿ ಕೊಡಲಿಕ್ಕಾಗಿ ಯೂ ಹಿಜರಿ ಶಕ 13ನೇ ಶತಮಾನದ ಅಂತ್ಯದಲ್ಲಿ ಅವತರಿಸುವ ಓರ್ವ ಮತ ಸುಧಾರಕರ ಕುರಿತು ಪೈಗಂಬ ರರು ಭವಿಷ್ಯ ನುಡಿದಿರುವರು.

ಈ ಪ್ರವಚನಗಳ ಪೂರ್ತೀಕರಣವೆಂಬಂತೆ ನಿಶ್ಚಿತ ಸಮಯದಲ್ಲಿಯೇ ಎಲ್ಲಾ ಗುಣ ಲಕ್ಷಣಗಳೊಂದಿಗೆ ಆ ಮಹಾತ್ಮರು-ಮಹದೀ ಮಸೀಹರು-ಅವತರಿಸಿದರು.

ಪಂಜಾಬಿನ ಗುರುದಾಸಪುರ ಜಿಲ್ಲೆಯ ಖಾದಿ ಯಾನ್ ಎಂಬ ಗ್ರಾಮದಲ್ಲಿ 1835ರಲ್ಲಿ ಜನಿಸಿದ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್‌ರವರೇ ಆ ದಿ ವ್ಯಾತ್ಮರು. ಅವರು 1889ರಲ್ಲಿ ಸ್ಥಾಪಿಸಿದ ಅಹ್ಮ ದಿಯಾ ಸಂಘಟನೆಯು ಪ್ರಪಂಚದ ನಾನಾ ಭಾಗಗಳಲ್ಲೂ ಇಸ್ಲಾಂ ಮತವನ್ನು ಪ್ರಚರಿಸುತ್ತಾ ಇಸ್ಲಾಮಿನ ಸುಂದರ ಸಂದೇಶವನ್ನು ಲೋಕಕ್ಕೆ ತಿಳಿಸಿ ಕೊಡುವ ಕಾರ್ಯದಲ್ಲಿ ನಿರತವಾಗಿದೆ. ಪವಿತ್ರ ಖುರಾನಿನ ಆಜ್ಞೆಗಳನ್ನು ಅನು ಸರಿಸಿಯೂ ಪೈಗಂಬರರ ಜೀವಿತ ಕ್ರಮವನ್ನು ಅನುಕರಿ ಸಿಯೂ ಅಹ್ಮದೀಯರು ಯಥಾರ್ಥ ಮುಸ್ಲಿಮರಾಗಿ ಜೀವಿಸುತ್ತಾರೆ.

ಸರ್ವಮತಗಳಲ್ಲೂ ಮತಗ್ರಂಥಗಳಲ್ಲೂ ವಾಗ್ದಾನ ಮಾಡಲ್ಪಟ್ಟ ಆತ್ಮೀಕ ಗುರು ತಾನೆಂದು ವಾದಿಸಿರುವ ಅಹ್ಮದಿಯಾ ಸಂಘಟನೆಯ ಸ್ಥಾಪಕರು ಸ್ವದೌತ್ಯದನ್ವಯ ಹಿಂದುಗಳಿಗೆ ಕಲ್ಕಿಯೂ, ಕ್ರೈಸ್ತರಿಗೆ ಮಸೀಹಾವೂ, ಮುಸ್ಲಿಮರಿಗೆ ಇಮಾಂ ಮಹ್‌ದೀಯೂ ಆಗಿರುವರೆಂದು ಸಾಧಿಸಿರುವರು. ಈ ಕಾಲಕ್ಕಾಗಿ ದೇವರು ನಿಯೋಗಿಸಿ ರುವ ಆತ್ಮೀಕ ಉದ್ಧಾರಕನ ಶಿಷ್ಯ ಸಂಘದಲ್ಲಿ ಪ್ರವೇಶಿಸ ಬೇಕಾದುದು ಜಾತಿಮತ, ಭೇಧವಿಲ್ಲದೆ ಎಲ್ಲಾ ಮನು ಷ್ಯರ ಧಾರ್ಮಿಕ ಕರ್ತವ್ಯವಾಗಿದೆ. ದೇವರು ನಿಯೋಗಿ ಸುವ ಯಾವ ಪ್ರವಾದಿಯನ್ನೇ ಧಿಕ್ಕರಿಸುವ ಯಾವುದೇ ಜನತೆಗೂ ದೈವ ಶಿಕ್ಷೆಯನ್ನು ಅನುಭವಿಸಬೇಕಾಗಿ ಬರು ವುದು.

ಲೇಖಕ:
ಎಂ. ಪಿ. ಇಬ್ರಾಹಿಂ
ಮಂಜೇಶ್ವರ.

"ವಮಾ ಕುನ್ನಾ ಮುಅಝ್ಝಿಬೀನ ಹತ್ತಾ ನಬ್‌ಅಸ ರಸೂಲ."

"ಒಬ್ಬ ಪ್ರವಾದಿಯನ್ನು ಕಳುಹಿಸದೆ ನಾವು ಜನರನ್ನು ಶಿಕ್ಷಿಸುವುದಿಲ್ಲ."

—ಪವಿತ್ರ ಖುರ್‌ಆನ್ ಅಧ್ಯಾಯ 17; ವಚನ 16.

# ಭೂಕಂಪಗಳು — ಅದ್ಭುತ ದೃಷ್ಟಾಂತ

"ಲೋಕದಲ್ಲಿ ಒಬ್ಬ ಮುನ್ನೆಚ್ಚರಿಕೆಗಾರನು ಬಂದನು;
ಲೋಕವು ಆತನನ್ನು ಸ್ವೀಕರಿಸಲಿಲ್ಲ. ಆದರೆ
ಪರಮಾತ್ಮನು ಆತನನ್ನು ಸ್ವೀಕರಿಸುವನು
ಮತ್ತು ಶಕ್ತಿಯುತವಾದ ದೃಷ್ಟಾಂತ
ಗಳಿಂದ ಆತನ ಸತ್ಯತೆಯನ್ನು
ಲೋಕಕ್ಕೆ ತೋರಿಸಿ
ಕೊಡುವನು."

—ಹಝ್ರತ್ ಅಹ್ಮದ್‌ರಿಗೆ
ಲಭಿಸಿದ ದೈವವಾಣಿ.

**ಭೀಕರ ಪಾಕ್ ಭೂಕಂಪದಿಂದ ಸಹಸ್ರಾರು ಜನರಿಗೆ ಸಾವು ನೋವು:** ರಾವಲ್ಪಿಂಡಿ, ದಶಂಬರ 29 ಇಲ್ಲಿಂದ 320 ಕಿ.ಮೀ. ದೂರದಲ್ಲಿ ಕಾರಕೋರಮ್ ಪರ್ವತಶ್ರೇಣಿಯ ಭಾಗದ ಉತ್ತರ ಪಾಕಿಸ್ಥಾನದಲ್ಲಿ ನಿನ್ನೆ ಭೀಕರ ಭೂಕಂಪ ನಡೆದು ಒಂದು ಸಾವಿರಕ್ಕಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ಜನರು ಸಾವು–ನೋವುಗಳಿಗೀಡಾಗಿದ್ದಾರೆ ಎಂದು ಅಂದಾಜು ಮಾಡಲಾಗಿದೆ.*

ಕಾರಕೋರಮ್ ಹೆದ್ದಾರಿಯ ಪಠಾಣ ಗ್ರಾಮ ಭೂಕಂಪದ ರೂಪದಿಂದ ನಾಶವಾಗಿದ್ದು, ಪರಿಹಾರ ಕಾರ್ಯದಲ್ಲಿ ತೊಡಗಿರುವವರು ಡಜನ್ ಗಟ್ಟಲೆಯಲ್ಲಿ ಹೆಣಗಳನ್ನು ಮಣ್ಣಿನಡಿಯಿಂದ ಅಗೆದು ತೆಗೆಯುತ್ತಿದ್ದಾರೆಂದು ಸರಕಾರದ ವತಿಯಿಂದ ಹೇಳಲಾಗಿದೆ.

ಸೈನ್ಯದ ಹೆಲಿಕಾಪ್ಟರುಗಳು ಪರಿಹಾರ ಕಾರ್ಯದಲ್ಲಿ ನಿರತವಾಗಿ ಜಖಂಗೊಂಡವರನ್ನು ಸಮೀಪದ ಸೈನಿಕ ಆಸ್ಪತ್ರೆಗೆಗಳಿಗೆ ಚಿಕಿತ್ಸೆಗಾಗಿ ರವಾನಿಸುತ್ತಲಿವೆ.

ಹಿಮದಿಂದ ಆವರಿಸಲ್ಪಟ್ಟಿರುವ ಭೂಕಂಪದ ಹಾವಳಿಗೀಡಾಗಿರುವ ಆ ಗ್ರಾಮುಗಳಿಗೆ ಇಲ್ಲಿಂದ 120 ಕಿಲೋ ಮೀಟರ್ ದೂರದಲ್ಲಿ ಭಾರತ–ಚೀನಾ ಗಡಿ ಭಾಗದ ಗಿಲ್ಗಿತ್ ಮೂಲಕ ಸೈನ್ಯವು ಪರಿಹಾರ ಕಾರ್ಯಗಳನ್ನು ನಡೆಸುತ್ತಲಿದ್ದು ಜಖಂಗೊಂಡ ಜನರನ್ನು ಇಲ್ಲಿನ ಸೈನಿಕ ಆಸ್ಪತ್ರೆಗೆ ತಂದು ಚಿಕಿತ್ಸೆಗೊಳಪಡಿಸಲಾಗಿದೆ.

ಪಠಾಣ್ ಎಂಬ ಗ್ರಾಮದಲ್ಲಿ 500 ಮನೆಗಳು ನಾಶವಾಗಿವೆ. 2000 ಮಂದಿ ಗ್ರಾಮಸ್ಥರ ಪೈಕಿ ಅನೇಕರು ಮಣ್ಣಿನಡಿಯಲ್ಲಿ ಹೂತು ಹೋಗಿದ್ದಾರೆ ಎಂದು ವರದಿಗಳಿವೆ.

1935ರಲ್ಲಿ ಕ್ವೆಟ್ಟಾ ನಗರವನ್ನು ವ್ಯಾಪಕ ರೀತಿಯಲ್ಲಿ ನಾಶಗೊಳಿಸಿದ ಭೂಕಂಪನದ ತರುವಾಯ ಪಾಕಿಸ್ತಾನದಲ್ಲಿ ನಡೆದ ಭೂಕಂಪಗಳ ಪೈಕಿ ಇದು ಅತ್ಯಂತ ಭೀಕರವಾದುದು ಎಂದು ಹೇಳಲಾಗಿದೆ.

ಪಾಕಿಸ್ತಾನಿ ಪ್ರಧಾನಿ ಶ್ರೀ ಝುಡ್ ಎ. ಭುಟ್ಟೋರು ಪರಿಹಾರ ಕಾರ್ಯಗಳ ಮೇಲ್ತನಿಕೆಯನ್ನು ಸ್ವತಃ ವಹಿಸಿಕೊಂಡಿದ್ದು ನಾಗರಿಕರ ಮತ್ತು ಸೈನ್ಯದ ಮೂಲಕ ನೊಂದವರಿಗೆ ಸಹಾಯ ನೀಡುತ್ತಿರುವರು ಎಂದು ಪಾಕಿಸ್ತಾನಿ ಬಾನುಲಿ ತಿಳಿಸಿದೆ. ಪರಿಹಾರ ಕಾರ್ಯಗಳಿಗೆ

ಒಂದು ಮಿಲಿಯ ರೂಪಾಯಿಗಳನ್ನು ಭುಟ್ಟೋರು ಮಂಜೂರು ಮಾಡಿದ್ದಾರೆ ಎಂದೂ ಬಾನುಲಿ ತಿಳಿಸಿದೆ.

—ನವಭಾರತ, ಮಂಗಳೂರು ದಶಂಬರ 30, 1974

## ಪಾಕ್ ಭೂಕಂಪದಲ್ಲಿ ಮೃತರ ಸಂಖ್ಯೆ 4,700*

ಪಟಾನ್ (ಉತ್ತರ ಪಾಕ್) ಡಿ. 30: 1935ರ ಕ್ವೆಟ್ಟಾ ಭೂಕಂಪದ ಅನಂತರ ಮೊನ್ನೆ ಉತ್ತರ ಪಾಕಿಸ್ತಾನದಲ್ಲಿ ಒಂದು ಗ್ರಾಮವನ್ನೇ ಸಮಾಧಿಗೊಳಿಸಿದ ಭೀಕರ ಭೂಕಂಪಕ್ಕೆ 4,700 ಮಂದಿ ಬಲಿಯಾಗಿ ಕನಿಷ್ಠ 15,000 ಮಂದಿ ಗಾಯಗೊಂಡಿದ್ದಾರೆಂದು ರಕ್ಷಣಾ ತಂಡ ಕಳಿಸಿದ ವರದಿಗಳು ತಿಳಿಸಿವೆ.

ಪರಿಹಾರ ಕಾರ್ಯಗಳಿಗಾಗಿ 10 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದ ಪ್ರಧಾನಿ ಝುಡ್ ಎ. ಭುಟ್ಟೊ ತತ್‌ಕ್ಷಣದಿಂದ ತನ್ನ ಮುಂದಿನ 24 ಗಂಟೆಗಳ ಕಾರ್ಯಕ್ರಮಗಳನ್ನು ರದ್ದುಗೊಳಿಸಿ ಸ್ಥಳಕ್ಕೆ ಧಾವಿಸಿದ್ದಾರೆಂದು ಇಂದು ರೇಡಿಯೋ ಪಾಕ್ ಬಿತ್ತರಿಸಿದೆ.

ಪಟಾನ್ ಸುತ್ತಿನ ಒಂಬತ್ತು ಗ್ರಾಮಗಳು ಭೂಕಂಪ ವಿಕೋಪಕ್ಕೆ ಈಡಾಗಿದ್ದು, ದಟ್ಟ ಮಂಜಿನಿಂದಾವೃತವಾಗಿರುವುದರಿಂದ ಮೃತರ ನಿಖರ ಅಂದಾಜು ಇಷ್ಟೇ ಎಂದು ಹೇಳಬರುವಂತಿಲ್ಲ. ಭೂಕಂಪಕ್ಕೆ ತುತ್ತಾಗಿರಬಹುದಾದ ಇನ್ನೂ ಕೆಲ ಹಳ್ಳಿಗಳನ್ನು ತಲುಪಲಾಗಿಲ್ಲ. 24 ಗಂಟೆಗಳ ಅವಧಿಯಲ್ಲಿ ಪದೇ ಪದೇ ಮರುಕಳಿಸಿದ ಭೂಕಂಪಕ್ಕೆ ಬಲಿಯಾದವರ ಸಂಖ್ಯೆ ಇನ್ನೂ ಹೆಚ್ಚಿರಬಹುದೆಂದು ರಕ್ಷಣಾ ಕಾರ್ಯವನ್ನು ನಿರ್ದೇಶಿಸುತ್ತಿರುವ ಅಧಿಕಾರಿಗಳು ತಿಳಿಸಿದ್ದಾರೆ.

ಕಳೆದ 24 ಗಂಟೆಗಳಿಂದ 10 ಹೆಲಿಕಾಪ್ಟರುಗಳು ಅನಾಹುತ ಪ್ರದೇಶಕ್ಕೆ ವೈದ್ಯರು, ಆಹಾರ, ಕಂಬಳಿಗಳು ಮುಂತಾದವನ್ನು ಪೂರೈಸುತ್ತ, ತೀವ್ರ ಗಾಯಗೊಂಡವರನ್ನು ಅಲ್ಲಿಂದ ರಾವಲ್ಪಿಂಡಿಗೆ ತಂದು ಆಸ್ಪತ್ರೆಗೆ ಸೇರಿಸುತ್ತ ಸತತ ಕಾರ್ಯನಿರ್ವಹಣೆಯಲ್ಲಿವೆ.

—ಉದಯವಾಣಿ, ಮಣಿಪಾಲ ಡಿಸೆಂಬರ್ 31, 1974

## ಪಾಕ್ ಭೂಕಂಪದಲ್ಲಿ ಸತ್ತವರ ಸಂಖ್ಯೆ 5200*

ಪಟಾನ್ (ಪಾಕಿಸ್ತಾನ) ದಶಂಬರ 31: ಕಾರಕೋರಮ್ ಪರ್ವತ ಶ್ರೇಣಿಯಲಿರುವ ಪಟಾನ್‌ನಲ್ಲಿ ಕಳೆದ ಶನಿವಾರ ಸಂಭವಿಸಿದ ಭೂಕಂಪದಲ್ಲಿ 5200 ಜನರು ಸತ್ತಿದ್ದಾರೆಂದು ಕಳೆದ ಮೂರು ದಿನಗಳಿಂದ ಬಾಹ್ಯ ಸಂಪರ್ಕ ಕಡಿದು ಹೋಗಿದ್ದ ಆ ಗ್ರಾಮದಿಂದ ಈಗ ಬಂದಿರುವ ಸುದ್ದಿಗಳು ತಿಳಿಸಿವೆ.

ಭೂಕಂಪದಿಂದ ನೊಂದ ಹಿಮಾಚ್ಛಾದಿತವಾದ ಸ್ಥಳಕ್ಕೆ ಇಂದು ಪಾಕ್ ಪ್ರಧಾನಿ ಝುಡ್ ಎ. ಭುಟ್ಟೋ ತಲಪಿದ್ದು ಪರಿಹಾರ ಕಾರ್ಯಗಳಿಗಾಗಿ ಅಂತಾರಾಷ್ಟ್ರೀಯ ಸಹಾಯವನ್ನು ಯಾಚಿಸಿದ್ದಾರೆ.

ನಾಶಗೊಂಡಿರುವ ಗ್ರಾಮಗಳನ್ನು ತಲಪುವುದು ಪ್ರಯಾಸದ ಕೆಲಸವಾಗಿದೆ.

—ನವಭಾರತ, ಮಂಗಳೂರು ಜನವರಿ 1, 1975

o o o o

ಅನಾಹುತಗಳು ಭೂಕಂಪಗಳ ಮತ್ತು ಇತರ ಪ್ರಕೃತಿ ವಿಕೋಪಗಳ ರೂಪದಲ್ಲಿ ಭೂಮಿಯ ವಿವಿಧ ಭಾಗಗಳನ್ನು ಚರಿತ್ರೆಯ ವಿವಿಧ ಕಾಲಗಳಲ್ಲಿ ಬಾಧಿಸಿವೆ. ಆದರೆ, ಕಳೆದ 80 ವರ್ಷಗಳಲ್ಲಿ ಭೂಕಂಪಗಳು ಅದರ ಎಲ್ಲಾ ಕಾಠಿಣ್ಯತೆಯೊಂದಿಗೆ ಕ್ರಮಾಧಿಕ್ಯವಾಗಿ ಪ್ರತ್ಯಕ್ಷಪಟ್ಟುದನ್ನು ನಾವು ಕಾಣುತ್ತೇವೆ. ಈ ಕಾಲದಲ್ಲಿ ಭೂಮಿಯನ್ನು ಅಲ್ಲಾಡಿಸಿದ ಸಣ್ಣ ಮತ್ತು ದೊಡ್ಡ ಭೂಕಂಪಗಳನ್ನು ಕ್ರೋಢೀಕರಿಸಲು ಒಂದು ದೊಡ್ಡ ಗ್ರಂಥವೇ ಬೇಕಾಗಬಹುದು. ಈ 80 ವರ್ಷಗಳಲ್ಲಿ ಸಂಭವಿಸಿದ ಭೂಕಂಪಗಳು ಕಳೆದ 850 ವರ್ಷಗಳಲ್ಲಿ ಉಂಟಾದ ಭೂಕಂಪಗಳಿಗಿಂತ ಉಗ್ರತರದ್ದೂ ಹಾನಿಕರವೂ ಆಗಿದೆ. ಸೀಸ್‌ಮೋಲೋಜಿ (Seismology)ಯ ಅಧಿಕೃತರ ಹೇಳಿಕೆ ಪ್ರಕಾರ 1902ರ ಮತ್ತು 1928ರ ಮಧ್ಯದಲ್ಲಿ ಮಾತ್ರ 24 ಲಕ್ಷ ಜನರು ಭೂಕಂಪದಿಂದಾಗಿ ಮೃತಪಟ್ಟಿರುವರು. ಇದರಲ್ಲಿ ಫೊರ್ ಮೋ ಸಾ (1935), ಬಿಹಾರ್ (1934), ಕ್ವೆಟ್ಟಾ (1935), ಮತ್ತು 1935ರಲ್ಲಿ ಇಟಲಿಯಲ್ಲಿ ಸಂಭವಿಸಿದ ಭೀಕರ ಹಾವಳಿಯೂ ಇತರ ಭಯಾನಕ ದುರ್ಘಟನೆಗಳೂ ಒಳಪಡುವುದಿಲ್ಲ.

ನಮ್ಮ ಈ ಭೂಮಿಯಲ್ಲಿ ಏನೋ ಒಂದು ಭಯಂಕರವಾದ ಆಪತ್ತು ಸಂಭವಿಸುತ್ತಿದೆಯೆಂದು ನಮಗೆ ಇದರಿಂದ ತೋರಿಬರುತ್ತಿದೆ. ಪ್ರಕೃತಿ ವಿಕೋಪದ ಆಪತ್ತುಗಳು ಭೂಕಂಪಗಳಲ್ಲಿ ಮಾತ್ರ ಪರಿಮಿತವಾಗಿಲ್ಲ. ಜ್ವಾಲಾಮುಖಿ, ಬಿರುಗಾಳಿ, ಚಕ್ರವಾತ, ಮೊದಲಾದುವುಗಳು ಈ ಕಾಲದಲ್ಲಿ ಪದೇ ಪದೇ ಅತ್ಯಧಿಕ ನಾಶನಷ್ಟಗಳನ್ನುಂಟುಮಾಡಿವೆ. ಇಂತಹ ಪ್ರಕೃತಿ ವಿಕೋಪಗಳಿಗೆ

* ಮೃತರ ಸಂಖ್ಯೆ ಹತ್ತು ಸಾವಿರಕ್ಕಿಂತಲೂ ಮಿಕ್ಕಿದೆಯೆಂದು "ಚಂದ್ರಿಕ" ದೈನಿಕವು ವರದಿ ಮಾಡಿದೆ. (31-12-74)

ಭೂಮಿಯ ಸಂಭವಗಳ ಚರಿತ್ರೆಯಲ್ಲೇ ಉದಾಹರಣೆಗಳನ್ನು ಕಾಣಲು ಸಾಧ್ಯವಿಲ್ಲ. ಕಳೆದ ಶತಮಾನದ ಕೊನೆಯ ದಶಕದಲ್ಲೂ 20ನೆಯ ಶತಮಾನದ ಈವರೆಗೂ ಸಂಭವಿಸಿದ ಅನಾಹುತಗಳಲ್ಲಿ ಕೆಲವನ್ನು ಕೆಳಗೆ ಕೊಡಲಾಗಿದೆ.

**1884—ಕೋಲ್‌ಚೆಸ್ಟರ್ (ಇಂಗ್ಲಂಡ್)**

**1884—ರಿವೀರಾ (ಫ್ರಾನ್ಸ್)**

**1891—ಮಿನೋ ಮತ್ತು ಒನಾರಿ (ಜಪಾನ್)**

**1896—ಸಾನ್‌ರಿಕ್ (ಜಪಾನ್)** ಇದರಲ್ಲಿ 22 000 ಜನರು ಮೃತರಾಗಿರುವರು.

**1897—ಅಸ್ಸಾಂ (ಭಾರತ)**

**1905—ಕಂಗ್ರಾ (ಭಾರತ)** ಇದು 19,000 ಜನರನ್ನು ಬಲಿತೆಗೆಯಿತು.

**1906—ಚಿಲಿ (ದ. ಅಮೇರಿಕಾ)** ಇದರಲ್ಲಿ 1500 ಜನರು ಮೃತರಾದರು.

**1906—ಸಾನ್ ಫ್ರಾನ್ಸಿಸ್‌ಕೊ:** ಈ ಭೂಕಂಪವು ಒಂದು ತರದ ಬೆಂಕಿಯಜ್ವಾಲೆಯನ್ನುಂಟು ಮಾಡಿ, ಅದು 400,000 ನಷ್ಟ ನಷ್ಟವನ್ನುಂಟು ಮಾಡಿತು. ಇದರಲ್ಲಿ ನಾಶವಾದ ಸೊತ್ತಿಗೆ ಪರಿಹಾರವನ್ನೀಯಲು ಹೊರಟ ಅನೇಕ ಐರೋಪ್ಯ ವಿಮಾ ಕಂಪೆನಿಗಳು ದಿವಾಳಿಯಾದುವು. ಕ್ರಿಸ್ತಶಕಾರಂಭದಿಂದಲೂ ಇಂತಹ ಭಯಾನಕ ದುರ್ಘಟನೆಯು ಸಂಭವಿಸಿರಲಿಲ್ಲವೆಂದು ಅಂದಿನ ಪತ್ರಿಕೆಗಳು ಬರೆದಿವೆ.

**1908—ಮೆಸ್ಸೀನಾ ಮತ್ತು ರೆಗ್ಗಿಯೋಗಳ** ಇರುವಿಕೆಯನ್ನೇ ತೊಡೆದು ನೀಗಿಸಿದ ಈ ಸಂಭವವು 20,00,000 ಜನರನ್ನು ಬಲಿ ತೆಗೆದುಕೊಂಡಿತು.

**1910—ಕೋಸ್ಟಾರೀಕಾ**

**1912—ಮೆಕ್ಸಿಕೋ**

**1914—ಇಸ್‌ಬಾರ್‌ಟಾ** ಮತ್ತು **ಒರ್‌ಡೋರ್**

**1915—ಅವಾಝೂನೋ (ಇಟಲಿ):** ಇದರಲ್ಲಿ ಅಲ್ಲಿನ ಒಟ್ಟು ಜನಸಂಖ್ಯೆಯ 97 ಶತಮಾನವೂ ಮೃತಪಟ್ಟರು.

**1914–1918—ಒಂದನೇ ಲೋಕ ಮಹಾಯುದ್ಧ**—ಒಂದು ರಾಷ್ಟ್ರೀಯ ಭೂಕಂಪ. ಇದು ಯುರೋಪನ್ನೂ ಸಮಸ್ತ ಭೂಲೋಕವನ್ನೂ ನಡುಗಿಸಿತು.

**1920—ಕನ್‌ಸು (ಚೀನಾ)** ಇದರಲ್ಲಿ 2,00,000 ಜನರು ಮೃತರಾದರು.

**1923—ಜಪಾನ್** ಭಯಂಕರವಾದ ಈ ಭೂಕಂಪದಿಂದಾಗಿ ಟೋಕಿಯೋದಲ್ಲಿ 62,000 ಮಂದಿ ಮೃತಪಟ್ಟರು ಮತ್ತು 34,606 ಕಟ್ಟಡಗಳು ನಾಶವಾದುವು. ಯೊಕೋಹಾಮದಲ್ಲಿ 23,000 ಜನರು ಮೃತರಾಗಿ 68,000 ಕಟ್ಟಡಗಳು ನೆಲ ಸಮವಾದುವು. ಕನಗೋವಾದಲ್ಲಿ 6,495 ಮಂದಿ ಬಲಿಯಾದರು ಮತ್ತು 9570 ಮನೆಗಳು ನಾಶವಾದುವು. ಒಸ್ಸೀನಾ ಎಂಬ ದ್ವೀಪವು ಲೋಕ ಭೂಪಟದಿಂದಲೇ ಮಾಯವಾಯಿತು. ಒಟ್ಟು 2,00,000 ಜನರು ಮೃತಪಟ್ಟುದಾಗಿ ಅಂದಾಜು ಮಾಡಲಾಗಿದೆ.

**1932—ಕನ್‌ಸು (ಚೀನಾ)** 70,000 ಜನರು ಮೃತರಾದರು.

1934—ಬಿಹಾರದ ಮೊಂಗೀರ್ ಮತ್ತು ಮುಝಪ್ಫರ್‌ಪುರವೆಂಬ ಎರಡು ಪಟ್ಟಣಗಳು ಸಂಪೂರ್ಣ ನಾಶವಾದುವು. ಅದರ ಸುತ್ತುಮುತ್ತಲ ಪ್ರದೇಶಗಳು ಭಗ್ನಾವಶೇಷವಾಗಿ ಬಾಕಿಯುಳಿಯಿತು. ನದಿಗಳು ಅದರ ದಿಕ್ಕುಗಳನ್ನೇ ಬದಲಾಯಿಸಿದುವು. 2000 ಚದರಮೈಲು ಫಲವತ್ತಾದ ಭೂಮಿಯು ಬರಡು ಮರಳಾಗಿ ಮಾರ್ಪಟ್ಟಿತು. ಭೂಗರ್ಭ ಶಾಸ್ತ್ರಜ್ಞರ ಹೇಳಿಕೆಯಂತೆ ಇದು ಲೋಕಚರಿತ್ರೆಯಲ್ಲಿ ಅತ್ಯಂತ ಭಯಾನಕವೂ ವ್ಯಾಪ್ತವೂ ಆದ ಭೂಕಂಪವಾಗಿದೆ.

**1935—ಫೊರ್‌ಮೋಸಾ** ಇದು ಜಪಾನಿನಲ್ಲಿ 1923ರ ನಂತರ ಸಂಭವಿಸಿದ ಭೂಕಂಪಗಳಲ್ಲಿ ಅತೀ ಭಯಾನಕವಾದುದಾಗಿದೆ. ನಾಲ್ಕು ರಾಜ್ಯಗಳನ್ನು ಕ್ರೂರವಾಗಿ ಬಾಧಿಸಿದ ಈ ಭೂಕಂಪವು 3000 ಜನರು ಮೃತರಾಗಿ 1000 ಕಟ್ಟಡಗಳ ನಾಶಕ್ಕೆ ಕಾರಣವಾಯಿತು.

**1935—ಕ್ವೆಟ್ಟಾ (ಪಾಕಿಸ್ತಾನ):** ಅದು ಲೋಕಕ್ಕೆ ಕಾಣಲು ಸಾಧ್ಯವಾದ ಅತ್ಯಂತ ಭಯಾನಕವೂ ಉಗ್ರವೂ ಆದ ಭೂಕಂಪವಾಗಿತ್ತು. ಉಲ್ಲಾಸಭರಿತವೂ ಸಂಪತ್ಸಮೃದ್ಧವೂ ಆಗಿದ್ದ ಸುಂದರವಾದ ನಗರವನ್ನು ದಾರುಣವೂ ವಿಕಾರರೂಪವೂ ಉಳ್ಳ ಬಂಡೆಗಳ ರಾಶಿಯನ್ನಾಗಿ ಮಾರ್ಪಡಿಸಿತು; ಕ್ವೆಟ್ಟಾ ಎಂಬುದು ಮರಣ ಮತ್ತು ನಿರಾಶೆಯ ಒಂದು ಪಟ್ಟಣವಾಗಿ ಬದಲಾಯಿತು.

**1938—ಎನ್‌ಸಿಂಗಾನ್ (ಟರ್ಕಿ):** 23,000 ಜನರು ಮೃತರಾದರು.

1939–1945 — **ಭೀಕರವಾದ ಎರಡನೇ ಲೋಕಮಹಾಯುದ್ಧ:** ಈ ಯುದ್ಧವು ಭೂಗೋಳದ ತಳಹದಿಯನ್ನೇ ನಡುಗಿಸಿತು. ಸಮಸ್ತ ನಾಗರಿಕತೆಗಳನ್ನು ಮಣ್ಣುಪಾಲು ಮಾಡಿ ಯಥಾರ್ಥವಾದ ನರಕವನ್ನೇ ಸೃಷ್ಟಿಸಿದ ಇಂತಹ ಪ್ರಳಯವನ್ನು ಲೋಕವು ಮೊದಲು ಎಂದೂ ಕಂಡಿರಲಿಲ್ಲ.

1950 – **ಅಸ್ಸಾಂ(ಭಾರತ):** 1500 ಜನರನ್ನು ಬಲಿತೆಗೆಯಿತು.

1954— **ಉತ್ತರ ಆಲ್ಜೀರಿಯಾ:** ಸತ್ತವರ ಸಂಖ್ಯೆ 1657.

1956— **ಉತ್ತರ ಅಫಘಾನಿಸ್ತಾನ:** ಸತ್ತವರ ಸಂಖ್ಯೆ 2000.

1957— **ಉತ್ತರ ಇರಾನ್:** ಸತ್ತವರ ಸಂಖ್ಯೆ 2500.

1960—**ಅಗದಿರ್ (ಮೊರೋಕ್ಕೋ):** ಸತ್ತವರ ಸಂಖ್ಯೆ 12 000.

1962 — **ಇರಾನ್:** ಸತ್ತವರ ಸಂಖ್ಯೆ 10,000.

1963—**ಸ್ಕೋಪ್‌ಜೆ (ಯುಗೋಸ್ಲಾವಿಯಾ):** ಭೂಕಂಪಗಳ ತೆರೆಮಾಲೆಗಳು ಸ್ಕೋಪ್‌ಜೆ ಮತ್ತು ಮಕೆದೋನಿಯಾ ಎಂಬ ಪಟ್ಟಣಗಳನ್ನು ಸಂಪೂರ್ಣ ನಾಶಮಾಡಿತು. 1000ಕ್ಕಿಂತಲೂ ಹೆಚ್ಚು ಜನರು ಮೃತರಾಗಿ 1,00 000 ಕಟ್ಟಡಗಳು ನಾಶವಾದುವು.

1966—**ತಾಷ್ಕೆಂಟ್ (ರಶ್ಯಾ):** ಭಯಾನಕವಾದ ಭೂಕಂಪವು 28,000 ಕಟ್ಟಡಗಳನ್ನು ನಾಶಪಡಿಸಿ 1,00,000 ಜನರನ್ನು ನಿರಾಶ್ರಿತರನ್ನಾಗಿ ಮಾಡಿತು.

1967—**ಕೊಯ್ನಾ (ಭಾರತದ ಪಶ್ಚಿಮ ಕರಾವಳಿ):** ಉಗ್ರವಾದ ಭೂಕಂಪವು ಬೊಂಬಾಯಿಯಿಂದ ಮಂಗಳೂರು ವರೆಗಿನ ಕರಾವಳಿ ಪ್ರದೇಶವನ್ನು ತೀವ್ರವಾಗಿ ಬಾಧಿಸಿತು. ಕೊಯ್ನಾ ನಗರವು ದಯನೀಯವಾದ ನಷ್ಟಕ್ಕೆ ಗುರಿಯಾಯಿತು.

1967—**ಕರಕಾಸ್ – ವೆನೆಜುಲಾ:** ಒಂದು ಘಂಟೆಯಲ್ಲಿ ಸಂಭವಿಸಿದ 3 ಭೂಕಂಪಗಳು ಆ ರಾಜಧಾನಿಯನ್ನು ಮತ್ತು ಸುತ್ತುಮುತ್ತಲ ಪ್ರದೇಶವನ್ನು ತೀವ್ರ ನಾಶಕ್ಕೆ ಗುರಿಪಡಿಸಿತು. 277 ಮಂದಿ ಮೃತರಾಗಿ, 1000 ಮಂದಿ ಆಸ್ಪತ್ರೆಯಲ್ಲಿ ಆಶ್ರಯಪಡೆದರು. 1,10,000 ಮಂದಿ ಮನೆಯಿಲ್ಲದೆ ನಿರಾಶ್ರಿತರಾದರು.

1970—**ಗೆಡಿಸ್ (ಟರ್ಕಿ):** 48 ಸೆಕುಂಡಗಳು ಭೂಕಂಪದಿಂದಾಗಿ ಟರ್ಕಿಯ ಒಂದು ಪಟ್ಟಣವಾದ ಗೆಡಿಸ್ ನಗರವು ಪೂರ್ಣ ನಾಶವಾಯಿಂತು. ಈ ಭೂಕಂಪವು ಇಡಿಯ ಟರ್ಕಿಯನೇ ಬಾಧಿಸಿದೆ. **3000** ಜನರು ಮೃತರಾಗಿ **3400** ಕಟ್ಟಡಗಳು ಮಣ್ಣುಪಾಲಾದುವು.

**ಆಧ್ಯಾತ್ಮಿಕ ದೃಷ್ಟಿಕೋನ**—ಭೂಗರ್ಭ ಶಾಸ್ತ್ರವನ್ನೋದುವ ಒಬ್ಬ ವಿದ್ಯಾರ್ಥಿಗೆ ಇದು ಒಂದು ಸಾಧಾರಣ ಪ್ರಾಕೃತಿಕ ಸಂಭವವಾಗಿ ತೋರಬಹುದು. ಆದರೆ ಪ್ರಕೃತಿಯ ಈ ಸಾಧಾರಣ ಚಿತ್ರಭೃಮೆಯು ಒಂದು ತೀವ್ರರೂಪವನ್ನು ತಾಳಿ ಚಿಕ್ಕದಾದ ಕಾಲಾವಧಿಯಲ್ಲಿ ಅತ್ಯಂತ ನಾಶಕರವಾದ ಕೃತ್ಯಗಳನ್ನೆಸಗುವುದು ನಿಜವಾಗಿಯೂ ಒಂದು ಅಂತರಾರ್ಥವನ್ನೊಳಗೊಂಡಿದೆ. ಇದು ಒಂದು ಆಧ್ಯಾತ್ಮಿಕ ಚಮತ್ಕಾರವನ್ನು ಸೂಚಿಸುತ್ತದೆ.

ಮಾನವರು ದೇವರನ್ನು ಮರೆತು ತಮ್ಮ ಧಾರ್ಮಿಕ ಕರ್ತವ್ಯಗಳಲ್ಲಿ ಅಶ್ರದ್ಧರಾಗಿ ಕೇವಲ ಲೌಕಿಕವಾದ ತಮ್ಮ ತುಚ್ಛ ಆವಶ್ಯಕತೆಗಳಿಗಾಗಿ ತವಕಪಡುವ ದೋಷಪೂರ್ಣವಾದ ವಾತಾವರಣವು ಉಂಟಾದಾಗಲೆಲ್ಲಾ ದೇವರು ತನ್ನ ಅಪರಿಮಿತವಾದ ಕರುಣೆಯಿಂದ ಪ್ರವಾದಿಗಳನ್ನು ನಿಯೋಗಿಸುತ್ತಾ ಮನುಷ್ಯರಿಗೆ ತಮ್ಮೊಳಗೆ ಪರಸ್ಪರವೂ, ದೇವರೊಡನೆಯೂ ಇರುವ ಕರ್ತವ್ಯಗಳನ್ನು ತಿಳಿಸಿಕೊಡುವನು ಎಂಬುದು ಆ ಪರಮಾತ್ಮನ ಪುರಾತನವೂ ಸನಾತನವೂ ಆದ ಒಂದು ನಿಯಮವಷ್ಟೇ. ಭೌತಿಕತೆಯಲ್ಲಿ ಮುಳುಗಿ ಧಾರ್ಮಿಕವಾಗಿ ಅವನತಿ ಹೊಂದುತ್ತಿರುವ ಜನಸಮೂಹವನ್ನು ಈ ಪ್ರವಾದಿಗಳು ಬಂದು ಶುದ್ಧೀಕರಿಸುತ್ತಾ ಅವರನ್ನು ಆತ್ಮೀಕವಾಗಿ ಮೇಲೇರಿಸುವರು. ಇಂತಹ ಪ್ರವಾದಿಗಳು ಲೋಕದ ನಾನಾ ಭಾಗಗಳಲ್ಲಿ ವಿಭಿನ್ನ ಕಾಲಗಳಲ್ಲಿ ಅವತರಿಸಿರುವರು. ಲೋಕದಲ್ಲಿ ಜನ್ಮವೆತ್ತಿದ ಎಲ್ಲಾ ಪ್ರವಾದಿಗಳೂ ಮೋಶೆ, ಯೇಸು, ಝೊರಾಸ್ಟರ್, ಕನ್‌ಫ್ಯೂಸಸ್, ಶ್ರೀ ಬುದ್ಧ, ಶ್ರೀಕೃಷ್ಣ, ಶ್ರೀರಾಮಚಂದ್ರ ಮಾತ್ರವಲ್ಲ ಪ್ರವಾದಿಗಳಲ್ಲಿ ಸಾರ್ವಭೌಮರಾದ ಮುಹಮ್ಮದ್ ಪೈಗಂಬರರೂ ಕೂಡಾ ಇಂತಹ ಕಾಲದಲ್ಲಿಯೇ ಅವತರಿಸಿದವರಾಗಿದ್ದಾರೆ. ಒಬ್ಬ ಪ್ರವಾದಿಯ ಅವತಾರಕ್ಕಿರುವ ಅತ್ಯಗತ್ಯವು ನಮ್ಮ ಈ ಕಾಲದಲ್ಲಿಯೂ ತುಲ್ಯಶಕ್ತಿಯೊಂದಿಗೆ ಪ್ರತ್ಯಕ್ಷವಾಗಿರುವುದು. ಇಂದಿನ ಸಾಮಾಜಿಕ ಮತ್ತು ಧಾರ್ಮಿಕ ಅವಸ್ಥೆಯು ಒಬ್ಬ ಪ್ರವಾದಿಯ ಅವತರಣಕ್ಕಿರುವ ಅನಿವಾರ್ಯತೆಯನ್ನು ಕೂಗಿ ಹೇಳುತ್ತಿದೆ.

ಹೌದು, ದೈವನಿಯುಕ್ತನಾದ ಒಬ್ಬ ಸಂದೇಶವಾಹಕ– ಒಬ್ಬ ಪ್ರವಾದಿ. ಒಬ್ಬ ಪ್ರವಾದಿಯ ಆಗಮನಕ್ಕೆ ನಮ್ಮ ಈ ಕಾಲದಲ್ಲಿರುವಷ್ಟು ಅತ್ಯಗತ್ಯವು ಲೋಕಚರಿತ್ರೆಯಲ್ಲಿ ಎಂದೂ ಉಂಟಾಗಿರಲಿಲ್ಲವೆಂದು ಹೇಳಿದರೆ ತಪ್ಪಾಗಲಾರದು. ಈ ಸಂದರ್ಭದಲ್ಲಿ ಅಹ್ಮದೀಯರು ಲೋಕಕ್ಕೆ ತಿಳಿಸುವ ಶುಭವಾರ್ತೆಯೇನೆಂದರೆ, **ಈ ಆವಶ್ಯಕತೆಯು ಹಝ್ರತ್ ಮಿರ್ಝಾ ಗುಲಾಂ ಅಹ್ಮದ್‌ರವರ ಅವತರಣದೊಂದಿಗೆ ನಿವಾರಿಸಲ್ಪಟ್ಟಿರುವುದು.** ಅವರು ಪಂಜಾಬಿನ ಖಾದಿಯಾನ್ ಎಂಬಲ್ಲಿ ಜನಿಸಿದರು. 1889ರಲ್ಲಿ ತಾನು ದೈವನಿಯುಕ್ತನಾದ ಒಬ್ಬ ಪ್ರವಾದಿಯಾಗಿರುವೆನೆಂದೂ ಆಧ್ಯಾತ್ಮಿಕವಾಗಿ ಮೃತಿಹೊಂದಿದ ಇಂದಿನ ಜಗತ್ತನ್ನು ಉದ್ಧರಿಸಲು ತನ್ನನ್ನು ದೇವರು ನಿಯೋಗಿಸಿರುವನೆಂದೂ ಅವರು ವಾದಿಸಿದರು.

**ಸಮಾಧಾನದ ಸಂದೇಶ:** ಎಲ್ಲಾ ವರ್ಗದವರಿಗೂ ಎಲ್ಲಾ ರಾಷ್ಟ್ರದವರಿಗೂ ಸಮಾಧಾನಕರವಾದ ಒಂದು ಸಂದೇಶವನ್ನು ಪ್ರವಾದಿ ಅಹ್ಮದ್‌ರವರು ತಂದರು. ಯಥಾರ್ಥದಲ್ಲಿ ಅವರು ತಂದುದು ಒಂದು ಹೊಸ ಸಂದೇಶವಾಗಿರಲಿಲ್ಲ. ಇಸ್ಲಾಂ ಧರ್ಮವು ಲೋಕದ ಮುಂದೆ ಸಮರ್ಪಿಸಿದ ಆದರೆ ಲೋಕವು ಮುಖ ತಿರುಗಿಸಿ ಮಾನವರಿಂದ ಅಜ್ಞಾತವಾಗಿದ್ದ ಆ ದಿವ್ಯ ಸಂದೇಶವನ್ನೇ ಅವರು ಪುನಃ ಲೋಕಕ್ಕೆ ನೆನಪಿಸಿಕೊಟ್ಟರು. ಆ ದಿವ್ಯ ಸಂದೇಶವನ್ನು ಇಸ್ಲಾಮಿನ ಅನುಯಾಯಿಗಳಾದ ಮುಸ್ಲಿಮರೂ ಕೂಡಾ ಸಂಪೂರ್ಣ ಮರೆತು ಬಿಟ್ಟಿದ್ದರು. ಹಝ್ರತ್ ಅಹ್ಮದ್‌ರಿಗೆ ಮೊದಲು ಲೋಕದಲ್ಲಿ ಅವತಾರವೆತ್ತಿದ ಪ್ರವಾದಿಗಳು ಅನುಭವಿಸಿದಂತೆ ಮರ್ಧನಗಳನ್ನೂ ಕಷ್ಟಗಳನ್ನೂ ಉಪದ್ರವಗಳನ್ನೂ ಅವರಿಗೂ ಸಹಿಸಬೇಕಾಯಿತು. ಎಲ್ಲಾ ಪ್ರವಾದಿಗಳಂತೆ ಅವರೂ ಬಹು ಸಂಖ್ಯಾತರಿಂದ ತಿರಸ್ಕರಿಲ್ಪಟ್ಟರು. ಆದರೆ ಭಕ್ತವತ್ಸಲನಾದ ದೇವರು ಪೂರ್ವ ಪ್ರವಾದಿಗಳ ಸತ್ಯತೆಯನ್ನು ತನ್ನ ಅದ್ಭುತ ದೃಷ್ಟಾಂತಗಳಿಂದ ಸತ್ಯಪಡಿಸಿ ತೋರಿಸಿದಂತೆ ಇವರ ಕಾಲದಲ್ಲೂ ಶತ್ರುಗಳ ಶಕ್ತಿಯನ್ನು ಪರಾಭವಗೊಳಿಸಿ ತನ್ನ ಅದ್ಭುತವಾದ ದೃಷ್ಟಾಂತಗಳ ಮೂಲಕ ಇವರ ವಾದದ ಸತ್ಯತೆಯನ್ನೂ ಲೋಕಕ್ಕೆ ತಿಳಿಸಿಕೊಟ್ಟನು. ಅವರ ಅನುಯಾಯಿಗಳನ್ನು ದಿನೇ ದಿನೇ ಅಭಿವೃದ್ಧಿಗೊಳಿಸುತ್ತಲೂ, ಶತ್ರುಗಳನ್ನು ಶಕ್ತವಾಗಿ ಶಿಕ್ಷಿಸುತ್ತಲೂ ನಾಶಪಡಿಸುತ್ತಲೂ ಬಂದನು. ಮಹೋನ್ನತನಾದ ಆ ದೇವರಿಂದ ಹಝ್ರತ್ ಅಹ್ಮದ್‌ರಿಗೆ ಲಭಿಸಿದ ದಿವ್ಯವಾಣಿಗಳಲ್ಲಿ ಒಂದು ಈ ರೀತಿಯಿದೆ.

**"ಲೋಕದಲ್ಲಿ ಒಬ್ಬ ಮುನ್ನೆಚ್ಚರಿಕೆಗಾರನು ಬಂದನು, ಲೋಕವು ಆತನನ್ನು ಸ್ವೀಕರಿಸಲಿಲ್ಲ. ಆದರೆ ಪರಮಾತ್ಮನು ಆತನನ್ನು ಸ್ವೀಕರಿಸುವನು ಮತ್ತು ಶಕ್ತಿಯುತವಾದ ದೃಷ್ಟಾಂತಗಳಿಂದ ಆತನ ಸತ್ಯತೆಯನ್ನು ಲೋಕಕ್ಕೆ ತೋರಿಸಿ ಕೊಡುವನು."**

**ಶಕ್ತಿಯುತವಾದ ದೃಷ್ಟಾಂತಗಳು:**—ಅನೇಕ ತರದ ದೃಷ್ಟಾಂತಗಳು ಈ ಕಾಲದ ಸತ್ಯತೆಯನ್ನು ತೋರಿಸಿಕೊಟ್ಟಿವೆ. ಕ್ಷಾಮ, ಬರಗಾಲ, ನೆರೆ, ಬೆಂಕಿ ಅನಾಹುತ, ಪ್ಲೇಗು ಮೊದಲಾದ ಸೊಗಡು ರೋಗಗಳು, ಭಯಂಕರ ಯುದ್ಧಗಳು ಮತ್ತು ಭೂಕಂಪಗಳು ಮೊದಲಾದ ಕ್ರಮಾತೀತವಾದ ಭೀಕರ ಅನಾಹುತಗಳಿಂದ ಕಳೆದ 80 ವರ್ಷಗಳ ಪ್ರಕೃತಿಯ ಚರಿತ್ರೆಯು ನಿರ್ಭರಿತವಾಗಿದೆ. ಆದರೆ ಈ ಎಲ್ಲಾ ಪ್ರಕೃತಿ ವಿಕೋಪಗಳೂ ಗದರಿಸುವ ಭೂಕಂಪಗಳೂ ಪವಿತ್ರ ಖುರಾನ್ ಮತ್ತು ಪವಿತ್ರ ಪ್ರವಾದಿ ಮುಹಮ್ಮದ್ ಪೈಗಂಬರ್ (ಸ) ರ ಹೇಳಿಕೆಯನ್ನನುಸರಿಸಿ ಸಂಭವಿಸಿದ್ದಾಗಿದೆ. ಪ್ರತ್ಯೇಕವಾಗಿ ತನ್ನ ಎರಡನೆಯ ಆಗಮನ ಕಾಲದ ಲಕ್ಷಣವಾಗಿ ಯೇಸು ಕ್ರಿಸ್ತರು ಹೇಳಿದ ದೀರ್ಘದರ್ಶನಗಳೂ ಇಲ್ಲಿ ಸ್ಮರಣೀಯವಾಗಿವೆ. ಅಂತ್ಯಕಾಲದಲ್ಲಿ ಸಂಭವಿಸಲಿರುವ ಅನಾಹುತಗಳ ಕುರಿತು ಹೇಳುತ್ತಾ ಪವಿತ್ರ ಖುರಾನ್ ಒಂದೆಡೆ ಈರೀತಿ ಹೇಳುತ್ತದೆ:–"ಈ ಕಾರ್ಯಗಳಿಗಾಗಿ ನಿಯಮಿಸಲ್ಪಟ್ಟಿರುವ ದೇವದೂತರ ಆಣೆಯಿಟ್ಟು ಹೇಳುತ್ತೇನೆ, ಆಗ ಭೂಮಿಯಲ್ಲಿ ಭಯಂಕರವಾಗಿ ನಡುಗಿಸುವ ಕಂಪನವು ಉಂಟಾಗುವುದು. ಭೂಕಂಪವನ್ನು ಬೆನ್ನಟ್ಟಿ ಭೂಕಂಪವು ಬರುವುದು. ಎಷ್ಟರ ವರೆಗೆಂದರೆ, ಮನುಷ್ಯ ಹೃದಯಗಳು ನಡುನಡುಗಿ ಅವರ ಕಣ್ಣುಗಳು ಅಧೋಮುಖವಾಗುವುದು." (ಪವಿತ್ರ ಖುರಾನ್ 79ನೇ ಅಧ್ಯಾಯ 6ರಿಂದ 10ರ ವರೆಗೆ ವಚನಗಳನ್ನು ನೋಡಿರಿ.)

ನಿಮ್ಮ ಎರಡನೆಯ ಬರುವಿಕೆಯ ಲಕ್ಷಣಗಳಾವುವು ಎಂದು ಯೇಸುಕ್ರಿಸ್ತರೊಡನೆ ಅವರ ಕೆಲವು ಶಿಷ್ಯರು ಕೇಳಿದಾಗ ಅವರು ನೀಡಿದ ಉತ್ತರವು ಇದಾಗಿತ್ತು:— "ಜನಕ್ಕೆ ವಿರೋಧವಾಗಿ ಜನವೂ ರಾಜ್ಯಕ್ಕೆ ವಿರೋಧವಾಗಿ ರಾಜ್ಯವೂ ಏಳುವುವು; ಮತ್ತು ಭೂಕಂಪಗಳು ಅಲ್ಲಲ್ಲಿ ಆಗುವವು. ಸೂರ್ಯನು ಕತ್ತಲಾಗಿ ಹೋಗುವನು. ಚಂದ್ರನು ಬೆಳಕು ಕೊಡದೆ ಇರುವನು. ನಕ್ಷತ್ರ

ಗಳು ಆಕಾಶದಿಂದ ಉದುರುತ್ತಿರುವವು. ಆಕಾಶದಲ್ಲಿರುವ ಶಕ್ತಿಗಳು ಕದಲುವವು. ಆಗ ಮನುಷ್ಯ ಕುಮಾರನು ಬಹುಬಲದಿಂದಲೂ ಮಹಿಮೆಯಿಂದಲೂ ಮೇಘಗಳಲ್ಲಿ ಬರುವನು." (ಮಾರ್ಕ 13ನೇ ಅಧ್ಯಾಯ, ಲೂಕ 17ನೇ ಅಧ್ಯಾಯ, ಮತ್ತಾಯ 24ನೇ ಅಧ್ಯಾಯ ನೋಡಿರಿ.)

ಕ್ಷಾಮ, ಯುದ್ಧ, ಪ್ಲೇಗು ಮತ್ತು ಭೂಕಂಪಗಳ ಕುರಿತಾದ ಮುನ್ನೆಚ್ಚರಿಕೆಗಳನ್ನು ಯೇಸುಕ್ರಿಸ್ತರು ಮಾತ್ರವಲ್ಲ, ಅವರ ಆತ್ಮೀಕ ಶಕ್ತಿ ಮತ್ತು ಗುಣ ಲಕ್ಷಣಗಳೊಂದಿಗೆ ಈ ಕಾಲದಲ್ಲಿ ಅವತರಿಸಿದ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್‌ರವರೂ ನೀಡಿರುವರು. ಅವರ ಕಾಲದಲ್ಲೂ ನಂತರದ ಕಾಲಗಳಲ್ಲೂ ಸಂಭವಿಸಲಿರುವ ಭಯಂಕರ ಅನಾಹುತಗಳ ಕುರಿತು ಅವರು ಅನೇಕಾನೇಕ ದೀರ್ಘ ದರ್ಶನಗಳನ್ನು ಗೈದಿರುವರು. ಲೋಕ ಚರಿತ್ರೆಯಲ್ಲೇ ಉದಾಹರಣೆಯಿಲ್ಲದ ರೀತಿಯಲ್ಲಿ ಅತ್ಯುಗ್ರವಾದ ಪ್ರಕೃತಿ ವಿಕೋಪಗಳು ಸಂಭವಿಸಲಿವೆಯೆಂದೂ ಮನುಷ್ಯರು ಕಂಗಾಲಾಗಿ ಈ ಭೂಮಿಗೆ ಇದೇನು ಸಂಭವಿಸಿತೆಂದೂ, ಇನ್ನೇನು ಸಂಭವಿಸಲಿರುವುದೆಂದೂ ಕೇಳುವ ಕಾಲವು ಬರಲಿದೆಯೆಂದೂ ಅವರು ಹೇಳಿದರು.

**ಹಝ್ರತ್ ಅಹ್ಮದ್‌ರವರ ದೀರ್ಘ ದರ್ಶನಗಳು:** ಈ ಕಾಲದಲ್ಲಿ ಸಂಭವಿಸಲಿರುವ ಅನಾಹುತಗಳ ಕುರಿತು ಈ ಕಾಲಕ್ಕಾಗಿ ದೇವರು ನಿಯೋಗಿಸಿದ ಪ್ರವಾದಿಯು ಗೈದ ಆಶ್ಚರ್ಯಕರವಾದ ಕೆಲವು ದೀರ್ಘದರ್ಶನಗಳನ್ನು ಕೆಳಗೆ ಕೊಡಲಾಗುವುದು.

"ಚರಿತ್ರೆಯಲ್ಲಿ ಅಪೂರ್ವವಾದಂತಹ ನಾಶ ನಷ್ಟಗಳು ಪಟ್ಟಣಗಳನ್ನೂ ಹಳ್ಳಿಗಳನ್ನೂ ಬಾಧಿಸಲಿವೆ. ಕಣ್ಣು ಪಿಳಿಕಿಸುವ ಸುಖ ಸೌಕರ್ಯಗಳ ಅರಮನೆಗಳಂತೆ ಶೋಭಿಸುತ್ತಿರುವ ಪಟ್ಟಣಗಳು ಪಾಳುಬಿದ್ದು ಶೋಕಪೂರ್ಣವಾದ ದೃಶ್ಯಗಳಾಗಿ ಮಾರ್ಪಡಲಿವೆ. ಭೌತಿಕತೆಯಲ್ಲಿ ಮುಳುಗಿರುವ ಸುಂದರವಾದ ನಗರಗಳು ನುಚ್ಚುನೂರಾಗಿ ಅವಶೇಷಗಳು ಮಾತ್ರ ಬಾಕಿಯುಳಿಯುವುವು. ಸಂಖ್ಯಾತೀತವಾದ ಜೀವ ಹಾನಿಯುಂಟಾಗುವುದು. ಅಂತಹ ಭಯಾನಕ ದೃಶ್ಯಗಳನ್ನು ನೀವು ಮೊದಲು ಎಂದೂ ಕಂಡಿರಲಿಕ್ಕಿಲ್ಲ. ಅದರ ಕುರಿತಾದ ಯಾವ ಒಂದು ತೀರ್ಮಾನವನ್ನು ಕೈಗೊಳ್ಳಲಿಕ್ಕೂ ನಿಮ್ಮಿಂದ ಸಾಧ್ಯವಾಗಲಾರದು. ಆದರೆ ನಾನು ಅವುಗಳನ್ನೆಲ್ಲಾ ದರ್ಶನದಲ್ಲಿ ಕಂಡಿರುವೆನು. ಅವು ನನ್ನ ಕಣ್ಣೆದುರಿನಲ್ಲಿ ಸುಳಿದಾಡುತ್ತಿವೆ. (ದುರ್ರೆ ಸಮೀನ್)

"ಪ್ರಳಯ ಕಾಲವನ್ನು ಹೋಲುವಂತಹ ಭಯಂಕರವಾದ ಭೂಕಂಪಗಳು ಸಂಭವಿಸಲಿವೆ. ಭೂಮಿಯು ಅಡಿಮೇಲಾದಂತೆ ತೋರುವ ದಾರುಣವಾದ ಆ ದುರ್ಘಟನೆಗಳಿಗೆ ಅನೇಕಾನೇಕ ಜೀವಿಗಳು ಬಲಿಯಾಗುವುವು. ಆದರೆ ಪಶ್ಚಾತ್ತಾಪಪಟ್ಟು ಪೈಶಾಚಿಕ ನಡವಳಿಕೆಗಳನ್ನು ತೊಲಗಿಸುವವರಿಗೆ ಕರುಣೆಯು ತೋರಿಸಲ್ಪಡುವುದು. ಈ ಕಾಲದ ಕುರಿತು ಎಲ್ಲಾ ಪ್ರವಾದಿಗಳೂ ಮುನ್ನೆಚ್ಚರಿಕೆಯಿತ್ತಿರುವರು. ಈ ದೀರ್ಘ ದರ್ಶನಗಳಂತೆಯೇ ಎಲ್ಲವೂ ಸಂಭವಿಸಬೇಕಾಗಿದೆ.'' (ಅಲ್‌ವಸಿಯ್ಯತ್)

**ಒಂದು ಮಹತ್ತಾದ ಭವಿಷ್ಯ ನುಡಿ:** "ನೆನಪಿಡಿರಿ, ಈ ಭೂಲೋಕದಲ್ಲಿ ಅನೇಕ ಭೂಕಂಪಗಳು ಸಂಭವಿಸಲಿವೆಯೆಂಬ ಸೂಚನೆಯನ್ನು ಸರ್ವಶಕ್ತನಾದ ಪರಮಾತ್ಮನು ನನಗೆ ಅರುಹಿದ್ದಾನೆ. ನಾನು ಮುಂದಾಗಿ ತಿಳಿಸಿದ್ದಂತೆ ಅಮೇರಿಕವನ್ನೂ ಯುರೋಪನ್ನೂ ಭೂಕಂಪಗಳು ಬಾಧಿಸಿವೆ. ಅಂತೆಯೇ ಏಷ್ಯಾವನ್ನು ಸಹ ಬಾಧಿಸುವುದು ಖಂಡಿತ. ಅವುಗಳಲ್ಲಿ ಕೆಲವು ಪ್ರಳಯ ಕಾಲದ ಭಯಂಕರವಾದ ಸರ್ವನಾಶಕ್ಕೆ ತುಲ್ಯವಾಗಿರಬಹುದು. ಹಲವಾರು ಮಂದಿ ಮಡಿಯುವರು. ರಕ್ತದ ಹೊಳೆಗಳೇ ಹರಿಯುವುವು. ಮನುಷ್ಯನುಂಟಾದ ಕಾಲದ ಮೊದಲ್ಗೊಂಡು ಇಂದಿನ ವರೆಗೂ ಸಂಭವಿಸದಂತಹ ಅತ್ಯಂತ ಭಯಂಕರವಾದ ನಾಶವು ಉಂಟಾಗಲಿದೆ. ಹೆಚ್ಚಿನ ಭಾಗಗಳು ಅಲ್ಲಿ ಎಂದೂ ಜನವಾಸವಿದ್ದಿಲ್ಲವೆಂದೂ ತೋರುವಷ್ಟರ ಮಟ್ಟಿಗೆ ಅಡಿಮೇಲಾಗಿ ಸರ್ವನಾಶವಾಗುವುವು. ಇದರೊಂದಿಗೆ ಭೂಮಿಯಲ್ಲೂ ಆಕಾಶದಲ್ಲೂ ಭಯಂಕರವಾದ ನಾಶಗಳು ಸಂಭವಿಸಲಿವೆ. ವಿವೇಕವುಳ್ಳ ಜನರು ಇದರ ಅಸಾಧಾರಣತೆಯನ್ನು ಅರಿಯುವರು. ವೈಜ್ಞಾನಿಕ ಮತ್ತು ತತ್ವಜ್ಞಾನ ಗ್ರಂಥಗಳಿಂದ ಇವುಗಳ ಕುರಿತು ಏನನ್ನೂ ಅರಿಯಲು ಸಾಧ್ಯವಾಗಲಾರದು. ಆಗ ಜನರು ಪರಿಭ್ರಾಂತರಾಗಿ ಮುಂದೇನು ಸಂಭವಿಸುವುದು ಎಂದು ಕೇಳತೊಡಗುವರು ಅನೇಕರು ಮೋಕ್ಷ ಮಾರ್ಗವನ್ನು ಸ್ವೀಕರಿಸುವರು. ಅನೇಕರು ನಾಶವಾಗುವರು. ಆ ದಿನಗಳು ಅತೀ ಹತ್ತಿರವಿವೆ. ಅಲ್ಲ, ಅವು ಬಾಗಿಲಲ್ಲೇ ಬಂದು ನಿಂತಿವೆ. ಒಂದು ಮಹಾ ಪ್ರಳಯದ ನಾಶವನ್ನು ಈ ಲೋಕವು ಕಣ್ಣಾರೆ ಕಾಣಲಿದೆ. ಭೂಕಂಪಗಳು ಮಾತ್ರವಲ್ಲ ಆಕಾಶದಲ್ಲೂ

ಭೂಮಿಯಲ್ಲೂ ಇನ್ನೂ ಅನೇಕ ವಿಪತ್ತುಗಳು ಪ್ರತ್ಯಕ್ಷ ಪಡುವುವು. ಇವೆಲ್ಲಾ ಸಂಭವಿಸಲು ಕಾರಣ ಮನುಷ್ಯರು ಪರಮಾತ್ಮನನ್ನು ಮರೆತು ಭಕ್ತಿಮಾರ್ಗವನ್ನು ಉಪೇಕ್ಷಿಸಿ ತಮ್ಮ ಸಕಲ ಪ್ರಯತ್ನಗಳನ್ನೂ ಕೇವಲ ಲೌಕಿಕ ಆಡಂಭರಗಳಿಗಾಗಿ ಮೀಸಲಾಗಿರಿಸಿದ್ದೇ ಆಗಿದೆ. **"ಒಬ್ಬ ಪ್ರವಾದಿಯನ್ನು ಕಳುಹಿಸದೆ ನಾವು ಜನರನ್ನು ಶಿಕ್ಷಿಸುವುದಿಲ್ಲ"** ಎಂದು ಪರಮಾತ್ಮನು ಪವಿತ್ರ ಖುರಾನಿನಲ್ಲಿ ಹೇಳಿರುವನು.—(17:16) ಪಶ್ಚಾತ್ತಾಪ ಪಡುವವರು ರಕ್ಷಿಸಲ್ಪಡುವರು. ಆಪತ್ತುಗಳಿಗೆ ಭಯ ಪಡುವವರೊಡನೆ ಕರುಣೆಯು ತೋರಿಸಲ್ಪಡುವುದು. ಇವುಗಳಿಂದೆಲ್ಲಾ ವಿಮುಕ್ತರಾಗಲು ನಿಮಗೆ ಸಾಧ್ಯವೆಂದು ನೀವು ಭಾವಿಸುವಿರಾ? ಎಂದಿಗೂ ಸಾಧ್ಯವಿಲ್ಲ. ಅಂದು ಮನುಷ್ಯರ ಎಲ್ಲಾ ಯೋಜನೆಗಳೂ ಪರಾಜಯಗೊಳ್ಳುವುವು. ಅಮೇರಿಕದಲ್ಲೂ ಇನ್ನಿತರ ಭೂಖಂಡಗಳಲ್ಲೂ ಭೂಕಂಪಗಳಾದರೂ ನಿಮ್ಮ ರಾಜ್ಯವು ಸುರಕ್ಷಿತವಾಗಿಯೇ ಇರುವುದೆಂದು ನೀವು ಭಾವಿಸುವಿರಾ? ಆದಕ್ಕಿಂತಲೂ ದಾರುಣವಾದ ಕಷ್ಟನಷ್ಟಗಳಿಗೆ ನೀವು ಗುರಿಯಾಗುವಿರಿ. **ಎಲೈ ಯುರೋಪಿನ ಜನರೇ; ನೀವು ಸುರಕ್ಷಿತರಲ್ಲ. ಎಲೈ ಏಷ್ಯಾ ನೀನೂ ಸುರಕ್ಷಿತವಲ್ಲ. ಎಲೈ ದ್ವೀಪ ನಿವಾಸಿಗಳೇ ನಿಮ್ಮಿಂದ ನಿರ್ಮಿತವಾದ ಹುಸಿದೈವವು ಆ ದಿನದಂದು ನಿಮ್ಮನ್ನು ರಕ್ಷಿಸಲಾರದು. ದೊಡ್ಡ ದೊಡ್ಡ ಮಹಾನಗರಗಳು ಕುಸಿದು ಬೀಳುವುದನ್ನು ನಾನು ಕಾಣುತ್ತಿರುವೆನು. ಆ ಸರ್ವಶಕ್ತನಾದ ಪರಮಾತ್ಮನು ಒಂದು ದೀರ್ಘ ಕಾಲದವರೆಗೆ ಮೌನವನ್ನಾಚರಿಸಿದನು. ತನ್ನ ಸಮ್ಮುಖದಲ್ಲೇ ಹೇಯವಾದ ಅನೇಕ ದುಷ್ಕೃತ್ಯಗಳು ನಡೆಯುತ್ತಿದ್ದರೂ ಅವನು ಸುಮ್ಮನಿದ್ದನು. ಆದರೆ ಈಗ ಅವನು ಭಯಂಕರ ಸ್ವರೂಪದಿಂದ ತನ್ನ ಮುಖವನ್ನು ತೋರಿಸುವನು.** ಕಿವಿಯಿರುವವರು ಕೇಳಿಕೊಳ್ಳಲಿ. ಆ ಕಾಲವು ವಿದೂರವಲ್ಲ. ನಾನು ಎಲ್ಲರನ್ನೂ ದೇವರ ರಕ್ಷಣೆಯಲ್ಲಿ ಒಟ್ಟುಗೂಡಿಸಲು ಸರ್ವ ಪ್ರಯತ್ನ ಮಾಡಿದೆ. ಆದರೆ, ವಿಧಿಲಿಖಿತವು ಸಂಭವಿಸಲೇ ಬೇಕಲ್ಲವೇ. ನಾನು ಸತ್ಯವಾಗಿಯೂ ನಿಮ್ಮೊಡನೆ ಹೇಳುತ್ತೇನೆ; ಈ ದೇಶದ ಅವಧಿಯೂ ಸಮೀಪಿಸುತ್ತಿದೆ. ನೋಹಾ ಪ್ರವಾದಿಯ ಕಾಲವು ನಿಮ್ಮ ಕಣ್ಣ ಮುಂದೆ ಬರಲಿದೆ. ಲೂತ್ ಪ್ರವಾದಿಯ ಕಾಲದಲ್ಲಿ ಸಡೋಮ್ ಗಮೋರಾಗಳಲ್ಲಿ ಸಂಭವಿಸಿದ್ದನ್ನು ನಿಮ್ಮ ಸ್ವಂತ ಕಣ್ಣುಗಳಲ್ಲಿ ಕಾಣುವಿರಿ. ಆದರೆ, ಪರಮಾತ್ಮನು ಕೋಪಾಗ್ನಿಯನ್ನು ಸುರಿಸುವುದರಲ್ಲಿ ನಿಧಾನಿಯಾಗಿರುವನು. ಆದುದರಿಂದ ನಿಮ್ಮ ಮೇಲೆ ಅವನ ದಯಾದೃಷ್ಟಿಯು ಬೀರುವಂತಾಗಲು ಪಶ್ಚಾತ್ತಾಪ ಪಡಿರಿ. ಯಾವನು ದೇವರನ್ನು ಮರೆತು ಬಿಡುವನೋ ಅವನು ಮನುಷ್ಯನಲ್ಲ; ಕೀಟಕ್ಕೆ ಸಮಾನನು. ದೇವರನ್ನು ಯಾರು ಹೆದರುವುದಿಲ್ಲವೋ ಅವನು ಮೃತಸಮಾನನು; ಜೀವವಿರುವವನಲ್ಲ. (ಹಕೀಕತುಲ್‌ವಹ್ಯ್ 1907. ಪುಟ 256_257)

ಹೃದಯದಲ್ಲಿ ದೈವಭಯವಿರುವ ಬಾಂಧವರೇ, ಮೇಲಿನ ದೀರ್ಘ ದರ್ಶನಗಳ ಕುರಿತು ತುಸು ಚಿಂತಿಸಿ **ನೋಡಿರಿ.** ಅವುಗಳಲ್ಲಿ ಜಪಾನ್, ಬಿಹಾರ್ ಮತ್ತು ಕ್ವೆಟ್ಟಾ ಭೂಕಂಪಗಳ ಕುರಿತು ಯಾವರೀತಿ ಮುನ್ನೆಚ್ಚರಿಕೆಯೀಯಲ್ಪಟ್ಟಿರುವುದೆಂದು ತಿಳಿಯಿರಿ. ಮಾತ್ರವಲ್ಲ ಲೋಕವನ್ನು ಅಡಿಮೇಲೂ ಮಾಡಿದ ಇನ್ನೂ ಹಲವಾರು ಘಟನೆಗಳ ಕುರಿತು ದೀರ್ಘದರ್ಶನಗಳು ಇದರಲ್ಲಿ ಅಡಕವಾಗಿವೆ. ಮೇಲಿನ ದೀರ್ಘದರ್ಶನಗಳನ್ನು ಓದುವ ಮತ್ತು ಈ ಕಾಲದಲ್ಲಿ ಸಂಭವಿಸುತ್ತಿರುವ ದುರ್ಘಟನೆಗಳ ಕುರಿತು ಪರ್ಯಾಲೋಚಿಸುವ ಒಬ್ಬ ವ್ಯಕ್ತಿಗೆ ಹಝ್ರತ್ ಅಹ್ಮದ್‌ರವರ ಸತ್ಯತೆಯನ್ನು ಕಂಡುಕೊಳ್ಳಲು ಪ್ರಯಾಸವಿರಲಾರದು. ಈರೀತಿಯ ದುರ್ಘಟನೆಗಳು ಮೇಲಿಂದ ಮೇಲೆ ಸಂಭವಿಸಲಿರುವುದೆಂದೂ, ಕ್ರಮಾತೀತವಾದ ಈ ಮಹಾ ವಿಪತ್ತುಗಳು ಪರಮಾತ್ಮನೆಡೆಗೆ ಸರ್ವಮಾನವ ಹೃದಯಗಳೂ ತಿರುಗುವ ವರೆಗೂ ಮುಂದುವರಿಯಲಿದೆಯೆಂದೂ ಅವನು ತನ್ನ ದೂತನಿಗೆ ತಿಳಿಸಿರುವನು. ಕೊನೆಗೆ ಈ ಯುಗದ ಪ್ರವಾದಿಯನ್ನು ಸರ್ವರೂ ಅಂಗೀಕರಿಸುವಂತಾಗುವುದು.

ಪ್ರಸ್ತುತ ಪಾಕಿಸ್ತಾನದಲ್ಲಿ ಸಂಭವಿಸಿದ ಭೂಕಂಪಕ್ಕೆ ಇನ್ನೊಂದು ಹಿನ್ನೆಲೆ ಕೂಡಾ ಇದೆ. ಪಾಕಿಸ್ತಾನದಲ್ಲಿ ಅಹ್ಮದಿಯರ ಪೂರ್ಣ ಬೆಂಬಲದೊಂದಿಗೆ ಅಧಿಕಾರಕ್ಕೇರಿದ ಭುಟ್ಟೋ ಸರಕಾರವು ಅಲ್ಲಿನ ಮತಭ್ರಾಂತರಾದ ಮುಲ್ಲಾಗಳನ್ನು ತೃಪ್ತಿಪಡಿಸಲು ಅಹ್ಮದೀಯರಿಗೆ ಪಾಕಿಸ್ತಾನದಲ್ಲಿ ನರಕವನ್ನು ಸೃಷ್ಟಿಸಿತು. ಅಹ್ಮದೀಯರು ಮುಸ್ಲಿಮರೋ ಅಮುಸ್ಲಿಮರೋ ಎಂಬ ಪ್ರಶ್ನೆಯು ಇಲ್ಲಿ ಪ್ರಸಕ್ತವಲ್ಲ. ಕಾರಣ, ಅಹ್ಮದಿಯರ ಮತದ ಕುರಿತು ತೀರ್ಮಾನಿಸಬೇಕಾದುದು ಭುಟ್ಟೋ ಸರಕಾರವೋ ಪಾಕಿಸ್ತಾನದ ಮುಲ್ಲಾಗಳೋ ಅಲ್ಲ. ಅಹ್ಮದೀಯರ ಮತ ಯಾವುದೆಂದು ತೀರ್ಮಾನಿಸಬೇಕಾದುದು

ಅಹ್ಮದೀಯರೇ ಆಗಿದೆ. ಆದರೂ ಮುಸ್ಲೀಮೇತರ ಪ್ರಜೆಗಳನ್ನು ಕೊಂದು ತೀರಿಸಬೇಕೆಂದೂ, ಅವರ ಸೊತ್ತುಗಳನ್ನು ಅನ್ಯಾಯವಾಗಿ ಅಪಹರಿಸಬೇಕೆಂದೂ ಇಸ್ಲಾಂ ಮತವು ಕಲಿಸುವುದಿಲ್ಲ. ಪಾಕಿಸ್ಥಾನದಲ್ಲಿ ಬಹುಸಂಖ್ಯಾತರ ನೀಚವಾದ ಆಕ್ರಮಣಕ್ಕೆ ಗುರಿಯಾದ ಅಹ್ಮದಿಯರು ತಮ್ಮ ಪ್ರಿಯ ಇಮಾಂರವರ ಆಜ್ಞೆ ಪ್ರಕಾರ ಸಂಪೂರ್ಣ ಸಹನೆಯನ್ನು ಕೈಗೊಂಡರು. ಅತಿ ಭಯಂಕರವಾದ ಮರ್ಧನಕ್ಕೆ ಗುರಿಯಾದ ಅಹ್ಮದಿಯರನ್ನು ದೇವರೊಡನೆ ಪ್ರಾರ್ಥಿಸಲು ಮಾತ್ರವೇ ಅವರ ಇಮಾಂ ನಿರ್ದೇಶಿಸಿದರು. ಕಳೆದ ಡಿಸೆಂಬರ್ 26, 27, 28ರಂದು ರಬ್ವಾದಲ್ಲಿ ನಡೆದ ಒಂದುವರೆ ಲಕ್ಷ ಜನರು ಭಾಗವಹಿಸಿದ ಅಂತರ್ದೇಶೀಯ ಅಹ್ಮದಿಯಾ ಸಮ್ಮೇಳನದ ಕೊನೆಯ ದಿನದಂದು ಹಝ್ರತ್ ಖಲೀಫರವರ ನೇತೃತ್ವದಲ್ಲಿ ನಡೆದ ಭಕ್ತಿ ನಿರ್ಭರವಾದ ಪ್ರಾರ್ಥನೆಯಲ್ಲಿ ಲಕ್ಷಾಂತರ ಅಹ್ಮದಿಯರ ದುಃಖನಿರ್ಭರಿತ ಕಣ್ಣೀರು ಸುರಿಯುವಂತಾಯಿತು. ಅಹ್ಮದಿಯರ ನಡುಗುವ ಹೃದಯವು ಅಟ್ಟಹಾಸದಿಂದ ದೈವ ಸಹಾಯವನ್ನು ಯಾಚಿಸಿತು. "ಆಕ್ರಮಕ್ಕೆ ಗುರಿಯಾದವನ ಪ್ರಾರ್ಥನೆಯು ದೇವರ ಆಸನವನ್ನೇ ನಡುಗಿಸುವುದು" ಎಂಬ ಪವಿತ್ರ ಪ್ರವಾದಿಯವರ ವಚನದಂತೆ ಅಹ್ಮದಿಯರ ದಯನೀಯವಾದ ಪ್ರಾರ್ಥನೆಯ ಕೂಗು ದೇವರ ಆಸನವನ್ನು ನಡುಗಿಸಿದಾಗ ಸರ್ವಶಕ್ತನಾದ ಆ ಪರಮಾತ್ಮನು ಭೂಮಿಯನ್ನೊಮ್ಮೆ ನಡುಗಿಸಿದನು. 90 ವರ್ಷಗಳ ಪ್ರಶ್ನೆಯನ್ನು 90 ದಿವಸಗಳಲ್ಲಿ ಪರಿಹರಿಸಿದೆನೆಂದು ಅಭಿಮಾನಗೊಂಡ ಭುಟ್ಟೋರ ರಾಜ್ಯದಲ್ಲಿ 90 ದಶವರ್ಷಗಳ ಪರಿಶ್ರಮ ಫಲವನ್ನು ನಾಶಮಾಡುವಂತಹ ಮಹಾ ವಿಪತ್ತನ್ನು 90 ನಿಮಿಷಗಳಲ್ಲಿ ಆ ಪರಮಾತ್ಮನು ತಂದೊಡ್ಡಿದನು.

ಪ್ರಿಯರೇ, ದೈವೀಕವಾದ ಈ ಅದ್ಭುತ ದೃಷ್ಟಾಂತವು ನಿಮ್ಮ ಹೃದಯಗಳಲ್ಲಿ ದೈವ ಭಯವನ್ನುಂಟು ಮಾಡಲು ಪರ್ಯಾಪ್ತವಲ್ಲವೇ. ಒಬ್ಬ ಕಳ್ಳಪ್ರವಾದಿಯ ದೀರ್ಘದರ್ಶನಗಳು ಈರೀತಿ ಪೂರ್ತಿಯಾಗುವುದೇ? ಹಝ್ರತ್ ಅಹ್ಮದ್‌ರವರು ಸತ್ಯವಾದಿಯಾಗಿರುವರೆಂದೂ ನಿಜವಾಗಿಯೂ ಅವರು ದೈವನಿಯುಕ್ತರೆಂದೂ ಇದರಿಂದ ವ್ಯಕ್ತವಾಗುತ್ತದೆ. ಆದರೆ ಪ್ರವಾದಿಗಳಿಗಾಗಿ ಪರಮಾತ್ಮನು ತೋರಿಸಿಕೊಡುವ ದೃಷ್ಟಾಂತಗಳನ್ನು ಕಡೆಗಣಿಸಿ ಅವಿಶ್ವಾಸದಲ್ಲಿ ದೃಢಚಿತ್ತರಾಗುವವರು ಭಾಗ್ಯಹೀನರು. ದೇವರ ಮಾತನ್ನು ಆಲಿಸಿ ಅವನಡೆ ಶ್ರದ್ಧಿಸುತ್ತಾ ಅವನ ಪ್ರವಾದಿಯ ಕರೆಗೆ ಓಗೊಡುವವರೋ ಅನುಗ್ರಹೀತರು.

ಸರ್ವಶಕ್ತನಾದ ಪರಮಾತ್ಮಾ, ನೀನು ಜನರ ಹೃದಯಗಳನ್ನು ತೆರೆದುಕೊಡು. ಅವರು ಹಿಂದುಗಳೋ, ಸಿಖ್ಖರೋ, ಕ್ರೈಸ್ತರೋ, ಮುಸ್ಲಿಮರೋ ಯಾರಾದರೂ ಸರಿ, ಅವರು ಸತ್ಯವನ್ನು ಸ್ವೀಕರಿಸಿ ಯಥಾರ್ಥವಾದ ಇಸ್ಲಾಂ ಮತವನ್ನು ಅಂತರಿಕವಾಗಿಯೂ ಬಾಹ್ಯವಾಗಿಯೂ ಪೂರ್ಣವಾಗಿ ಅಂಗೀಕರಿಸುತ್ತಾ ನಿನ್ನ ಅನುಗ್ರಹಾಶೀರ್ವಾದಗಳಿಗೆ ಪಾತ್ರರಾಗಿ ನಿನ್ನ ಪವಿತ್ರ ಮುಖವನ್ನು ದರ್ಶಿಸುವಂತಾಗಲೀ — ಆಮೀನ್.


ಬೇಗನೇ ಪ್ರಕಾಶನಗೊಳ್ಳಲಿವೆ.

## ಮೈತ್ರಿ ಸಂದೇಶ

ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್.
ಅನುವಾದಕ: **ಮುಹಮ್ಮದ್ ಯೂಸುಫ್**, B. Com.,

## ಅಹ್ಮದಿಯಾ ಸಂದೇಶ

ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹಮೂದ್ ಅಹ್ಮದ್.
ಅನುವಾದಕ: ಎಂ ಪಿ ಇಬ್ರಾಹಿಮ್.

**READ**

# MINARET

## AN ENGLISH QUARTERLY JOURNAL.

Publishers:

**ANJUMAN AHMADIYYA, CALICUT.**

**Annual Subscription Rs. 4/-**

APPLY TO:—

The Manager,
**MINARET Quarterly,**
**Ahmadiyya Building,**
**West Silk Street,**
**CALICUT-1.**

## ಕನ್ನಡ ಭಾಷೆಯಲ್ಲಿ ಅಹ್ಮದಿಯಾ ಪ್ರಕಟಣೆಗಳು

1. ಇಸ್ಲಾಮಿ ತತ್ವಜ್ಞಾನ ಪ್ರಕಾಶ.
2. ಅಹ್ಮದಿಯಾ ಸಂದೇಶ.
3. ಇದು ಈಮಾನಿಗೆ ಅರ್ಹವಲ್ಲವೋ ?
4. ಒಂದು ಸುಸಂದೇಶ.
5. ನಾನೇಕ ಇಸ್ಲಾಮ್ ಧರ್ಮದಲ್ಲಿ ವಿಶ್ವಾಸವುಳ್ಳವನಾಗಿದ್ದೇನೆ.
6. ಶಾಂತಿ ಸಂದೇಶವೂ ಮುನ್ನೆಚ್ಚರಿಕೆಯೂ.
7. ಪವಿತ್ರ ಖುರ್‌ಆನ್ ಹಾಗೂ ಹಝ್‌ರತ್ ಈಸಾನಬಿ (ಅ.)ಯ ಜೀವಿತ ಮತ್ತು ಮರಣ.
8. ಅಹ್ಮದಿಯಾ ಜಮಾಅತ್
9. ಅಹ್ಮದಿಯಾ ಸಂಘಟನೆ.

ಪುಸ್ತಕ ವಿಭಾಗ

# ಯೇಸು ಕ್ರಿಸ್ತರು ಮೃತರಾದುದು ಎಲ್ಲಿ?

★

ಲೇಖಕ:

ಮೌಲಾನ ಜಲಾಲುದ್ದೀನ್ ಶಮ್ಸ್ ಸಾಹಿಬ್

★

ಭಾಷಾಂತರಕಾರ:

ಅಬೂ ತಾಹಿರ್

# ಮುನ್ನುಡಿ

ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಝ್‌ರತ್ ಮಿರ್ಝಾ ಗುಲಾಮ್ ಅಹ್ಮದ್‌ರವರು ಯೇಸು ಕ್ರಿಸ್ತರ ರಹಸ್ಯ ಜೀವನದ ಕುರಿತು 1899ನೇ ಇಸವಿಯಲ್ಲಿ "ಮಸೀಹ್ ಹಿಂದುಸ್ಥಾನ್‌ಮೇ" ಎಂಬ ಗ್ರಂಥವನ್ನು ಆಗಿನ ಕಾಲದ ವರೆಗೆ ಲಭ್ಯವಾಗಿದ್ದ ಸಾಕ್ಷ್ಯಾಧಾರಗಳನ್ನು ಕ್ರೋಢಿಕರಿಸಿ ಬರೆದರು. ಅವರ ಈ ಗ್ರಂಥ ಕ್ರೈಸ್ತ ಧರ್ಮದ ಬುನಾದಿಯನ್ನು ಅಲುಗಾಡಿಸಿತು. ಆಧುನಿಕ ಕ್ರೈಸ್ತ ಧರ್ಮವು ಯೇಸು ಕ್ರಿಸ್ತರ ಶಿಲುಬೆಯ ಮರಣ ಮತ್ತು ಅದರ ಮೂಲಕ ಮಾನವರ ಪಾಪ ಪರಿಹಾರ ಸಿದ್ಧಾಂತದ ಮೇಲೆ ನೆಲೆಗೊಂಡಿದೆ. ಯೇಸು ಕ್ರಿಸ್ತರು ಶಿಲುಬೆಯಲ್ಲಿ ಮರಣ ಹೊಂದಿಲ್ಲವಾದರೆ ಕ್ರೈಸ್ತ ಧರ್ಮವು ಅದರ ಆಧಾರ ಸ್ತಂಭವನ್ನೇ ಕಳೆದುಕೊಂಡಂತಾಗುವುದು.

ನಾನು ಭಾಷಾಂತರಿಸಿರುವ ಈ ಗ್ರಂಥವನ್ನು ರಚಿಸಿದವರು ಆಹ್ಮದಿಯಾ ಸಂಘಟನೆಯ ಸೇವಕರಾಗಿದ್ದು ಅಹ್ಮದಿಯಾ ತತ್ವಗಳನ್ನು ದೀರ್ಘಕಾಲ ಇಂಗ್ಲೆಂಡಿನಲ್ಲಿ ಪ್ರಚಾರಗೊಳಿಸುತ್ತಾ ಲಂಡನ್ ಮಸೀದಿಯ ಇಮಾಮರಾಗಿದ್ದವರಾಗಿದ್ದಾರೆ. ಈ ಗ್ರಂಥವು **1945**ನೇ ಇಸವಿಯಲ್ಲಿ ವಿರಚಿತವಾಗಿ ಲಂಡನ್ ನಗರ ಮತ್ತು ಪರಿಸರಗಳಲ್ಲಿ ಬಹಳ ಅಲ್ಲೋಲ ಕಲ್ಲೋಲವನ್ನುಂಟುಮಾಡಿತು. ಹಲವಾರು ಜನರು ಈ ಗ್ರಂಥದ ಮೂಲಕ ಯೇಸು ಕ್ರಿಸ್ತರ ಯಥಾರ್ಥ ಜೀವನದ ಕುರಿತು ಸರಿಯಾಗಿ ತಿಳಿಯಲು ಶಕ್ತರಾದರು.

ಯೇಸು ಕ್ರಿಸ್ತರು ಶಿಲುಬೆಯಿಂದ ರಕ್ಷಿತರಾಗಿ ಭಾರತಕ್ಕೆ ಪ್ರವಾಸ ಗೈದುದರ ಕುರಿತು ಇತ್ತೀಚೆಗೆ ಹಲವಾರು ಭಾರತೀಯ ಪತ್ರಿಕೆಗಳಲ್ಲಿ ಲೇಖನಗಳು ಬಂದಿದ್ದು ಜನರ ಕುತೂಹಲವನ್ನು ಕೆರಳಿಸಿವೆ. ಈ ಸಂದರ್ಭದಲ್ಲಿ ಈ ಗ್ರಂಥದ ಭಾಷಾಂತರವನ್ನು ಪ್ರಕಟಿಸುವುದು ಸಮಯೋಚಿತವೆಂದು ಗ್ರಹಿಸುತ್ತೇವೆ.

**—ಅನುವಾದಕ.**

# ಲೇಖಕರ ನುಡಿ

ಈ ಪುಸ್ತಕದಲ್ಲಿ ನಾನು ವಿವರಿಸಲು ಉದ್ದೇಶಿಸಿರುವ ವಿಷಯ ಬಹಳ ಪ್ರಾಮುಖ್ಯವಾದುದಾಗಿದೆ. ಇದು ಮೂರು ಪ್ರಧಾನ ಮತಧರ್ಮಗಳಾದ ಯಹೂದಿ ಮತ, ಕ್ರೈಸ್ತ ಮತ ಮತ್ತು ಇಸ್ಲಾಮ್ ಮತ ವಿಶ್ವಾಸಗಳೊಂದಿಗೆ ನಿಕಟ ಸಂಬಂಧವನ್ನು ಹೊಂದಿಕೊಂಡಿದೆ.

ಯೇಸು ಕ್ರಿಸ್ತರನ್ನು ಶಿಲುಬೆಗೇರಿಸಿ, ಶಪಿಸಲ್ಪಟ್ಟಿರುವ ಮರಣಕ್ಕೆ ಅವರನ್ನು ಗುರಿಪಡಿಸಿ ತಮ್ಮಲ್ಲಿ ಸಾರ್ವತ್ರಿಕವಾಗಿ ಪ್ರಚಾರದಲ್ಲಿರುವ ವಿಶ್ವಾಸಗಳ ಪ್ರಕಾರ ಯೇಸು ಕ್ರಿಸ್ತರನ್ನು ಕಳ್ಳಪ್ರವಾದಿಯೆಂದು ರುಜುಪಡಿಸಿರುವುದಾಗಿ ಯಹೂದಿಗಳು ನಂಬುತ್ತಾರೆ.

ಯಹೂದಿಗಳು ಯೇಸು ಕ್ರಿಸ್ತರನ್ನು ಶಪಿಸಲ್ಪಟ್ಟ ಮರಣಕ್ಕೆ ಗುರಿಪಡಿಸಿದರೆಂಬ ಸಂಗತಿಯನ್ನು ಕ್ರೈಸ್ತಮತಸ್ಥರು ನಂಬುತ್ತಾರೆ. ಆದರೆ ಇದು ಸಂಭವಿಸಿದುದು ಮಾನವರ ಸಂರಕ್ಷಣೆಗಾಗಿ ಎಂದು ಅವರು ದೃಢವಿಶ್ವಾಸದಿಂದಿದ್ದಾರೆ. ಸಂತ ಪೌಲರು ಈ ರೀತಿ ಹೇಳುತ್ತಾರೆ:

"ಕ್ರಿಸ್ತನು ನಮ್ಮ ನಿಮಿತ್ತ ಶಾಪವಾಗಿ ಧರ್ಮಶಾಸ್ತ್ರದಲ್ಲಿ ಹೇಳಿರುವ ಶಾಪದೊಳಗಿಂದ ನಮ್ಮನ್ನು ಬಿಡಿಸಿದನು. ಮರಕ್ಕೆ ತೂಗಹಾಕಲ್ಪಟ್ಟ ಪ್ರತಿಯೊಬ್ಬನು ಶಾಪಗ್ರಸ್ತನು ಎಂದು ಶಾಸ್ತ್ರದಲ್ಲಿ ಬರೆದಿದೆಯಲ್ಲಾ" (ಗಲಾತ್ಯದವರಿಗೆ 3–14)

ಸಂತ ಪೌಲರು ನಿವೇದಿಸಿದ ಶಾಸ್ತ್ರ ವಚನವು ಹಳೆ ಒಡಂಬಡಿಕೆ ಧರ್ಮೋಪದೇಶಕಾಂಡ (21:23)ದಲ್ಲಿ ಈ ರೀತಿ ಇದೆ: "ಮರಣಕ್ಕೆ ತೂಗಹಾಕಲ್ಪಟ್ಟವನು ದೇವರ ಶಾಪವನ್ನು ಹೊಂದಿದವನಲ್ಲವೇ". ಯೇಸು ಕ್ರಿಸ್ತರು ಶಿಲುಬೆಯಲ್ಲಿ ಮರಣಹೊಂದಿ ಅನಂತರ ಪುನರುತ್ಥಾನ ಹೊಂದಿರುವುದು ಕ್ರೈಸ್ತ ಧರ್ಮದ ಮೂಲಾಧಾರವೆಂದು ಸಂತ ಪೌಲರು ಕೊರಿಂಥದವರಿಗೆ ಬರೆದ ಪ್ರಥಮ-ಪತ್ರದಲ್ಲಿ ಈ ರೀತಿ ವಿವರಿಸಿರುವರು: "ಕ್ರಿಸ್ತನು ಎದ್ದು ಬರಲಿಲ್ಲವಾದರೆ ನಮ್ಮ ಪ್ರಸಂಗವು ಹುರುಳಿಲ್ಲದ್ದು, ಮತ್ತು ನಿಮ್ಮ ನಂಬಿಕೆಯೂ ಹುರುಳಿಲ್ಲದ್ದು." (ಕೊರಿಂಥದವರಿಗೆ 15 14)

ಈ ಮೇಲಿನ ವಿಶ್ವಾಸಗಳಿಗೆ ವ್ಯತಿರಿಕ್ತವಾಗಿ ಯೇಸು ಕ್ರಿಸ್ತರು ಇಸ್ರಾಯಿಲ್ ಗೋತ್ರದ ಕಳೆದು ಹೋದ ಕುರಿಗಳ ಮಾರ್ಗದರ್ಶನಕ್ಕಾಗಿ ಕಳುಹಿಸಲ್ಪಟ್ಟ ದೂತರೆಂದೂ, ಅವರಿಗೆ ಅವರ ವಿರೋಧಿಗಳು ಏರ್ಪಡಿಸಿದ ಶಾಪಗ್ರಸ್ತ ಮರಣದಿಂದ ಅವರನ್ನು ದೇವರು ರಕ್ಷಿಸಿದನೆಂದೂ ಇತರ ದೈವನಿಯುಕ್ತ ಪ್ರವಾದಿಗಳನ್ನು ಮರಣಗೊಳಿಸುವ ರೀತಿಯಲ್ಲಿ ದೇವರು ಮರಣಪಡಿಸಿದನೆಂದೂ ಪವಿತ್ರ ಖುರ್ ಆನ್‌ನಲ್ಲಿ ದೇವರು ವ್ಯಕ್ತಗೊಳಿಸಿರುವನು.

ಯೇಸು ಕ್ರಿಸ್ತರು ಶಿಲುಬೆಯಲ್ಲಿ ಮರಣಗೊಂಡಿಲ್ಲವೆಂದೂ ಅವರನ್ನು ಮೂರ್ಛಿತಾವಸ್ಥೆಯಲ್ಲಿ ಶಿಲುಬೆಯಿಂದ ಇಳಿಸಲಾಯಿತೆಂದೂ ಅನಂತರ ದೀರ್ಘಕಾಲ ಜೀವಿಸಿ ತನ್ನ ಆಗಮನೋದ್ದೇಶವನ್ನು ಪೂರ್ತಿಗೊಳಿಸಿ ಸ್ವಾಭಾವಿಕವಾದ ಮರಣವನ್ನು ಪ್ರಾಪ್ತಿಸಿದರೆಂದೂ ನಾವು ಸ್ಪಷ್ಟಪಡಿಸಲು ಶಕ್ತರಾದರೆ ಯಹೂದಿಗಳೂ ಕ್ರೈಸ್ತರೂ ತಮ್ಮ ಪ್ರಧಾನ ಧಾರ್ಮಿಕ ನಂಬಿಕೆಗಳ ಕುರಿತು ತಪ್ಪು ಅಭಿಪ್ರಾಯಗಳನ್ನು ಹೊಂದಿರುವರೆಂದು ಸಹ ವ್ಯಕ್ತಪಡಿಸಿದಂತಾಗುವುದು. ಯೇಸು ಕ್ರಿಸ್ತರ ಶಾಪಗ್ರಸ್ತ ಮರಣದ ಆಧಾರದ ಮೇಲೆ ಸ್ಥಾಪಿತವಾದ ಈಗಿನ ಕ್ರೈಸ್ತ ಧರ್ಮವು ಸಹ ಮೇಲಿನ ಸಿದ್ಧಾಂತವು ಸತ್ಯವೆಂದು ವ್ಯಕ್ತವಾದರೆ ಕೂಡಲೇ ಅವನತಿಯತ್ತ ಸಾಗುವುದೆಂದು ಹೇಳಿದರೆ ಅದು ಅತಿಶಯೋಕ್ತಿಯಾಗಲಾರದು.

ಯೇಸು ಕ್ರಿಸ್ತರು ಶಿಲುಬೆಯಲ್ಲಿ ಮರಣ ಹೊಂದಲಿಲ್ಲವೆಂದು ಸ್ಥಾಪಿಸಲಿಕ್ಕಾಗಿ ಬೈಬಲಿನ ಸುವಾರ್ತೆಗಳನ್ನು ಆಧಾರವಾಗಿ ಉಪಯೋಗಿಸುವ ಮೊದಲು ಈ ಕೆಳಗಿನ ವಿಷಯಗಳನ್ನು ಗಮನದಲ್ಲಿರಿಸಬೇಕು:—

1. ಯೇಸು ಕ್ರಿಸ್ತರು ಜೀವಿಸಿದ್ದರೆಂದು ಹೇಳಲಾಗುವ ಸಮಯದಿಂದ ಮುನ್ನೂರ ಐವತ್ತು ವರ್ಷಗಳ ನಂತರ ನೀಸ್ ಮತ್ತು ಲಾವೋಡೀಸಿಯಾ ನಗರಗಳಲ್ಲಿ ಸೇರಿದ ಧಾರ್ಮಿಕ ಸಭೆಗಳಲ್ಲಿ ಈಗಿನ ಬೈಬಲಿನ ಹೊಸ ಒಡಂಬಡಿಕೆಯು ಓಟುಗಳ ಮೂಲಕ (ಈಗಿನ ಕಾನೂನುಗಳು ಪಾಸಾಗುವ ರೀತಿಯಲ್ಲಿ) ಸ್ವೀಕೃತವಾಯಿತು.

ಹೊಸ ಒಡಂಬಡಿಕೆಯ ಹಲವಾರು ಕರಡು ಪ್ರತಿಗಳು ಓಟುಗಳು ಕಮ್ಮಿ ದೊರಕಿದ ಕಾರಣ ರದ್ದುಗೊಳಿಸಲ್ಪಟ್ಟುವು. ಈ ಸಂಗತಿ ತೋಮಸ್ ಪೈನ್ "ದಿ ಏಜ್ ಓಫ್ ರೀಸನ್" ಎಂಬ ತನ್ನ ಗ್ರಂಥದಲ್ಲಿ ವಿವರಿಸಿರುವರು. "ಯಾವ ಪುಸ್ತಕ 'ದೈವ ವಾಣಿ'ಯೆಂದು ಸ್ವೀಕೃತವಾಗಬೇಕೆಂಬುದನ್ನು ಅವರು ಓಟಿನ ಮೂಲಕ ನಿರ್ಧರಿಸಿದರು. ಅವರು ಹಲವು ಗ್ರಂಥಗಳನ್ನು ತಿರಸ್ಕರಿಸಿದರು. ಕೆಲವು ಗ್ರಂಥಗಳು ಸಂಶಯಾಸ್ಪದವೆಂದು ತೀರ್ಮಾನಿಸಿದರು. ಅತ್ಯಧಿಕ ಓಟು ಗಳಿಸಿದ ಗ್ರಂಥಗಳು "ದೈವ ವಾಣಿ" ಎಂದು ತೀರ್ಮಾನಿತವಾದುವು ಆ ರೀತಿ ತೀರ್ಮಾನವಾಗದಿರುತ್ತಿದ್ದರೆ ಕ್ರೈಸ್ತರೆಲ್ಲರೂ ವಿರುದ್ಧಾಭಿಪ್ರಾಯಗಳನ್ನು ಹೊಂದುತ್ತಿದ್ದರು. ಏಕೆಂದರೆ ಒಬ್ಬನ ವಿಶ್ವಾಸ ಇನ್ನೊಬ್ಬನ ಓಟಿನಿಂದ ಜನಿಸಲ್ಪಟ್ಟುದಾಗಿದೆ."

2. ಬೈಬಲಿನ ಸುವಾರ್ತೆಗಳು "ದೈವ ವಾಣಿ" ಯಲ್ಲ. ಸುವಾರ್ತೆಗಳ ಲೇಖಕರು ಆ ರೀತಿ ಹೇಳಿಯೂ ಇಲ್ಲ.

3. ಶಿಲುಬೆಯ ಸಂಭವ ನಡೆದು ಎಷ್ಟೋ ವರ್ಷಗಳ ನಂತರ ಅವುಗಳು ವಿರಚಿತವಾದುವು. ಆ ಸಮಯದಲ್ಲಿ ಸರಿಯಾದ ಸಾಕ್ಷ್ಯ ಸಂಗ್ರಹವು ಸಾಧ್ಯವಿರಲಿಲ್ಲ.

4. ನಾಲ್ಕು ಸುವಾರ್ತೆಗಳಲ್ಲಿರುವ ಸ್ವಯಂ ವಿರುದ್ಧ ಮತ್ತು ಪರಸ್ಪರ ವಿರುದ್ಧ ನಿರೂಪಣೆಗಳು ಅವುಗಳು ಸಂಶಯಾಸ್ಪದವಿದ್ದು ಸತ್ಯವಾಗಿರಲೂಬಹುದು ಸತ್ಯವಾಗದಿರಲೂಬಹುದೆಂಬ ಸಂಶಯಕ್ಕೆ ಎಡೆಕೊಡುತ್ತವೆ.

5. ನಾಲ್ಕನೆಯ ಸುವಾರ್ತೆಯನ್ನು ಬರೆದ ಯೋಹಾನನು ಯೇಸು ಕ್ರಿಸ್ತರ ಅಪೋಸ್ತಲನಾಗಿರಲಿಲ್ಲವೆಂದು ಆಧುನಿಕ ಸಂಶೋಧಕರು ಕಂಡುಹಿಡಿದ್ದಾರೆ. ಆ ಸುವಾರ್ತೆಯ ಕೊನೆಯ ಅಧ್ಯಾಯದ 24ನೇ ವಚನ ಈ ಸಂಗತಿಯನ್ನು ವ್ಯಕ್ತಗೊಳಿಸುತ್ತದೆ. ಇದೇ ರೀತಿ ಮತ್ತಾಯನ ಸುವಾರ್ತೆಯ ಹೀಬ್ರೂ ಮೂಲ ಪ್ರತಿಯು ಕಳೆದು ಹೋಗಿದ್ದು ಈಗಿನ ಭಾಷಾಂತರದ ಕರ್ತೃವು ಅಜ್ಞಾತ ವ್ಯಕ್ತಿಯಾಗಿರುವನು. ಬೇರೆ ಎರಡು ಸುವಾರ್ತೆಗಳನ್ನು ಬರೆದ ಮಾರ್ಕ ಮತ್ತು ಲೂಕ ಎಂಬ ಇಬ್ಬರು ಸಹ ಯೇಸು ಕ್ರಿಸ್ತರ ಅಪೋಸ್ತಲರಾಗಿರಲಿಲ್ಲ.

6. ಒಂದು ಚಾರಿತ್ರಿಕ ಗ್ರಂಥವು ಅದರ ಲೇಖಕನ ಸ್ವಂತ ನಂಬಿಕೆ ಮತ್ತು ಮಾನಸಿಕ ಸ್ಥಿತಿಯಿಂದ ಪ್ರಭಾವಿತವಾಗಿರುವುದು ನಿಸ್ಸಂಶಯವಾಗಿದೆ.

7. ವಂಶಾವಳಿ, ಶಿಲುಬೆಗೇರಿಸುವಿಕೆ, ಪುನರುತ್ಥಾನ ಮೊದಲಾದ ಸುವಾರ್ತೆಗಳ ಚಾರಿತ್ರಿಕ ಸಂಗತಿಗಳನ್ನು ಇತರ ಚಾರಿತ್ರಿಕ ಗ್ರಂಥಗಳ ವಿವರಣೆಗಳನ್ನು ಯಾವ ದೃಷ್ಟಿಯಿಂದ ವೀಕ್ಷಿಸುತ್ತೇವೋ ಅದೇ ದೃಷ್ಟಿಯಿಂದ ವೀಕ್ಷಿಸಬೇಕು. ಸಮಾನವಾದ ಸಾಕ್ಷ್ಯಗಳನ್ನು ಕೇಳಬೇಕು. ಹಿಂದಿನ ಸಂಭವಗಳನ್ನು ಪರಿಶೋಧಿಸುವಾಗ ಸಾಕ್ಷ್ಯಗಳನ್ನು ಜಾಗರೂಕತೆಯಿಂದ ಪರಿಶೀಲಿಸಿ ನಂಬಿಕೆಗೆ ಯೋಗ್ಯವಾದುವು ಯಾವುವು ಎಂಬುದನ್ನು ಕಂಡು ಹಿಡಿದು ಸ್ವೀಕರಿಸಬೇಕು.

8. ಸುವಾರ್ತೆಗಳು ಬರೆಯಲ್ಪಟ್ಟಾಗ ಕ್ರೈಸ್ತರ ಸಾಮಾನ್ಯವಾಗಿ ಎಲ್ಲಾ ಪಂಗಡಗಳವರು ಯೇಸುಕ್ರಿಸ್ತರ ಶಿಲುಬೆಯ ಮರಣದಲ್ಲಿ ವಿಶ್ವಾಸ ಹೊಂದಿದವರಾಗಿದ್ದರು. ಈ ವಿಶ್ವಾಸಕ್ಕೆ ವ್ಯತಿರಿಕ್ತವಾಗಿ ಕೆಲವು ಸಂಗತಿಗಳು ಸುವಾರ್ತೆಗಳಲ್ಲಿ ಕಂಡು ಬರುತ್ತವೆ. ಇದಕ್ಕೆ ಕಾರಣ ಈ ಸಂಭವಗಳು ಆ ಕಾಲದಲ್ಲಿ ಬಹಳ ಪ್ರಸಿದ್ಧವಾಗಿದ್ದು ಅವುಗಳನ್ನು ಆ ಕಾಲದ ಘಟನೆಗಳ ನಿರೂಪಣೆಯಿಂದ ಬಿಟ್ಟು ಬಿಡಲು ಸುಲಭ ಸಾಧ್ಯವಾಗಿರಲಿಲ್ಲ.

ಈ ಗ್ರಂಥದ ವಿಷಯವು ಬಹಳ ಪ್ರಧಾನವಾಗಿರುವ ಕಾರಣ ಈ ಗ್ರಂಥವನ್ನು ಜಾಗರೂಕತೆಯಿಂದಲೂ ದ್ವೇಷವಿರಹಿತರಾಗಿಯೂ ಪರಿಶೀಲಿಸಿ ಸರಿಯಾದ ತೀರ್ಮಾನ ಕೈಗೊಳ್ಳಬೇಕೆಂದು ಹೃತ್ಪೂರ್ವಕವಾಗಿ ವಾಚಕ ಮಹಾಶಯರನ್ನು ವಿನಂತಿಸುತ್ತೇನೆ.

—ಜಲಾಲುದ್ದೀನ್ ಶಮ್ಸ್.

# ಯೇಸು ಕ್ರಿಸ್ತರು ಮೃತರಾದುದು ಎಲ್ಲಿ?

## ಅಧ್ಯಾಯ – 1.

## ಬೈಬಲಿನ ಸುವಾರ್ತೆಗಳಿಂದ ನಿರೂಪಣೆ

### 1. ಯೇಸು ಕ್ರಿಸ್ತರ ಪ್ರಾರ್ಥನೆ

ಯೇಸು ಕ್ರಿಸ್ತರು ತಾವು ಮೆಸ್ಸಾಯರೆಂದು ಘೋಷಿಸಿದಾಗ ತಮ್ಮ ಆತ್ಮ ರಕ್ಷಣೆಗೆ ಬೇಕಾದ ಎಲ್ಲಾ ಏರ್ಪಾಡು ಮಾಡಿದ್ದರು. ಒಮ್ಮೆ ಅವರು ತನ್ನ ಶಿಷ್ಯರೊಡನೆ ತಾನು ಯೇಸು ಕ್ರಿಸ್ತನೆಂದು ಯಾರೊಡನೆಯೂ ಹೇಳಬಾರದೆಂದು ಆಜ್ಞಾಪಿಸಿದ್ದರು. (ಮತ್ತಾಯ 16:20) ಅವರ ವಿರೋಧಿಗಳು ಅವರ ಕೊಲೆಗೆ ಗೂಢಾಲೋಚನೆ ನಡೆಸಿದಾಗ ಅವರು ಯಹೂದಿಗಳ ಮಧ್ಯೆ ಬಹಿರಂಗವಾಗಿ ಸಂಚರಿಸುವುದನ್ನು ನಿಲ್ಲಿಸಿ ಅಡವಿಯ ಹತ್ತಿರದ ಪ್ರದೇಶಕ್ಕೆ ಹೋಗಿ ವಾಸಿಸಲು ತೊಡಗಿದರು (ಯೋಹಾನ 11–53,54). ಅವರು ಒಮ್ಮೆ ಸಂಪೂರ್ಣವಾಗಿ ಅಡಗಿ ಕುಳಿತಿದ್ದರು (ಯೋಹಾನ 12–36). ತಮ್ಮ ಚಟುವಟಿಕೆಗಳನ್ನು ಬಲಾತ್ಕಾರವಾಗಿ ತಡೆಯಲು ತಮ್ಮ ವಿರೋಧಿಗಳು ಉದ್ದೇಶಿಸಿರುವರೆಂದೂ ಸಾಧ್ಯವಿದ್ದರೆ ಕೊಲೆ ಸಹ ಮಾಡುವರೆಂದೂ ಯೇಸುಕ್ರಿಸ್ತರು ಗ್ರಹಿಸಿದಾಗ ಅವರು ತಮ್ಮ ಶಿಷ್ಯರೊಡನೆ ಒಂದು ಅಜ್ಞಾತ ಸ್ಥಳಕ್ಕೆ ಹೋದರು (ಯೋಹಾನ 18:1, 2). ಆಗ ಅವರಿಗೆ ದೈವ ಜ್ಞಾನದ ಮೂಲಕವೋ ಅಥವಾ ದೃಢ ವಿಶ್ವಾಸವಿಲ್ಲದ ಯಾವನ ಗೈರುಹಾಜರಾತಿಯ ಕಾರಣದಿಂದಲೋ ಆತನು ತಮ್ಮನ್ನು ಮೋಸಗೊಳಿಸಿ ತಮ್ಮ ಸೆರೆಹಿಡಿಯುವಿಕೆಗೆ ಕಾರಣನಾಗುವನೆಂಬ ಸಂಗತಿ ತಿಳಿದಿತ್ತು. ಅವರಿಗೆ ರಕ್ಷಾ ಮಾರ್ಗವೇ ಇರಲಿಲ್ಲ. ವಿರೋಧಿಗಳ ಉಪಾಯಗಳನ್ನು ನಿಷ್ಫಲಗೊಳಿಸಲು ಸಾಧ್ಯವಿರುವ ಏಕಮಾತ್ರ ವಿಧಾನವಾದ ಪ್ರಾರ್ಥನಾ ವಿಧಿಯನ್ನು ಕೈಗೊಂಡು ಸರ್ವಶಕ್ತನಾದ ದೇವರು ತಮ್ಮನ್ನು ಕಾಪಾಡಲಿಕ್ಕಾಗಿ ದೈವ ಸನ್ನಿಧಿಯಲ್ಲಿ ತಮ್ಮ ಅಭಿಲಾಷೆಗಳನ್ನು ನಿವೇದಿಸಿದರು.

ಮತ್ತಾಯ 26, ಮಾರ್ಕ 14 ಮತ್ತು ಲೂಕ 22 ಇವುಗಳ ಆಧಾರದಿಂದ ತಿಳಿಯುವುದೇನೆಂದರೆ ಯೇಸು ಕ್ರಿಸ್ತರು ತಮ್ಮ ಶಿಷ್ಯರೊಂದಿಗೆ ಗೆತ್ಸೇಮನೆ ತೋಟಕ್ಕೆ ಹೋದರು. ಅವರು ತಮ್ಮ ಶಿಷ್ಯರೊಡನೆ ಪ್ರಾರ್ಥಿಸಲು ಹೇಳಿದರೂ ಅವರು ಅದನ್ನು ಕಡೆಗಣಿಸಿ ನಿದ್ರಿಸಿದರು. ಎರಡು ಸರ್ತಿ ಅವರನ್ನು ಎಚ್ಚರಿಸಿದರೂ ನಿಷ್ಫಲವಾಯಿತು. ಯೇಸುಕ್ರಿಸ್ತರು ಬಹಳ ವಿನಯದಿಂದ ಪ್ರಾರ್ಥಿಸಿದರು:— "ಅಪ್ಪಾ, ತಂದೆಯೇ, ನಿನಗೆ ಎಲ್ಲವೂ ಸಾಧ್ಯ; ಈ ಪಾತ್ರೆಯನ್ನು ನನ್ನಿಂದ ತೊಲಗಿಸು; ಆದರೂ ನನ್ನ ಚಿತ್ತದಂತಾಗದೆ ನಿನ್ನ ಚಿತ್ತದಂತೆಯೇ ಆಗಲಿ" (ಮಾರ್ಕ 14:36).

ಈ ರೀತಿ ಅವರು ರಾತ್ರಿಯ ಬಹುಭಾಗವನ್ನು ವಿನಯದಿಂದ ಪ್ರಾರ್ಥಿಸುತ್ತಾ ಕಳೆದರು. ಅವರ ಪ್ರಾರ್ಥನೆಯ ಸ್ವೀಕೃತಿಯ ದ್ಯೋತಕವಾಗಿ ಒಬ್ಬ ದೇವದೂತರು ಪ್ರತ್ಯಕ್ಷರಾದಾಗ ಅವರು ಮತ್ತಷ್ಟು ಹೃದಯಪೂರ್ವಕವಾಗಿ ಪ್ರಾರ್ಥಿಸಿದರು.

"ಅವರು ಮನೋವ್ಯಥೆಯುಳ್ಳವರಾಗಿ ಇನ್ನೂ ಆಸಕ್ತಿಯಿಂದ ಪ್ರಾರ್ಥಿಸುತ್ತಿರಲಾಗಿ ಅವರ ಬೆವರು ಭೂಮಿಗೆ ಬೀಳುತ್ತಿರುವ ರಕ್ತದ ದೊಡ್ಡ ಹನಿಗಳೋಪಾದಿಯಲ್ಲಿತ್ತು'' (ಲೂಕ 22:44).

ಯೇಸುಕ್ರಿಸ್ತರ ಪ್ರಾರ್ಥನೆಯ ಮುಖ್ಯ ಉದ್ದೇಶ ಮರಣದಿಂದ ರಕ್ಷೆಯನ್ನು ಗಳಿಸಲಿಕ್ಕಾಗಿದೆ. ಅವರಿಗೆ ದೈವಮಾರ್ಗದಲ್ಲಿ ಜೀವದಾನ ಮಾಡಲು ಹೆದರಿಕೆಯಿರಲಿಲ್ಲ. ಆದರೆ ದೇವರ ದೂತನ ಕುರಿತು ದೇವರ ಉದ್ದೇಶವು ವಿರೋಧಿಗಳ ಉದ್ದೇಶದ ಮೇಲೆ ವಿಜಯಗಳಿಸಲಿ ಎಂಬುದೇ ಅವರ ಕೋರಿಕೆಯಾಗಿತ್ತು. "ನನ್ನ ಚಿತ್ತದಂತಾಗದೆ ನಿನ್ನ ಚಿತ್ತದಂತೆಯೇ ಆಗಲಿ'' ಎಂಬುದರ ಉದ್ದೇಶ ಇದೇ ಎಂದು ನನ್ನ ಅಭಿಪ್ರಾಯ.

ಶಿಲುಬೆಯ ಮೇಲೆ ತನ್ನ ಮರಣ ದೇವರ ಉದ್ದೇಶವೆಂದು ಯೇಸುಕ್ರಿಸ್ತರು ತಿಳಿದಿದ್ದರೆ ಅವರು ಈರೀತಿ ಪ್ರಾರ್ಥಿಸುತ್ತಲೇ ಇರಲಿಲ್ಲ:— "ನಿನಗೆ ಎಲ್ಲವೂ ಸಾಧ್ಯ; ಈ ಪಾತ್ರೆಯನ್ನು ನನ್ನಿಂದ ತೊಲಗಿಸು" ಎಂದರೆ ಅವರ ವಿರೋಧಿಗಳು ಅವರಿಗೆ ಕುಡಿಯಲಿಕ್ಕಾಗಿ ಅವರ ತುಟಿಗೆ

ತಗಲಿಸಿಟ್ಟಿರುವ ಮರಣದ ಪಾತ್ರೆಯನ್ನು ತನ್ನಿಂದ ತೊಲಗಿಸಲಿ ಎಂಬುದೇ ಈ ಪ್ರಾರ್ಥನೆಯ ಉದ್ದೇಶ.

## ಪಾತ್ರೆಯು ತೊಲಗಿಸಲ್ಪಟ್ಟಿತು

ಯೇಸುಕ್ರಿಸ್ತರ ಮೇಲಿನ ಪ್ರಾರ್ಥನೆ ದೇವರಿಂದ ಸ್ವೀಕೃತವಾಯಿತೆಂದು ನಾವು ನಂಬುತ್ತೇವೆ. ನಮ್ಮ ವಿಶ್ವಾಸಕ್ಕೆ ಈ ಕೆಳಗಿನ ಆಧಾರಗಳಿವೆ.

1. ತಮ್ಮ ಪ್ರಾರ್ಥನೆಗಳನ್ನು ದೇವರು ಸ್ವೀಕರಿಸುತ್ತಾನೆಂದು ಯೇಸುಕ್ರಿಸ್ತರು ಸ್ವತಃ ಹೇಳುತ್ತಾರೆ:

"ತಂದೆಯೇ, ನೀನು ನನ್ನ ಪ್ರಾರ್ಥನೆಯನ್ನು ಕೇಳಿದ್ದಕ್ಕೆ ನಿನ್ನನ್ನು ಕೊಂಡಾಡುತ್ತೇನೆ; ನೀನು ಯಾವಾಗಲೂ ನನ್ನ ಪ್ರಾರ್ಥನೆಯನ್ನು ಕೇಳುವವನಾಗಿದ್ದೀ ಎಂದು ನನಗೆ ಗೊತ್ತೇ ಇದೆ.'' (ಯೋಹಾನ 11:42).

ಅವರು ಇತರರನ್ನು ಪ್ರಾರ್ಥನೆಗೆ ಪ್ರೇರೇಪಿಸುತ್ತಿದ್ದರು ಮತ್ತು ದೇವರು ಅವರ ಪ್ರಾರ್ಥನೆಯನ್ನು ಸ್ವೀಕರಿಸುವನೆಂದು ಹೇಳಿರುವರು(ಮಾರ್ಕ 11:24). ಯೇಸು ಕ್ರಿಸ್ತರು ಹೇಳಿರುವರು: "ನಿಮ್ಮಲ್ಲಿ ಯಾವನಾದರೂ ರೊಟ್ಟಿ ಕೇಳುವ ಮಗನಿಗೆ ಕಲ್ಲನ್ನು ಕೊಡುವನೇ? ಮೀನು ಕೇಳಿದರೆ ಹಾವನ್ನು ಕೊಡುವನೇ?'' (ಮತ್ತಾಯ 7:9 10).

ಸಹಿಸಲು ಅಸಾಧ್ಯವಾದ ಮನೋವ್ಯಥೆಯಿಂದ ವಿನೀತವಾಗಿ ಮಾಡಿದ ಅವರ ಜೀವನ್ಮರಣದಂತಹ ಪ್ರಧಾನ ಪ್ರಶ್ನೆಯ ಕುರಿತು ಮಾಡಿದ ಯೇಸುಕ್ರಿಸ್ತರ ಪ್ರಾರ್ಥನೆಯು ಅಸ್ವೀಕೃತವಾಗುವುದಾದರೆ, ಅವರು ತಮ್ಮ ಶಿಷ್ಯರೊಡನೆ ತಮ್ಮ ಆವಶ್ಯಕತೆಗಳನ್ನು ದೇವರೊಡನೆ ಪ್ರಾರ್ಥಿಸಿದರೆ ದೊರಕುವುದೆಂದು ಹೇಳಿದುದು ನಿರರ್ಥಕವಾಗುತ್ತದೆ. ದೇವರು ಖಂಡಿತವಾಗಿಯೂ ಅವರ ಪ್ರಾರ್ಥನೆಯನ್ನು ಸ್ವೀಕರಿಸಿ ಅವರನ್ನು ಶಾಪಗ್ರಸ್ತ ಮರಣದಿಂದ ರಕ್ಷಿಸಿದನೆಂದು ನಂಬದೆ ಇರಲು ಬೇರೆ ಯಾವುದೇ ಆಧಾರ ನಮ್ಮ ಬಳಿ ಇಲ್ಲ.

2. ಯೇಸುಕ್ರಿಸ್ತರ ಪ್ರಾರ್ಥನೆಯ ಸ್ವೀಕೃತಿಯ ಕುರಿತು ಬೈಬಲಿನ ''ಕೀರ್ತನೆಗಳು'' ಎಂಬ ಗ್ರಂಥದ ಈ ಭಾಗವು ಶ್ರದ್ಧೇಯವಾಗಿದೆ. "ನಾಯಿಗಳು ನನ್ನನ್ನು ಸುತ್ತಿಕೊಂಡಿವೆ; ದುಷ್ಟರ ಗುಂಪು ನನ್ನನ್ನು ಆವರಿಸಿಕೊಂಡಿದೆ. ನನ್ನ ಕೈಕಾಲುಗಳನ್ನು ತಿವಿದಿದ್ದಾರೆ. ನನ್ನ ಎಲುಬುಗಳನ್ನೆಲ್ಲಾ ಎಣಿಸಲಿಕ್ಕಾಗುವುದು; ಅವರೋ ನನ್ನನ್ನು ನೋಡಿ ಹಿಗ್ಗುತ್ತಾರೆ. ನನ್ನ ಮೇಲ್ಹೊದಿಕೆಯನ್ನು ತಮ್ಮಲ್ಲಿ ಪಾಲು ಮಾಡಿಕೊಳ್ಳುತ್ತಾರೆ; ನನ್ನ ಅಂಗಿಗೋಸ್ಕರ ಚೀಟು ಹಾಕುತ್ತಾರೆ. ಯೆಹೋವನೇ ನನ್ನ ರಕ್ಷಕನೇ, ನೀನಾದರೋ ದೂರವಾಗಿರಬೇಡ; ಬೇಗ ಬಂದು ಸಹಾಯ ಮಾಡು. ಕತ್ತಿಗೆ ಸಿಕ್ಕದಂತೆ ನನ್ನನ್ನು ತಪ್ಪಿಸು; ನನ್ನ ಪ್ರಿಯ ಪ್ರಾಣವು ನಾಯಿಯ ವಶವಾಗದಂತೆ ಕಾಪಾಡು. ಸಿಂಹಗಳ ಬಾಯಿಯಿಂದಲೂ ಕಾಡುಕೋಣಗಳ ಕೊಂಬುಗಳಿಂದಲೂ ನನ್ನನ್ನು ತಪ್ಪಿಸು. ನನಗೆ ಸದುತ್ತರವನ್ನು ಕೊಟ್ಟಿದ್ದೀಯಲ್ಲಾ. ನಿನ್ನ ನಾಮ ಮಹಿಮೆಯನ್ನು ನನ್ನ ಸಹೋದರರಿಗೆ ತಿಳಿಸುವೆನು; ಸಭಾ ಮಧ್ಯದಲ್ಲಿ ನಿನ್ನನ್ನು ಸ್ತುತಿಸುವೆನು. ಯೆಹೋವನ ಭಕ್ತರೇ, ಆತನನ್ನು ಸ್ತುತಿಸಿರಿ; ಯಾಕೋಬನ ವಂಶದವರೇ ನೀವೆಲ್ಲರೂ ಆತನನ್ನು ಕೊಂಡಾಡಿರಿ. ಇಸ್ರಾಯೇಲ ವಂಶಸ್ಥರೇ ನೀವೆಲ್ಲರೂ ಆತನಲ್ಲಿ ಭಯಭಕ್ತಿಯುಳ್ಳವರಾಗಿರಿ. ಆತನು ಕುಗ್ಗಿ ಹೋದವನ ದುರವಸ್ಥೆಯನ್ನು ತಿರಸ್ಕರಿಸಲಿಲ್ಲ. ಅದಕ್ಕೆ ಅಸಹ್ಯಪಡಲಿಲ್ಲ. ತನ್ನ ಮುಖವನ್ನು ಅವನಿಗೆ ಮರೆಮಾಚದೆ ಅವನ ಪ್ರಾರ್ಥನೆಗೆ ಕಿವಿಗೊಟ್ಟನು.'' (ಕೀರ್ತನೆಗಳು 22:16–24).

ಕೀರ್ತನೆಗಳು 34ರಲ್ಲಿ ಈರೀತಿ ಇದೆ:—"ನೀತಿವಂತನಿಗೆ ಸಂಭವಿಸುವ ಕಷ್ಟಗಳು ಅನೇಕವಿದ್ದರೂ ಯೆಹೋವನು ಅವೆಲ್ಲವುಗಳಿಂದ ಅವನನ್ನು ಬಿಡಿಸುತ್ತಾನೆ. ಆತನು ಅವನ ಎಲುಬುಗಳನ್ನೆಲ್ಲಾ ಕಾಪಾಡುತ್ತಾನೆ; ಅವುಗಳಲ್ಲಿ ಒಂದಾದರೂ ಮುರಿದುಹೋಗುವುದಿಲ್ಲ.'' (ಕೀರ್ತನೆಗಳು 34:19,20).

ಬೈಬಲಿನ ಹೊಸ ಒಡಂಬಡಿಕೆಯ ಯೋಹಾನನ ಸುವಾರ್ತೆಯ 19ನೇ ಅಧ್ಯಾಯದಲ್ಲಿ ಮೇಲಿನ ಕೀರ್ತನೆಗಳಲ್ಲಿ ಹೇಳಲಾದ ಸಂಗತಿಗಳನ್ನು ಯೇಸು ಕ್ರಿಸ್ತರ ಕುರಿತು ಭವಿಷ್ಯವಾಣಿಗಳಾಗಿ ನಿವೇದಿಸಲಾಗಿದೆ. ಈ ವಚನಗಳನ್ನು ನೋಡಿರಿ:

(i) "ಸಿಪಾಯಿಗಳು ಯೇಸುವನ್ನು ಶಿಲುಬೆಗೆ ಹಾಕಿದ ಮೇಲೆ ಅವರು ಆತನ ಮೇಲು ಹೊದಿಕೆಗಳನ್ನು ತಕ್ಕೊಂಡು ನಾಲ್ಕು ಪಾಲು ಮಾಡಿ ಒಬ್ಬೊಬ್ಬ ಸಿಪಾಯಿಗೆ ಒಂದೊಂದು ಪಾಲಿನ ಪ್ರಕಾರ ಹಂಚಿಕೊಂಡರು. ಆತನ ಒಳ ಅಂಗಿಯನ್ನು ಸಹ ತಕ್ಕೊಂಡರು; ಆದರೆ ಆ ಅಂಗಿಗೆ ಹೊಲಿಗೆ ಇರಲಿಲ್ಲ, ಅದು ಮೇಲಿನಿಂದ ಅಖಂಡವಾಗಿ ಹೆಣೆದದ್ದಾಗಿತ್ತು. ಅದನ್ನು ನೋಡಿ ಅವರು ನಾವು ಇದನ್ನು ಹರಿಯಬಾರದು; ಚೀಟು ಹಾಕಿ ಇದು ಯಾರಿಗೆ ಬರುವದೋ ನೋಡೋಣ ಎಂದು ಮಾತಾಡಿಕೊಂಡರು. ಇದರಿಂದ—

ನನ್ನ ಬಟ್ಟೆಗಳನ್ನು ತಮ್ಮಲ್ಲಿ ಪಾಲು ಮಾಡಿಕೊಂಡರು, ನನ್ನ ಅಂಗಿಗೋಸ್ಕರ ಚೀಟಿ ಹಾಕಿದರು.
**ಎಂಬ ಶಾಸ್ತ್ರದ ಮಾತು ನೆರವೇರಿತು."**
(ಯೋಹಾನ 19 : 23–24)

(ii) "ಯೇಸುವಿನ ಬಳಿಗೆ ಬಂದಾಗ ಆತನು ಆಗಲೇ ಸತ್ತಿರುವುದನ್ನು ಅವರು ಕಂಡು ಆತನ ಕಾಲುಗಳನ್ನು ಮುರಿಯಲಿಲ್ಲ. ಆದರೂ ಸಿಪಾಯಿಗಳಲ್ಲಿ ಒಬ್ಬನು ಈಟಿಯಿಂದ ಆತನ ಪಕ್ಕೆಯನ್ನು ತಿವಿದನು; ತಿವಿದ ಕೂಡಲೇ ರಕ್ತವೂ ನೀರೂ ಹೊರಟಿತು. ಅದನ್ನು ಕಂಡವನೇ ಸಾಕ್ಷಿ ಹೇಳಿದ್ದಾನೆ. ಅವನ ಸಾಕ್ಷಿ ಸತ್ಯವೇ; ತಾನು ಹೇಳುವುದು ಸತ್ಯವೆಂದು ಅವನು ಬಲ್ಲನು. ನೀವು ಸಹ ನಂಬಬೇಕೆಂದು ಇದನ್ನು ಹೇಳಿದ್ದಾನೆ. ಯಾಕೆಂದರೆ ಆತನ ಒಂದು ಎಲುಬನ್ನಾದರೂ ಮುರಿಯಕೂಡದು ಎಂದು **ಶಾಸ್ತ್ರದಲ್ಲಿ ಬರೆದ ಮಾತು ನೆರವೇರುವಂತೆ ಇದಾಯಿತು."** (ಯೋಹಾನ 19 : 35–36)

ಯೇಸು ಕ್ರಿಸ್ತರ ಜೊತೆಯಲ್ಲಿ ಶಿಲುಬೆಗೆ ಏರಿಸಲ್ಪಟ್ಟ ಇಬ್ಬರು ಕಳ್ಳರ ಎಲುಬುಗಳು ಮುರಿಯಲ್ಪಟ್ಟವು. ಆದರೆ ಯೇಸುಕ್ರಿಸ್ತರ ಎಲುಬುಗಳು ಮೇಲಿನ ಭವಿಷ್ಯವಾಣಿಗಳ ಪ್ರಕಾರ ಮುರಿಯಲ್ಪಡದುದು ಗಮನಾರ್ಹವಾಗಿದೆ. ಈ ರೀತಿ ದೇವರು ಅವರ ಪ್ರಾರ್ಥನೆಯನ್ನು ಕೇಳಿ ಅವರನ್ನು ಶಾಪಗ್ರಸ್ತ ಮರಣದಿಂದ ರಕ್ಷಿಸಿದನು.

3. ಯೇಸುಕ್ರಿಸ್ತರು ಸ್ವತಃ ದೇವರು ತನ್ನ ಪ್ರಾರ್ಥನೆಯನ್ನು ಸ್ವೀಕರಿಸಿರುವನೆಂದೂ ತಾನು ಶಿಲುಬೆಯಲ್ಲಿ ಮರಣ ಹೊಂದಲಾರನೆಂದೂ ನಂಬಿದ್ದರು. ಆದರೆ ಅವರು ಶಿಲುಬೆಗೆ ಮೊಳೆಯಿಂದ ಜಡಿಯಲ್ಪಟ್ಟು ರಕ್ಷೆಯ ಯಾವುದೇ ದಾರಿ ಕಾಣಿಸದೇ ಇದ್ದಾಗ ತಮ್ಮ ಭಯಾನಕ ಅವಸ್ಥೆಯನ್ನು ಗ್ರಹಿಸಿ ನಿರಾಶರಾಗಿ ಒಮ್ಮೆ ಈ ರೀತಿ ಉದ್ಗರಿಸಿದರು: "ಏಲೀ ಏಲೀ ಲಮಾ ಸಬಕ್ತಾನೀ– ಎಂದರೆ ನನ್ನ ದೇವರೇ ನನ್ನ ದೇವರೇ ಯಾಕೆ ನನ್ನನ್ನು ಕೈಬಿಟ್ಟಿದ್ದೀ" (ಮತ್ತಾಯ 27:46). ದೇವರು ಅವರ ಕೈಬಿಡಲಿಲ್ಲ. ಆತನು ಅವರ ರಕ್ಷೆಗಿರುವ ಎಲ್ಲಾ ಏರ್ಪಾಟುಗಳನ್ನು ಮಾಡಿದ್ದನು. ಯೇಸು ಕ್ರಿಸ್ತರು ಶಿಲುಬೆಯಲ್ಲಿ ಮೃತರಾಗಿದ್ದರೆಂದು ನಾವು ನಂಬುವುದಾದರೆ ದೇವರು ಯಥಾರ್ಥವಾಗಿ ಅವರನ್ನು ಕೈಬಿಟ್ಟನೆಂದು ವು ಒಪ್ಪಿಕೊಳ್ಳಬೇಕಾಗುತ್ತದೆ. ಆದರೆ ಇದು ಯೇಸುಕ್ರಿಸ್ತರ ಈ ಕೆಳಗಿನ ವಚನಗಳಿಗೆ ವಿರುದ್ಧವಾಗಿದೆ. ರು ಈರೀತಿ ಹೇಳಿರುವರು: "ನೋಡಿರಿ, ನಿಮ್ಮಲ್ಲಿ ೊಬ್ಬನು ತನ್ನ ತನ್ನ ಸ್ಥಳಕ್ಕೆ ಚದರಿಹೋಗಿ ನನ್ನನ್ನು ಒಂಟಿಗನಾಗಿ ಬಿಡುವ ಕಾಲ ಬರುವುದು, ಈಗ ಬಂದಿದೆ. ಆದರೆ ನಾನು ಒಂಟಿಗನಲ್ಲ, ತಂದೆಯು ನನ್ನ ಸಂಗಡ ಇದ್ದಾನೆ." (ಯೋಹಾನ 16:32)

4. ದೇವರು ಸಜ್ಜನರ ಪ್ರಾರ್ಥನೆಗಳನ್ನು ಕೇಳುವನೆಂದೂ ದುರ್ಜನರ ಪ್ರಾರ್ಥನೆಗಳು ಸ್ವೀಕೃತವಾಗುವುದಿಲ್ಲವೆಂದೂ ಎಲ್ಲಾ ಧರ್ಮ ಗ್ರಂಥಗಳು ಒಮ್ಮತವಾಗಿ ಸ್ಪಷ್ಟಗೊಳಿಸಿವೆ. ಉದಾಹರಣೆಗಾಗಿ ಕೀರ್ತನೆಗಳು (18:6), (66 : 18–20), ಯೆರೆಮೀಯ (29:13) ಮತ್ತು ಯೋಬ (22:27) ಈ ಸಂಗತಿಯನ್ನು ಸ್ಪಷ್ಟಪಡಿಸುತ್ತವೆ. ಯೋಹಾನನ ಸುವಾರ್ತೆಯಲ್ಲಿ ಈ ಕೆಳಗಿನಂತೆ ಬರೆದಿದೆ:— "ಭಕ್ತಿಹೀನರ ಪ್ರಾರ್ಥನೆಯನ್ನು ದೇವರು ಕೇಳುವುದಿಲ್ಲ, ಯಾವನು ಭಕ್ತನಾಗಿದ್ದು ಆತನ ಚಿತ್ತದಂತೆ ನಡೆಯುತ್ತಾನೋ ಅವನ ಪ್ರಾರ್ಥನೆಯನ್ನು ಕೇಳುತ್ತಾನೆಂದು ಬಲ್ಲೆವು" (ಯೋಹಾನ 9 : 31) ದೇವರು ಯೇಸು ಕ್ರಿಸ್ತರ ಪ್ರಾರ್ಥನೆಯನ್ನು ನಿರಾಕರಿಸಿದನೆಂದು ನಾವು ನಂಬುವುದಾದರೆ ಏಸು ಕ್ರಿಸ್ತರು ದೇವರ ಇಷ್ಟಾನುಸಾರ ನಡೆಯುವ ಸತ್ಪುರುಷರಾಗಿರಲಿಲ್ಲವೆಂದೂ ಪಾಪಿಯಾಗಿದ್ದರೆಂದೂ ನಂಬದೆ ನಿರ್ವಾಹವಿಲ್ಲ. ಆದರೆ ದೇವರ ಪ್ರವಾದಿಯಾಗಿದ್ದ ಯೇಸು ಕ್ರಿಸ್ತರ ಕುರಿತು ಈ ರೀತಿ ನಂಬುವುದು ಮಹಾ ಪಾತಕವಾಗಿದೆ. ಹೊಸ ಒಡಂಬಡಿಕೆಯ "ಇಬ್ರಿಯರಿಗೆ ಬರೆದ ಪತ್ರಿಕೆ"ಯ 5ನೇ ಅಧ್ಯಾಯದ 7ನೇ ವಚನವು ಯೇಸು ಕ್ರಿಸ್ತರ ಪ್ರಾರ್ಥನೆಯ ಕುರಿತು ಈ ರೀತಿ ವಿವರಿಸುತ್ತದೆ:—

"ಕ್ರಿಸ್ತನು ತಾನು ಭೂಲೋಕದಲ್ಲಿದ್ದಾಗ ಮರಣಕ್ಕೆ ತಪ್ಪಿಸಿ ಕಾಪಾಡಲು ಶಕ್ತನಾಗಿರುವಾತನಿಗೆ ಬಲವಾಗಿ ಕೂಗುತ್ತಾ ಕಣ್ಣೀರನ್ನು ಸುರಿಸುತ್ತಾ ಪ್ರಾರ್ಥನೆ ವಿಜ್ಞಾಪನೆಗಳನ್ನು ಸಮರ್ಪಿಸಿ ದೇವರ ಮೇಲಣ ಭಯಭಕ್ತಿಯ ನಿಮಿತ್ತ ಕೇಳಲ್ಪಟ್ಟನು."

ಈ ರೀತಿ ಯಹೂದಿಗಳು ತಮ್ಮ ಕುತಂತ್ರದಲ್ಲಿ ಸೋತರು. ದೇವರು ಯೇಸು ಕ್ರಿಸ್ತರಂತಹ ದೈವಭಯವುಳ್ಳ ಸತ್ಪುರುಷರನ್ನು ಶಾಪಗ್ರಸ್ತ ಮರಣದಿಂದ ರಕ್ಷಿಸಿದನು.

## 2. ಯೇಸು ಕ್ರಿಸ್ತರು ಶಾಪಗ್ರಸ್ತರೇ ?

ಯೇಸು ಕ್ರಿಸ್ತ ತನ್ನ ವಿರೋಧಿಗಳೊಡನೆ ಹೀಗೆಂದರು: "ಅಯ್ಯೋ, ಕಪಟಿಗಳಾದ ಶಾಸ್ತ್ರಿಗಳೇ ಫರಿಸಾಯರೇ, ಪರಲೋಕ ರಾಜ್ಯದ ಬಾಗಿಲನ್ನು ಮನುಷ್ಯರ ಎದುರಿಗೆ ಮುಚ್ಚಿ ಬಿಡುತ್ತೀರಿ; ನೀವಂತೂ ಒಳಕ್ಕೆ

ಹೋಗುವುದಿಲ್ಲ. ಒಳಕ್ಕೆ ಹೋಗಬೇಕೆಂದಿರುವವರನ್ನೂ ಹೋಗಗೊಡಿಸುವುದಿಲ್ಲ.'' (ಮತ್ತಾಯ 23:13)

ಪುನಃ ಅವರು ಹೇಳುತ್ತಾರೆ:

"ನಂಬದೆ ಹೋಗುವವನು ದಂಡನೆಗೆ ಗುರಿಯಾಗುವನು'' ಮಾರ್ಕ (16:16) ಯೇಸು ಕ್ರಿಸ್ತರಿಗೆ ಶಾಪಗ್ರಸ್ತ ಮರಣವು ಉಂಟಾಗುವಂತೆ ಮಾಡಿದೆವೆಂದು ಫರಿಸಾಯರು ನಂಬಿದ್ದರು. ಇದು ಸತ್ಯವಾಗಿದ್ದರೆ ಮತ್ತು ಸಂತಪಾಲರು ಇದಕ್ಕೆ ಸಾಕ್ಷ್ಯ ವಹಿಸುವುದಾದರೆ ಅವರು ಅವರ ಧರ್ಮ ಶಾಸ್ತ್ರ ಪ್ರಕಾರ ಯೇಸು ಕ್ರಿಸ್ತರನ್ನು ಕಳ್ಳ ಪ್ರವಾದಿಯೆಂದು ಸ್ಪಷ್ಟಗೊಳಿಸಿ ಸರಿಯಾಗಿ ಅವರನ್ನು ತಿರಸ್ಕರಿಸಿದರೆಂದೂ ಇದರಿಂದಾಗಿ ಅವರು ದಂಡನೆಗೆ ಗುರಿಯಾಗಲಾರರೆಂದೂ ವ್ಯಕ್ತವಾಗುತ್ತದೆ.

"ಶಾಪಗ್ರಸ್ತ'' ಎಂಬ ಶಬ್ದದ ಯಥಾರ್ಥ ಅರ್ಥದ ಪ್ರಕಾರ ಒಬ್ಬ ಶಾಪಗ್ರಸ್ತ ಮನುಷ್ಯ ಪ್ರವಾದಿ ಆಗಲು ಅಸಾಧ್ಯ. ಒಬ್ಬನ ದೈವ ಬಾಂಧವ್ಯವೂ ಮುರಿದು ಆತನ ಹೃದಯವು ದೈವಪ್ರೇಮ ಮತ್ತು ದೈವಜ್ಞಾನ ವಿರಹಿತವಾಗಿ ದೈವದಯೆ ಮತ್ತು ದೈವಾನುಗ್ರಹದಿಂದ ವಂಚಿತನಾಗುವಾಗ ಆತನು "ಶಾಪಗ್ರಸ್ತ''ನಾಗುತ್ತಾನೆ, ಆತನು ಸೈತಾನನ ಹಾಗೆ ತಪ್ಪಿತಸ್ತನಾಗಿದ್ದು ದೇವರೊಡನೆ ವಿರೋಧವನ್ನು ಹೊಂದಿರುವವನಾಗುತ್ತಾನೆ ಈ ಕಾರಣದಿಂದಲೇ ಸೈತಾನನಿಗೆ ''ಶಾಪಗ್ರಸ್ತ''ನೆಂಬ ಹೆಸರು ಬಂದಿದೆ.

ತಾನು ಪ್ರಪಂಚದ ಬೆಳಕೆಂದು ವಾದಿಸಿದ, ತಾನು ದೈವ ಪ್ರೇಮಕ್ಕೆ ಪಾತ್ರನೆಂದು ಹೇಳಿದ, ತನ್ನ ಪ್ರಾರ್ಥನೆಗಳು ದೇವರಿಂದ ಸ್ವೀಕಾರ ಹೊಂದುತ್ತವೆಯೆಂದು ನಂಬಿದ ಸತ್ಪುರುಷರಾದ ಯೇಸು ಕ್ರಿಸ್ತರು ಶಾಪಗ್ರಸ್ತರೆಂದೂ ಅವರಿಗೆ ದೈವಬಂಧವಿರಲಿಲ್ಲವೆಂದೂ ಅವರ ಹೃದಯವು ಪಾಪಭರಿತವಾಗಿತ್ತೆಂದೂ ನಾವು ನಂಬಲು ಹೇಗೆ ಸಾಧ್ಯ? ಈ ಮೇಲಿನ ಸಂಗತಿಗಳ ಆಧಾರದಿಂದ ಯೇಸು ಕ್ರಿಸ್ತರು ಶಿಲುಬೆಯಲ್ಲಿ ಮೃತರಾಗಿ ಶಾಪಗ್ರಸ್ತರಾದರೆಂಬ ವಿಶ್ವಾಸವನ್ನು ನಿಷೇಧಿಸಬೇಕಾಗಿದೆ.

## 3. ಸಂತರ ಪುನರುತ್ಥಾನ

ಯೇಸು ಕ್ರಿಸ್ತರು ಶಿಲುಬೆಯಲ್ಲಿ ಮರಣ ಹೊಂದಿರಲಿಲ್ಲವೆಂದು ಸ್ಪಷ್ಟಗೊಳಿಸುವ ಮೂರನೆಯ ಸಾಕ್ಷ್ಯ ಮತ್ತಾಯನ ಸುವಾರ್ತೆಯ 27ನೇ ಅಧ್ಯಾಯದಲ್ಲಿದೆ: ಅದು ಈ ರೀತಿಯಾಗಿದೆ.

"ಸಮಾಧಿಗಳು ತೆರೆದುವು; ನಿದ್ದೆ ಹೋಗಿದ್ದ ಅನೇಕ ಭಕ್ತರ ದೇಹಗಳು ಎದ್ದವು; ಮತ್ತು ಆತನು ಎದ್ದ ಮೇಲೆ ಸಮಾಧಿಗಳೊಳಗಿಂದ ಹೊರಗೆ ಬಂದು ಪರಿಶುದ್ಧ ಪಟ್ಟಣದೊಳಕ್ಕೆ ಹೋಗಿ ಅನೇಕರಿಗೆ ಕಾಣಿಸಿಕೊಂಡರು.'' (ಮತ್ತಾಯ 27: 52-53). ಈ ಸಂಭವವು ಮೇಲೆ ಬರೆದಂತೆಯೇ ನಡೆದಿದೆಯೆಂದು ನಂಬಲು ಸಾಧ್ಯವಿಲ್ಲ. ಇಂತಹ ಅಸಾಧಾರಣವಾದ, ಅಭೂತಪೂರ್ವ, ವಿಚಿತ್ರ ಸಂಭವದ ಕುರಿತು ಇತರರು ಸಹ ವಿವರಿಸಬೇಕಾಗಿತ್ತು. ಆದರೆ ಇತರ ಮೂರು ಸುವಾರ್ತೆಗಳ ಲೇಖಕರು ಸೂಚ್ಯ ರೂಪದಲ್ಲಿಯಾದರೂ ಇದರ ಕುರಿತು ಬರೆದಿಲ್ಲ. ಈ ಸಂಭವವು ಯಥಾರ್ಥವಾಗಿ ನಡೆದಿದ್ದರೆ ಯಹೂದಿಗಳು ಈ ಪುನರುತ್ಥಾನಗೊಂಡ ಭಕ್ತ ಜನರೊಡನೆ ಯೇಸು ಕ್ರಿಸ್ತರ ಸತ್ಯತೆಯ ಕುರಿತು ವಿಚಾರಿಸಲು ಒಳ್ಳೆಯ ಸಂದರ್ಭ ಸಿಗುತ್ತಿತ್ತು ಮತ್ತು ಅವರು ಆ ಕುರಿತು ಸಾಕ್ಷ್ಯ ನುಡಿದಿದ್ದರೆ ಯಹೂದಿಗಳು ಬೇರೆ ಯಾವುದೇ ಪ್ರಶ್ನೆ ಮಾಡದೆ ಸ್ವೀಕರಿಸುತ್ತಿದ್ದರು. ಈ ವಿಷಯದ ಕುರಿತು ತೋಮಸ್ ಪೈನ್ ಈ ರೀತಿ ಬರೆದಿರುವರು:—

"ಒಂದು ಸುಳ್ಳು ಹೇಳುವುದು ಸುಲಭ. ಆದರೆ ಆ ಸುಳ್ಳನ್ನು ಹೇಳಿದ ಮೇಲೆ ಅದನ್ನು ಸ್ಥಿರಪಡಿಸುವುದು ಕಷ್ಟ. ಮತ್ತಾಯನ ಸುವಾರ್ತೆಯನ್ನು ಬರೆದ ವ್ಯಕ್ತಿ ಪುನರುತ್ಥಾನಗೊಂಡು ಪಟ್ಟಣಕ್ಕೆ ಹೋದ ಸಂತರು ಯಾರೆಲ್ಲಾ ಎಂಬ ಸಂಗತಿ ನಮ್ಮೊಡನೆ ಹೇಳಬೇಕಾಗಿದ್ದಿತು. ಅನಂತರ ಅವರಿಗೆ ಏನಾಯಿತು? ಅವರನ್ನು ಕಂಡವರು ಯಾರು? (ಅವರನ್ನು ನಾನೇ ಸ್ವತಃ ನೋಡಿದೆನೆಂದು ಹೇಳಲು ಸುವಾರ್ತೆಯ ಲೇಖಕನಿಗೆ ಧೈರ್ಯವಿಲ್ಲ). ಆ ಪುರುಷ ಸಂತರೂ, ಸ್ತ್ರೀಸಂತರೂ ನಗ್ನರಾಗಿ ಪ್ರಾಕೃತಿಕ ಉಡುಗೆಯಲ್ಲಿ ಬಂದರೋ, ಅಥವಾ ಪೂರ್ಣ ಉಡುಗೆಯಲ್ಲಿ ಬಂದರೋ? ಪೂರ್ಣ ಉಡುಗೆಯಲ್ಲಿ ಬಂದರೆ ಅವರಿಗೆ ಬಟ್ಟೆಬರೆ ಎಲ್ಲಿ ದೊರಕಿತು? ಅವರು ತಮ್ಮ ಪೂರ್ವ ನಿವಾಸಸ್ಥಾನಗಳಿಗೆ ಹೋಗಿ ತಮ್ಮ ಹೆಂಡಂದಿರನ್ನೂ, ಗಂಡಂದಿರನ್ನೂ, ಸ್ವತ್ತನ್ನೂ ಪುನಃ ಪಡೆದರೋ? ಅವರನ್ನು ಯಾವ ರೀತಿ ಇತರರು ಆದರಿಸಿದರು? ಅವರು ತಮ್ಮ ಹಿಂದಿನ ಸ್ವತ್ತುಗಳನ್ನು ಪಡೆಯಲು ಕಾನೂನು ಕ್ರಮಗಳನ್ನು ಕೈಗೊಂಡರೋ, ಅವರು ಪುನಃ ಮೃತರಾದರೋ? ಅಥವಾ ತಮ್ಮ ಸಮಾಧಿಗಳಿಗೆ ಹೋಗಿ ಜೀವಂತರಾಗಿದ್ದುಕೊಂಡೇ ತಮ್ಮನ್ನು ಹುಗಿಸಿಕೊಂಡರೋ? ಸಂತರ ಒಂದು ಸೈನ್ಯವೇ ಪುನರುಜ್ಜೀವನ ಪಡೆದರೂ ಅವರ ಪರಿಚಯವಿರುವವರು ಯಾರೂ ಇಲ್ಲದಿರುವುದು ವಿಚಿತ್ರವಾಗಿದೆ.

ಅವರನ್ನು ನೋಡಿದವರು ಯಾರು? ಅವರ ಕುರಿತು ಒಂದೇ ಒಂದು ಶಬ್ದ ಹೆಚ್ಚಾಗಿ ಹೇಳಲು ಯಾರೂ ಇಲ್ಲದಿರುವುದೂ ವಿಚಿತ್ರವಾಗಿದೆ. ಆ ಸಂತರಿಗೆ ಸಹ ಏನೂ ಹೇಳಲಿಕ್ಕಿಲ್ಲ. ಮೊದಲೇ ಭವಿಷ್ಯ ನುಡಿದ ಪ್ರವಾದಿಗಳು ಇವರಾಗಿದ್ದರೆ ಇವರಿಗೆ ಇನ್ನೂ ಎಷ್ಟೋ ಸಂಗತಿಗಳು ಹೇಳಲಿಕ್ಕಿದ್ದಿರಬಹುದು. ಅವರಿಗೆ ಎಲ್ಲಾ ಸಂಗತಿಗಳನ್ನು ಹೇಳಲು ಸಾಧ್ಯವಿದ್ದಿತು. ಭವಿಷ್ಯ ನುಡಿಯಲ್ಪಟ್ಟ ಸಂಭವಗಳು ನಡೆದ ನಂತರ ಅವುಗಳ ಕುರಿತು ವಿವರಣೆಗಳೂ ವ್ಯಾಖ್ಯಾನಗಳೂ ದೊರೆತು ಮೊದಲಿಗಿಂತ ವ್ಯಕ್ತವಾದ ಭವಿಷ್ಯವಾಣಿಗಳು ಲಭ್ಯವಾಗುತ್ತಿದ್ದುವು. ಹೀಗೆ ಪುನರುತ್ಥಾನಗೊಂಡ ಸಂತರಲ್ಲಿ ಮೋಶೆ ಮತ್ತು ಆರೋನ, ಯೆಹೋಶುವ, ಸಮುವೇಲ ಮತ್ತು ದಾವೀದರು ಇರುತ್ತಿದ್ದರೆ ಯೆರೂಸಲೇಮಿನಲ್ಲಿ ಒಬ್ಬನೇ ಒಬ್ಬ ಮತಾಂತರಗೊಳ್ಳದ ಯಹೂದಿ ಇರುತ್ತಿರಲಿಲ್ಲ. ಅವರಲ್ಲಿ ಸ್ನಾನಿಕನಾದ ಯೊಹಾನನು ಇದ್ದಿದ್ದರೆ ಮತ್ತು ಆತನ ಕಾಲದ ಸಂತರು ಸಹ ಇದ್ದರೆ ಎಲ್ಲರೂ ಅವರನ್ನು ಗುರುತಿಸುತ್ತಿದ್ದರು ಮತ್ತು ಹೀಗೆ ಗುರುತಿಸಿದವರು ಅಪೋಸ್ತಲರಿಗಿಂತ ಮಿಗಿಲಾಗಿ ಧರ್ಮಸಂದೇಶವನ್ನು ಇತರರಿಗೆ ತಲುಪಿಸುತ್ತಿದ್ದರು. ಈ ಸಂತರು ರಾತ್ರಿ ಅರಳಿ ಬೆಳಗ್ಗೆ ಒಣಗಿ ಹೋಗುವ ನಿಷ್ಪ್ರಯೋಜಕ ಹೂವಿನೋಪಾದಿಯಲ್ಲಿ ಸಮಾಧಿಗಳಿಂದ ಎಬ್ಬಿಸಲ್ಪಟ್ಟರೆಂದು ಕಾಣುತ್ತದೆ.'' (ದಿ ಏಜ್ ಓಫ್ ರೀಸನ್–ತೋಮಸ್ ಪೈನ್) ಮತ್ತಾಯನು ಬರೆದುದನ್ನು ವ್ಯಾಖ್ಯಾನಿಸದೆ ಬರೆದಂತೆಯೇ ನಡೆಯಿತೆಂದು ಗ್ರಹಿಸಿದರೆ ಮೇಲಿನ ಪ್ರಶ್ನೆಗಳು ಉದ್ಭವಿಸುತ್ತವೆ. ವಾಗ್ದಾನ ಮಾಡಲ್ಪಟ್ಟ ಮಸೀಹರಾದ ಹಝ್ರತ್ ಅಹ್ಮದ್‌ರವರು ವಿವರಿಸಿದ ಪ್ರಕಾರ ಮೇಲಿನ ಸಂಭವವು ಒಂದು ಆತ್ಮೀಯ ದರ್ಶನದ ನಿರೂಪಣೆಯಾಗಿದೆ. ಇಂತಹ ದರ್ಶನವು ವ್ಯಾಖ್ಯಾನ ಯೋಗ್ಯವಾಗಿದೆ. ಯೋಸೆಫರು ಈಜಿಪ್ಟಿನ ರಾಜನಾದ ಫರೋಹನ ಕನಸುಗಳನ್ನು ವ್ಯಾಖ್ಯಾಸಿಸಿದ ಪ್ರಕಾರ ಮೇಲಿನ ಆತ್ಮೀಯ ದರ್ಶನಗಳು ಸಹ ವ್ಯಾಖ್ಯಾನ ಯೋಗ್ಯವಾಗಿವೆ.

ಸುಮಾರು ಆರುನೂರು ವರ್ಷಗಳ ಮೊದಲು ಶೇಖ್ ಅಬ್ದುಲ್ ಘನಿ ನಬ್ಲೂಸಿ ಎಂಬವರು ಅರಬಿ ಭಾಷೆಯಲ್ಲಿ "ತಅತೀರುಲ್ ಅನಾಮ್'' ಎಂಬ ಕನಸಿನ ವ್ಯಾಖ್ಯಾನ ಗ್ರಂಥವನ್ನು ರಚಿಸಿರುವರು. ಆ ಗ್ರಂಥದ 289ನೇ ಪುಟದಲ್ಲಿ ಈ ರೀತಿ ಬರೆದಿದೆ: "ಸತ್ತವರು ಸಮಾಧಿಗಳಿಂದ ಎದ್ದು ಮನೆಗೆ ಹೋದುದಾಗಿ ಕನಸಿನಲ್ಲಿ ಕಂಡರೆ ಸೆರೆಮನೆಯಲ್ಲಿ ಬಂಧಿತವಾದ ಒಬ್ಬ ದೊಡ್ಡ ಮನುಷ್ಯ ಬಿಡುಗಡೆ ಹೊಂದಿ ರಕ್ಷಿತನಾಗುವನು'' ಈ ಕನಸು ಏಸುಕ್ರಿಸ್ತರ ಪುನರುತ್ಥಾನದ ಸಮಯದಲ್ಲಿ ಕಂಡುದರಿಂದ ಒಂದು ಸಂಗತಿ ಸ್ಪಷ್ಟವಾಗುತ್ತದೆ: ಯೇಸು ಕ್ರಿಸ್ತರು ಕೇವಲ ಸತ್ತ ಹಾಗೆ ಕಂಡುಬಂದರೆಂದೂ ಯಥಾರ್ಥವಾಗಿ ಅವರು ಮೂರ್ಛಿತರಾಗಿದ್ದರೆಂದೂ ಆ ಕಾರಣದಿಂದಲೇ ಅವರನ್ನು ಕಷ್ಟಕ್ಕೆ ಗುರಿ ಮಾಡಿದವರು ತಪ್ಪು ಧಾರಣೆಯಿಂದ ಅವರ ದೇಹವನ್ನು ಶವ ಕುಟೀರಕ್ಕೆ ಸಾಗಿಸಿ, ಕೊನೆಗೆ ಅವರ ಬಿಡುಗಡೆಗೆ ಬೇಕಾದ ಸೌಕರ್ಯಗಳು ಉಂಟಾದುವು. ಯೇಸು ಕ್ರಿಸ್ತರು ವಿರೋಧಿಗಳಿಂದ ರಕ್ಷೆ ಪ್ರಾಪಿಸುವ ಕುರಿತು ದೇವರು ತನ್ನ ಕೆಲವು ಭಕ್ತರಿಗೆ ಸೂಚ್ಯ ರೂಪವಾಗಿ ಮೇಲಿನ ಆತ್ಮೀಯ ದರ್ಶನಗಳನ್ನು ತೋರಿಸಿದನು.

### 4. ಯೋನ ಪ್ರವಾದಿಯ ಸೂಚಕ ಕಾರ್ಯ

ಯಹೂದಿಗಳು ಯೇಸು ಕ್ರಿಸ್ತರೊಡನೆ ಅವರಿಗೆ ಒಂದು ಸೂಚಕ ಕಾರ್ಯ ತೋರಿಸಬೇಕೆಂದು ಕೇಳಿದಾಗ ಅವರು ಈ ರೀತಿ ಹೇಳಿದರು: "ವ್ಯಭಿಚಾರಿಣಿಯಂತಿರುವ ಈ ಕೆಟ್ಟ ಸಂತತಿಯು ಸೂಚಕ ಕಾರ್ಯವನ್ನು ನೋಡಬೇಕೆಂದು ಅಪೇಕ್ಷಿಸುತ್ತದೆ. ಆದರೆ ಯೋನನೆಂಬ ಪ್ರವಾದಿಯಲ್ಲಿ ಆದ ಸೂಚಕ ಕಾರ್ಯವೇ ಹೊರತು ಬೇರೆ ಯಾವುದೂ ಇದಕ್ಕೆ ಸಿಕ್ಕುವುದಿಲ್ಲ. ಅಂದರೆ ಯೋನನು ಹೇಗೆ ಮೂರು ದಿನ ರಾತ್ರಿ–ಹಗಲು ದೊಡ್ಡ ಮೀನಿನ ಹೊಟ್ಟೆಯೊಳಗೆ ಇದ್ದನೋ, ಹಾಗೆಯೇ ಮನುಷ್ಯ ಕುಮಾರನು ಮೂರು ದಿನ ರಾತ್ರಿ–ಹಗಲು ಭೂಗರ್ಭದೊಳಗೆ ಇರುವನು.''

(ಮತ್ತಾಯ 12:39, 40).

ಯೇಸು ಕ್ರಿಸ್ತರ ಈ ಹೇಳಿಕೆ ಎಲ್ಲಾ ಸಂಗತಿಗಳ ತೀರ್ಮಾನ ಮಾಡುತ್ತದೆ. ಯಹೂದಿಗಳು ಅವರನ್ನು ಕೊಲ್ಲಲು ಪ್ರಯತ್ನಿಸಿದರು, ಆದರೆ ಅವರು ಮರಣದಿಂದ ರಕ್ಷೆ ಹೊಂದಿದರು. ಅವರನ್ನು ಕೊಲ್ಲಲು ಯಹೂದಿಗಳು ಸಾಧ್ಯವಿದ್ದಷ್ಟು ಪ್ರಯತ್ನಿಸಿದರು. ಆದರೆ ದೇವರು ಅವರನ್ನು ರಕ್ಷಿಸಿದನು. ಈ ರೀತಿ ಅವರ ರಕ್ಷೆಯು ಯಹೂದಿಗಳಿಗೆ ಒಂದು ಸೂಚಕ ಕಾರ್ಯವಾಗಿತ್ತು. ಯೇಸು ಕ್ರಿಸ್ತರು ತಾವು ತೋರಿಸಲಿರುವ ಸೂಚಕ ಕಾರ್ಯವನ್ನು ವಿವರಿಸಿರುವರು. ಅವರು ಭೂಗರ್ಭದಲ್ಲಿ ಸತ್ತವರಂತೆ ಇರಿಸಲ್ಪಡುವರು ಆದರೆ ಅವರ ಸ್ಥಿತಿ ದೊಡ್ಡ ಮೀನಿನ ಹೊಟ್ಟೆಯೊಳಗೆ ಹೋದ

ಯೋನ ಪ್ರವಾದಿಯ ಸ್ಥಿತಿಯಂತಿರುವುದು. ಯೋನ ಪ್ರವಾದಿ ಮೀನಿನ ಹೊಟ್ಟೆಯೊಳಗೆ ಹೋದಾಗ ಸತ್ತಿರಲಿಲ್ಲ; ಅವರು ಜೀವದಿಂದಿದ್ದರು. ಇದೇ ರೀತಿ ಯೇಸು ಕ್ರಿಸ್ತರು ಸಹ ಭೂಸಮಾಧಿಯಲ್ಲಿರಿಸಲ್ಪಟ್ಟಾಗ ಸತ್ತಿರಲಿಲ್ಲ, ಜೀವಿಸಿದ್ದರು. ತಮ್ಮನ್ನು ಯೋನ ಪ್ರವಾದಿಗೆ ಹೋಲಿಸಿ ತಾವು ರಕ್ಷೆ ಪ್ರಾಪಿಸುವ ವಿಧಾನವನ್ನು ಯೇಸು ಕ್ರಿಸ್ತರು ಸೂಚ್ಯವಾಗಿ ವ್ಯಕ್ತಗೊಳಿಸಿರುವರು. ತಾವು ಶವಕುಳೀರವನ್ನು ಜೀವಂತ ಪ್ರವೇಶಿಸಿ ಜೀವಂತ ಹೊರಗೆ ಬರುವುದಾಗಿ ಯೋನ ಪ್ರವಾದಿಯ ಉದಾಹರಣೆಯಿಂದ ವ್ಯಕ್ತಗೊಳಿಸಿರುವರು. ಯೇಸು ಕ್ರಿಸ್ತರ ಈ ಭವಿಷ್ಯ ವಾಣಿ ಅವರ ಶಾಪಗ್ರಸ್ತ ಮರಣದ ಸಿದ್ಧಾಂತಕ್ಕೆ ಮರಣಪ್ರಾಯವಾಗಿದೆ.

## 5. ಪಿಲಾತನ ಪತ್ನಿಯ ಕನಸು

"ಇದಲ್ಲದೆ ಅವನು ನ್ಯಾಯಾಸನದಲ್ಲಿ ಕೂತಿರುವಾಗ ಅವನ ಹೆಂಡತಿಯು–ನೀನು ಆ ಸತ್ಪುರುಷನ ಗೊಡವೆಗೆ ಹೋಗಬೇಡ; ಅವನ ದೆಸೆಯಿಂದ ಈ ಹೊತ್ತು ಕನಸಿನಲ್ಲಿ ಬಹಳ ತೊಂದರೆಪಟ್ಟೆನು ಎಂದು ಅವನ ಬಳಿಗೆ ಹೇಳಿ ಕಳುಹಿಸಿದಳು.''

(ಮತ್ತಾಯ 27.19)

ಪಿಲಾತನಿಗೆ ಈ ರೀತಿ ದೇವರು ಆತನ ಪತ್ನಿಯ ಮೂಲಕ ಮುನ್ನೆಚ್ಚರಿಸಿ ಯೇಸುಕ್ರಿಸ್ತರ ನಿರಪರಾಧಿತ್ವವನ್ನು ವ್ಯಕ್ತಗೊಳಿಸಿದ ಕಾರಣದಿಂದಲೇ ಪಿಲಾತನು ಯಹೂದಿಗಳು ಹೊಟ್ಟೆಕಿಚ್ಚಿನಿಂದ ಯೇಸುಕ್ರಿಸ್ತರನ್ನು ಅಪರಾಧಿಯನ್ನಾಗಿ ಮಾಡಿರುವರೆಂದು ತಿಳಿದಿದ್ದನು. (ಮತ್ತಾಯ 27:18). ಪಿಲಾತನ ಪತ್ನಿಗೆ ಈ ಕನಸನ್ನು ದೇವರು ತೋರಿಸಿದ ಪ್ರಧಾನ ಉದ್ದೇಶ ಯೇಸುಕ್ರಿಸ್ತರನ್ನು ರಕ್ಷಿಸುವುದೇ ಆಗಿದೆ. ಹೆರೋದನು ಶಿಸುಯೇಸು ಕ್ರಿಸ್ತರನ್ನು ಕೊಲ್ಲಲು ಉದ್ದೇಶಿಸಿದಾಗ ದೇವರು ಯೋಸೆಫರಿಗೆ ಕನಸಿನ ಮೂಲಕ ಮುನ್ನೆಚ್ಚರಿಸಿದುದರಿಂದ ಯೇಸುಕ್ರಿಸ್ತರನ್ನೂ ತಾಯಿಯನ್ನೂ ಯೋಸೆಫರು ಐಗುಪ್ತ ದೇಶಕ್ಕೆ ಕರೆದುಕೊಂಡು ಹೋದರು.

(ಮತ್ತಾಯ 2:13)

ಯೇಸುಕ್ರಿಸ್ತರನ್ನು ಬಿಡುಗಡೆ ಮಾಡಿದರೆ ಅರಸನಿಗೆ ದೂರು ಕೊಡುವೆವು ಎಂದು ಹೆದರಿಸಿದ ಕಾರಣ ಪಿಲಾತನು ಯೇಸುಕ್ರಿಸ್ತರನ್ನು ಯಹೂದಿಗಳಿಗೆ ಒಪ್ಪಿಸಿದನು. (ಯೊಹಾನ 19:12). ಆದರೆ ಆತನು ಗುಪ್ತವಾಗಿ ಅವರನ್ನು ರಕ್ಷಿಸಲು ಸಾಧ್ಯವಿರುವದನ್ನೆಲ್ಲಾ ಮಾಡಿದನು. ಅವರ ವಿಚಾರಣೆಯನ್ನು ದೀರ್ಘ ಮಾಡಿದನು. ಸಬ್ಬತ್ ದಿನದ ರಾತ್ರೆ ಶಿಲುಬೆಯಲ್ಲಿ ಯಾರನ್ನಾದರೂ ಇರಿಸುವುದು ಯಹೂದಿ ಧರ್ಮಕ್ಕೆ ವಿರುದ್ಧವೆಂದು ಆತನಿಗೆ ತಿಳಿದಿತ್ತು. ಶಿಲುಬೆಯಲ್ಲಿ ಯೇಸು ಕ್ರಿಸ್ತರು ಇರಬಹುದಾದ ಸಮಯವನ್ನು ಆದಷ್ಟು ಕಮ್ಮಿಗೊಳಿಸಿ ಅವರು ಶಿಲುಬೆಯಲ್ಲಿ ಮಡಿಯದಂತೆ ಜಾಗ್ರತೆ ವಹಿಸಿದನು. ಬರೇ ಮೂರು ಗಂಟೆಗಳಷ್ಟು ಸಮಯ ಮಾತ್ರ ಅವರು ಶಿಲುಬೆಯಲ್ಲಿದ್ದರು. ಇದರಿಂದ ಮರಣ ವುಂಟಾಗಲು ಸಾಧ್ಯವಿರಲಿಲ್ಲ. ಶಿಲುಬೆಗೇರಿಸಲು ನಿಯುಕ್ತನಾದ ಅಧಿಕಾರಿ ಲೂಕನ ಸುವಾರ್ತೆಯ ಪ್ರಕಾರ ಯೇಸು ಕ್ರಿಸ್ತರ ಕುರಿತು ಸದ್ಭಾವನೆಯನ್ನು ಹೊಂದಿದ್ದನು. ಇದೇ ರೀತಿ ಯೇಸು ಕ್ರಿಸ್ತರ ಜೊತೆಗೆ ಶಿಲುಬೆಗೆ ಕೊಡಲ್ಪಟ್ಟ ಕಳ್ಳರ ಎಲುಬು ಮುರಿದ ಸೈನಿಕರು ಯೇಸು ಕ್ರಿಸ್ತರ ಎಲುಬುಗಳನ್ನು ಮುರಿಯಲಿಲ್ಲ ಅಲ್ಲದೆ ಯೇಸು ಕ್ರಿಸ್ತರೊಡನೆ ಯಾವುದೇ ವ್ಯಕ್ತಿಸಂಬಂಧವಿಲ್ಲದ ಒಬ್ಬ ವ್ಯಕ್ತಿ ಅವಸರದಿಂದ ಆ ಸಮಯದಲ್ಲಿ ಪ್ರತ್ಯಕ್ಷನಾದನು. ಆ ವ್ಯಕ್ತಿ ಅರಿಮಥಾಯದ ಯೋಸೇಫನೆಂಬ ಶ್ರೀಮಂತನಾಗಿದ್ದನು. ಯೋಹಾನನ ಸುವಾರ್ತೆಯ ಪ್ರಕಾರ ಆತನು ಯಹೂದಿಗಳಿಗೆ ಭಯಪಟ್ಟು ಗುಪ್ತವಾಗಿ ಯೇಸು ಕ್ರಿಸ್ತರ ಶಿಷ್ಯನಾಗಿದ್ದನು. ಈ ಅರಿಮಥಾಯದ ಯೋಸೇಫರು ಪಿಲಾತನೊಡನೆ ಯೇಸು ಕ್ರಿಸ್ತರ ಶರೀರವನ್ನು ಅಪೇಕ್ಷಿಸಿದನು. ಆಗಿನ ಕಾಲದ ಕಟ್ಟಳೆಗಳಿಗೆ ವಿರೋಧವಾಗಿ, ಪಿಲಾತನು ಯಾವುದೇ ಪ್ರಶ್ನೆ ಕೇಳದೆ ಯೇಸು ಕ್ರಿಸ್ತರ ಶರೀರವನ್ನು ಯೋಸೇಫನಿಗೆ ಕೊಂಡುಹೋಗಲು ಅನುಮತಿಸಿದನು. ಅನಂತರ ಆತನು ಮತ್ತು ನಿಕೊದೇಮನೆಂಬ ವೈದ್ಯನು ಶರೀರವನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ಆ ಶರೀರವನ್ನು ಸಾರ್ವಜನಿಕ ಸ್ಮಶಾನದಲ್ಲಿ ಹೂಳಲಿಲ್ಲ. ಯೋಸೇಫನು ತನ್ನ ತೋಟದಲ್ಲಿ ಒಂದು ದೊಡ್ಡ ಬಂಡೆಯನ್ನು ಕೊರೆದು ಮಾಡಿದ ಸಮಾಧಿಯಲ್ಲಿ ಬಹಳ ಜಾಗ್ರತೆಯಿಂದ ಆ ಶರೀರವನ್ನು ಇರಿಸಿದನು. ಅಲ್ಲಿ ಯಹೂದಿಗಳಿಗೆ ಕಾಣದ ಹಾಗೆ (ಯಹೂದಿಗಳು ಸಬ್ಬತ್ ಹಬ್ಬದ ಉತ್ಸವದ ಆಚರಣೆಯಲ್ಲಿ ಮಗ್ನರಾಗಿದ್ದಾಗ) ಆ ಶರೀರಕ್ಕೆ ಶುಶ್ರೂಷೆ ಮಾಡಿದರು. ಯೇಸು ಕ್ರಿಸ್ತರು ಅಲ್ಲಿ ತಮ್ಮ ಗಾಯಗಳಿಂದ ಗುಣ ಹೊಂದಿ ಹೊರಗೆ ಬಂದರು. ಈ ರೀತಿ ಪಿಲಾತನು ತನ್ನ ಪತ್ನಿಯ ಮೂಲಕ ಲಭಿಸಿದ ಮುನ್ನೆಚ್ಚರಿಕೆಯ ಉದ್ದೇಶವನ್ನು ಸಫಲಗೊಳಿಸಲು ಸಹಕರಿಸಿದನು.

(ಮುಂದುವರಿಯುವುದು)

Statement about the ownership and other particulars about news paper

**YUGARASHMI**

Form IV (See Rule 8)

1. Place of Publication : Mangalore.
2. Periodicity of Publication: Quarterly.
3. Printer's Name: U. N. Srinivas Bhat
   Nationality: Indian
   Address : 62, Central Maket Mangalore
4. Publisher's Name: Muhammad Yusuf
   Nationality : Indian
   Address : 23/1008, Ansari Road, Bunder, Mangalore-1.
5. Editor's Name : Muhammad Yusuf
   Nationality : Indian
   Address : 23/1008, Ansari Road, Bunder, Mangalore-1.
6. Name and address of individuals who own the news paper and partners or share-holding more than one per cent of the total Capital: Jamath Ahmadiyya, 23/1008, Ansari Road, Bunder, Mangalore-1.

I, Muhammad Yusuf, hereby declare that the particulars given above are true to the best of my knowledge and belief.

Date: 1-4-1975.

(Sd.) **Muhammad Yusuf**

# BOOKS ON ISLAM
## AND
## CONTEMPORARY RELIGIONS

| | | | |
|---|---|---|---|
| 1. | **Holy Quran with Arabic Text and English Translation** ... | 12 | 00 |
| 2. | **Ahmadiyyat or The True Islam** ... ...<br>By Hazrat Mirza Bashiruddin Mahmud Ahmad | 8 | 00 |
| 3. | **New World Order** ... ... ...<br>By Hazrat Mirza Bashiruddin Mahmud Ahmad | 2 | 25 |
| 4. | **The Teachings of Islam** ... ... ...<br>By Hazrat Mirza Ghulam Ahmad | 6 | 00 |
| 5. | **Our Foreign Missions** ... ... ....<br>By Mirza Mubarak Ahmad | 2 | 25 |
| 6. | **Where did Jesus Die?** .... .... ...<br>By J. D. Shams | 2 | 25 |
| 7. | **The Tomb of Jesus** ... ... ....<br>By Sufi M. R. Bengali | 0 | 75 |
| 8. | **Jesus in India** ... .... ... ...<br>Mirza Ghulam Ahmad | 2 | 25 |
| 9. | **The Christian Doctrine of Atonement** ...<br>By Dr. Mufti Muhammed Sadiq | 1 | 50 |
| 10. | **An Interpretation of Islam** ... ....<br>By Prof. Dr. Laura Veccia Vaglieri | 1 | 50 |

Write to:

**Nazir Dawat-o-Tabligh**
**P. O. QADIAN - 143516**
(Punjab)

Printed: by U. N. Srinivas Bhat, at Aruna Press, Dongerkery Mangalore and Edited and Published by Muhammad Yusuf on behalf of Jamath Ahamadiyya Mangalore at 23/1008 Ansari Road, Bunder, Mangalore—575001. (date of publication 21—4—1975)